ಮೇ
2026

ಸಂಪುಟ 41
ಸಂಚಿಕೆ 5

ಪ್ರಸಾದ

ಮಾಸಿಕ



ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್ಎಸ್ ಗ್ರಂಥಮಾಲೆಯಿಂದ ಪ್ರಕಟಿಸಿದ ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಡಾ ಸುಜಾತ ಸ್ವಾಮಿ, ಡಾ. ಎ.ಎಸ್. ಕಿರಣ್ ಕುಮಾರ್, ಡಾ. ಮಾನಸ, ಡಾ. ಸಿ. ನಾಗಣ್ಣ ಹಾಗೂ ಶ್ರೀ ಜಿ. ಜಗದೀಶ್‌ರವರುಗಳಿದ್ದಾರೆ (2 ಮೇ 2026)

ಪ್ರಸಾದ

ಸಂಪುಟ 41 : ಸಂಚಿಕೆ 5 ಮೇ 2026

ಡಾ. ಎಂ.ಎನ್. ನಂದೀಶ್ ಹಂಚೆ
ಸಂಪಾದಕರು

ಜೆಎಸ್ಎಸ್ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49



ಸಂಸ್ಥಾಪಕರು

ಶ್ರೀಮನ್ಮಹಾರಾಜ ರಾಜಗುರುತಿಲಕ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಅಧ್ಯಕ್ಷರು

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು

ಸಂಪಾದಕ ಸಲಹಾ ಸಮಿತಿ

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

ಸಂಪಾದಕ ಸಮಿತಿ

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್‌ರವರು ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ವಿಷಯ ಕುರಿತು ಮಾತನಾಡಿದರು. (7 ಮೇ 2026)

ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-

ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಹಂಸಧ್ಯಾನ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಮಾತೃಹೃದಯಿ 15
ಶ್ರೀಮತಿ ಜಗದಾಂಬಾ ಮಲ್ಲೇದೇವರು

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ 19
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ರೇಚಣ್ಣ ಶರಣರ ವಚನ–ನಿರ್ವಚನ 24
ಪ್ರಕಾಶ ಗಿರಿಮಲ್ಲನವರ

ಶರಣ ಸಂಸ್ಕೃತಿಯ ಲಾಂಛನಗಳು 34
ಡಾ. ಎನ್.ಎಂ. ಗಿರಿಜಾಪತಿ

ಸೀಮಾತೀತ ವ್ಯಕ್ತಿತ್ವದ ಅಕ್ಕ 40
ಸಿ.ಎಸ್. ರಾಘವೇಂದ್ರ

'ಅಂತರಂಗದ ಅನಾವರಣ' ಕೃತಿ 46
ನಗರ್ಲೆ ಶಿವಕುಮಾರ

ವಾರ್ತಾವಿಹಾರ 50
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ಆಶಾ ನ ಜೀರ್ಣಾ ವಯಮೇವ ಜೀರ್ಣಾಃ

ಎನ್ನ ಆತ್ಮನದೊಂದು ಅರಸುತನದಲ್ಲಿ ನ್ಯಾಯವೆ ಕೇಳಯ್ಯ ಗುರುವೆ –
ಪಂಚಭಕ್ಷ್ಯ ಪರಮಾಮೃತವ ಸದಾ ದಣಿಯಲುಂಡು
ಒಂದು ದಿನ ಸವಿಯೂಟ ತಪ್ಪಿದರೆ –
ಹಲವ ಹಂಬಲಿಸಿ ಹಲುಗಿರಿದು
ಎನ್ನ ಕೊಂದು ಕೂಗುತ್ತಿದೆ ನೋಡಾ –
ಶ್ವಪಚನ ಉತ್ತಮನ ಕೂಡೆ ಸಂಕಲೆಯನಿಕ್ಕುವರೆ ಅಯ್ಯ!

ಕಲಸಿ ಕಲಸಿ ಕೈಬೆರಲು ಮೊಂಡಾದವು
ಅಗಿದಗಿದು ಹಲ್ಲು ಚಪ್ಪಟನಾದವು.
ಉಂಡುಂಡು ಬಾಯಿ ಜಡ್ಡಾಯಿತು
ಹೇತು ಹೇತು ಮುಕುಳಿ ಮುರುಟುಗಟ್ಟಿತು
ಸ್ತ್ರೀಯರ ಕೂಡಿ ಕೂಡಿ ಶಿಶ್ನ ಸವೆದುಹೋಯಿತು
ತನು ಹಳದಾಗಿ ಅಲ್ಲಲ್ಲಿಗೆ ಕಣ್ಣು ಪಟ್ಟಿತು –
ಮನ ಹೊಸದಾಗಿ ಹನ್ನೆರಡು ವರ್ಷದ ರಾಜಕುಮಾರನಾದನು !

ಇನ್ನೇವೆನಿನ್ನೇವೆನಯ್ಯ –
ಎನ್ನ ಕೇಡಿಂಗೆ ಕಡೆಯಿಲ್ಲ –
ಕಾಯವಿಕಾರವೆಂಬ ಕತ್ತಲೆ ಕವಿಯಿತು,
ಮನೋವಿಕಾರವೆಂಬ ಮಾಯೆ ಸೆರೆವಿಡಿದಳು,
ಇಂದ್ರಿಯವಿಕಾರವೆಂಬ ಹುಚ್ಚುನಾಯಿಗಳು ಕಚ್ಚಿ ಕಚ್ಚಿ ಒದರುತ್ತಿವೆ,
ಕಾಮವಿಕಾರವೆಂಬ ಕಾಳರಕ್ಕಸಿ ಅಗಿದಗಿದು ನುಂಗುತಿಹಳು
ಕಾಯಲಾಗದೇ ದೇವ ? ಸಾವನ್ನಬರ ಸರಸವುಂಟೇ ಲಿಂಗಯ್ಯ ?!

ಅನ್ಯ ಸಮಯದ ಗುಮ್ಮಟನ ಕೈವಿಡಿದೆತ್ತಿಕೊಂಡೆ
ನಿನ್ನ ಸಮಯದ ಶಿಶು ಬಾವಿಯಲ್ಲಿ ಬೀಳ್ವುದ ನೋಡುತಿಪ್ಪಿರೇ ಕರುಣೆ ?
ಮುಕ್ತಿಗಿದೇ ಪಯಣವೋ ತಂದೆ ?

ನೀನಿಕ್ಕಿದ ಮಾಯಾಸೂತ್ರಮಂ ಹರಿದು
ದಶೇಂದ್ರಿಯಂಗಳ ಗುಣವ ನಿವೃತ್ತಿಯಂ ಮಾಡಿ
ಅಂಗಭೋಗ–ಆತ್ಮಭೋಗಂಗಳನಡಗಿಸಿ
ಲಿಂಗದೊಳು ಮನವ ನೆಲೆಗೊಳಿಸಿ –
ಎನ್ನ ಪಟದೊಳಗಣ ಚಿತ್ರದಂತೆ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ !

– ಘನಲಿಂಗಿದೇವರು

ಗುರುವಾಣಿ

ನ ಕಶ್ಚಿತ್ ಕಸ್ಯಚಿನ್ಮಿತ್ರಂ ನ ಕಶ್ಚಿತ್ ಕಸ್ಯಚಿದ್ರಿಪುಃ ।
ವ್ಯವಹಾರೇಣ ಜಾಯಂತೇ ಮಿತ್ರಾಣಿ ರಿಪವಸ್ತಥಾ ॥

"ಯಾರೂ ಸದಾಕಾಲ ಮಿತ್ರರೂ ಅಲ್ಲ, ಶತ್ರುಗಳೂ ಅಲ್ಲ". ಏಕೆಂದರೆ, ಕಾರ್ಯ ಮತ್ತು ಸಂದರ್ಭಗಳಿಂದಾಗಿ ಜನರು ಮಿತ್ರರೂ, ಶತ್ರುಗಳೂ ಆಗುತ್ತಾರೆ. ಈ ಮಾತು ಜಗತ್ತಿನ ಇತಿಹಾಸವನ್ನು ನೋಡಿದಾಗ ಸಾಮಾನ್ಯವಾಗಿ ಗೋಚರಿಸುವ ಸಂಗತಿ. ಈ ಜಗತ್ತಿನಲ್ಲಿ ಯಾವುದೂ ಹೇಗೆ ಶಾಶ್ವತವಲ್ಲವೋ ಹಾಗೆಯೇ ಮನುಷ್ಯನ ಸ್ವಭಾವದಲ್ಲಿ ಕೂಡ ಯಾವುದೂ ಸ್ಥಾಯಿಯಾಗಿರುವುದಿಲ್ಲ. ಭಾರತೀಯ ಕಾವ್ಯಮೀಮಾಂಸಕರಲ್ಲೊಬ್ಬನಾದ ಭರತ ಮುನಿಯು ಹೇಳುವಂತೆ "ಸಂಚಾರೀಭಾವವೇ" ಮನುಷ್ಯರಲ್ಲಿ ಹೆಚ್ಚಾಗಿರುತ್ತದೆ. ಅಂದರೆ, ಯಾವುದೇ ಭೌತಿಕ ವಸ್ತುವಾಗಲಿ ಅಥವಾ ಬೌದ್ಧಿಕ ಸ್ವಭಾವಗಳಾಗಲಿ ಚಿರಸ್ಥಾಯಿಯಾಗಿ ಇರಲು ಸಾಧ್ಯವಿಲ್ಲ. ಆದುದರಿಂದಲೇ, ಗೌತಮ ಬುದ್ಧರು "ಹರಿಯುವ ನದಿಯ ನೀರಿನಲ್ಲಿ ಒಮ್ಮೆ ಮಾತ್ರ ಕಾಲಿಡಬಹುದು, ಎರಡನೇ ಬಾರಿ ಅದು ಸಾಧ್ಯವಿಲ್ಲ" ಎಂದರು. ಏಕೆಂದರೆ ನದಿಯಲ್ಲಿ ನೀರು ಹರಿದುಹೋಗುತ್ತದೆ. ಹಾಗೆಯೇ ಕಾಲ ಕೂಡ. ಒಮ್ಮೆ ಜೀವನದಲ್ಲಿ ಬರುವ ವರ್ತಮಾನ ಕ್ಷಣಕಾಲದಲ್ಲಿಯೇ ಭೂತವಾಗುತ್ತದೆ. ಭೂತಭವಿಷ್ಯಗಳ ತಾಕಲಾಟದಲ್ಲಿ ವರ್ತಮಾನ ಕಳೆದುಹೋಗುತ್ತದೆ. ನಮಗೆ ವರ್ತಮಾನದಲ್ಲಿ ಬದುಕುವ, ಬದುಕನ್ನು ಸವಿಯುವ ಕಲೆಯೇ ತಿಳಿದಿಲ್ಲವೆನಿಸುತ್ತದೆ. ಇತರರೊಂದಿಗೆ ಸಹಬಾಳ್ವೆ ನಡೆಸುವುದು ಎಷ್ಟು ಮುಖ್ಯವೋ ಹಾಗೆಯೇ ಬದುಕನ್ನು ಸ್ವತಃ ಸವಿಯುವುದು ಕೂಡ ಅಷ್ಟೇ ಮಹತ್ವದ್ದು.

ಶತ್ರುತ್ವ ಅಥವಾ ಮಿತ್ರತ್ವ ಎನ್ನುವುದು ಕಾಲ ಮತ್ತು ಸಂದರ್ಭಗಳ ಪರಿಮಿತಿಗೆ ಸಿಲುಕುವಂಥದು. ಉದಾಹರಣೆಗೆ, ಸೂರ್ಯನಿಗೆ ಇರುವ ಹೆಸರುಗಳಲ್ಲಿ 'ಮಿತ್ರ' ಎಂಬ ಹೆಸರೂ ಒಂದು. ತಾವರೆಗೆ "ಸೂರ್ಯಮಿತ್ರ" ಎನ್ನಲಾಗುತ್ತದೆ. ಸೂರ್ಯ ಮೂಡಿದಾಗ ತಾವರೆ ಅರಳುತ್ತದೆ. ಸೂರ್ಯ ಮುಳುಗಿದರೆ ಮುದುಡುತ್ತದೆ. ಸೂರ್ಯ ಹಾಗೂ ತಾವರೆಗಳ ನಡುವೆ ಅಷ್ಟೊಂದು ಅನ್ಯೋನ್ಯ ಸಂಬಂಧ. ತಾವರೆ ನೀರಿನಲ್ಲಿರುವವರೆಗೆ ಮಾತ್ರ ಸೂರ್ಯ ಅದಕ್ಕೆ ಮಿತ್ರನಾಗಿರುತ್ತಾನೆ. ಆದರೆ ತಾವರೆಯನ್ನು ನೀರಿನಿಂದ ಕಿತ್ತು ಹೊರಗೆ ತಂದರೆ ಆಗ ಸೂರ್ಯನೇ ಅದರ ಪಾಲಿನ ಶತ್ರುವಾಗುತ್ತಾನೆ. ಅಂದರೆ, ಒಬ್ಬನೇ ಸೂರ್ಯ ಸಂದರ್ಭಾನುಸಾರ ಮಿತ್ರನೂ, ಶತ್ರುವೂ ಆಗುವುದನ್ನು ಇಲ್ಲಿ ನೋಡಬಹುದು.

ಕಾಲ ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ ವ್ಯಕ್ತಿಯ ಅಗತ್ಯ ಮತ್ತು ಹಿತಾಸಕ್ತಿಗಳು ಕೂಡ ಮಿತ್ರತ್ವ ಮತ್ತು ಶತ್ರುತ್ವಗಳನ್ನು ನಿಯಂತ್ರಿಸುತ್ತವೆ. ಕಾಲ ತಂದೊಡ್ಡುವ ಸಂಕೀರ್ಣ ಸಂದರ್ಭಗಳು ಅನೇಕ ಬಾರಿ ನಿಯಂತ್ರಣಕ್ಕೆ ಸಿಕ್ಕುವುದಿಲ್ಲ. ಆದರೆ ಅಗತ್ಯತೆ ಮತ್ತು ಹಿತಾಸಕ್ತಿಗಳು ಅವರವರ ವೈಯಕ್ತಿಕ ಅಭಿಪ್ರಾಯದ ಮೇಲೆ ನಿಂತಿರುತ್ತವೆ. ಹೀಗೆ ಮಿತ್ರತ್ವ ಮತ್ತು ಶತ್ರುತ್ವದ ಭಾವನೆಗಳು ರಾಜಕೀಯ, ಸಾಮಾಜಿಕ, ಆರ್ಥಿಕ, ಹಾಗೂ ವೈಯಕ್ತಿಕ ಜೀವನ – ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿರುತ್ತವೆ.

ಮನುಷ್ಯ ಮೂಲತಃ ಸಮಾಜಜೀವಿ. ಆದುದರಿಂದ ತನ್ನ ಬದುಕನ್ನು ಸುಗಮವಾಗಿಸಿಕೊಳ್ಳಲು ಆತ ಇತರರೊಂದಿಗೆ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾನೆ. ಆದರೆ ಈ ಸಂಬಂಧಗಳು ಯಾವಾಗಲೂ ಒಂದೇ ರೀತಿಯಲ್ಲಿರುವುದಿಲ್ಲ, ಶಾಶ್ವತವಾಗಿ ಉಳಿಯುವುದಿಲ್ಲ. ಒಮ್ಮೆ ಅತ್ಯಂತ ಆತ್ಮೀಯರಾಗಿದ್ದವರು ಕೆಲ ಕಾಲದ ಬಳಿಕ ವಿರೋಧಿಗಳಾಗಬಹುದು; ಹಾಗೆಯೇ ಹಿಂದೆ ವೈರಿಗಳಾಗಿದ್ದವರು ಮುಂದೊಂದು ದಿನ ಆಪ್ತ ಸ್ನೇಹಿತರೂ ಆಗಬಹುದು. ಉದಾಹರಣೆಗೆ, ಮೊದಲನೆಯ ಮಹಾಯುದ್ಧದಲ್ಲಿ ಸ್ನೇಹಿತರಾಗಿದ್ದ ರಾಷ್ಟ್ರಗಳು ಎರಡನೆಯ ಮಹಾಯುದ್ಧದಲ್ಲಿ ಶತ್ರುಗಳಾದುವು. ಮೊದಲನೆಯ ಮಹಾಯುದ್ಧದಲ್ಲಿ ಜರ್ಮನಿಯ ಜತೆಗಿದ್ದ ಆಸ್ಟ್ರಿಯಾ ದೇಶವನ್ನು ಎರಡನೆಯ ಮಹಾಯುದ್ಧದಲ್ಲಿ ಸ್ವತಃ ಜರ್ಮನಿಯೇ ವಶಪಡಿಸಿಕೊಂಡಿತು. ಇದು ಸ್ವಂತ ಹಿತಾಸಕ್ತಿ ಮತ್ತು ಅಗತ್ಯತೆಗಳ ಸಂಘರ್ಷದ ಫಲ. ಜರ್ಮನಿಗೆ ರಾಜ್ಯವಿಸ್ತರಣೆಯ ಹಿತಾಸಕ್ತಿ ಮತ್ತು ಅಗತ್ಯತೆ ಆಗ ಮುಖ್ಯವಾಯಿತು. ಅಂತೆಯೇ ಮಿತ್ರರಾಷ್ಟ್ರಗಳಾಗಿದ್ದ ಅಮೆರಿಕ ಮತ್ತು ಬ್ರಿಟನ್ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಫ್ರಾನ್ಸನ್ನು ನಿರ್ಲಕ್ಷಿಸಿದವು. ಇವು ರಾಷ್ಟ್ರಗಳನ್ನು ಆಳುವ ರಾಜಕಾರಣಿಗಳ ಸಹಜ ಸ್ವಭಾವಸಿದ್ಧವಾದ ಸಂಚಾರೀಭಾವಗಳು.

ಇಂಥ ಹಿತಾಸಕ್ತಿ ಮತ್ತು ಅಗತ್ಯತೆಗಳು ಎಲ್ಲರ ಬದುಕಿನಲ್ಲಿಯೂ ತಲೆದೋರುತ್ತವೆ. ಆಗ ಪ್ರತಿಯೊಬ್ಬರೂ ತಮ್ಮ ಅನುಕೂಲತೆಯನ್ನು ಅವಲಂಬಿಸಿ ಸ್ನೇಹ ಮತ್ತು ವೈರವನ್ನು ಬೆಳೆಸಿಕೊಳ್ಳುತ್ತಾರೆ. ಇದೇ ಲೋಕದ ರೂಢಿಗತ ನೀತಿ. ಜ್ಞಾನಿಗಳಾದವರು ಮಾತ್ರ ಈ ಕಾಲ ಮತ್ತು ಸಂದರ್ಭ, ಹಿತಾಸಕ್ತಿ ಮತ್ತು ಅಗತ್ಯತೆಗಳನ್ನು ಮೀರಿ ನಿಲ್ಲಬಲ್ಲರು. ಇದೊಂದು ಬಗೆಯಲ್ಲಿ ಕಾಲವನ್ನು ಮೀರುವ ಪರಿ. ಕಾಲದೊಡನಿದ್ದೂ ಕಾಲಾತೀತನಾಗುವ ರೀತಿ. ಆಗ ಮಾತ್ರ ನಿಜವಾದ ಆತ್ಮಸಂತೋಷ ಲಭಿಸುತ್ತದೆ, ಶಾಂತಿ ನೆಲೆಸುತ್ತದೆ. ಆದುದರಿಂದಲೇ ಜಗತ್ತು ಎಲ್ಲ ಕಾಲಕ್ಕೂ ಜ್ಞಾನಿಗಳನ್ನು ಮಾತ್ರ ಸ್ಮರಿಸುತ್ತದೆ. ಇದನ್ನು ಅರಿತು ಬಾಳಿದರೆ ಜನ್ಮ ಸಾರ್ಥಕವಾದೀತು.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಸಂಪಾದಕೀಯ

ಸರಕಾರ ಹರಿಗೋಲು, ತೆರೆಸುಳಿಗಳತ್ತಿತ್ತ ।
ಸುರೆ ಕುಡಿದವರು ಕೆಲರು ಹುಟ್ಟು ಹಾಕುವರು ॥
ಬಿರುಗಾಳಿ ಬೀಸುವುದು ಜನವೆದ್ದು ಕುಣಿಯುವುದು ।
ಉರುಳದಿಹುದಚ್ಚರಿಯೊ! – ಮಂಕುತಿಮ್ಮ ॥

ಈ ಕಗ್ಗದ ಸಾಮಾನ್ಯ ಭಾವಾರ್ಥವೆಂದರೆ "ಸರ್ಕಾರ ನೀರಿನಲ್ಲಿ ತೇಲುವ ದೋಣಿಯ ಹಾಗೆ. ಇದರ ಹುಟ್ಟು ಹಾಕುವವರು, ಮುನ್ನಡೆಸುವ ಹೊಣೆಗಾರಿಕೆ ಹೊತ್ತವರು ಸುರೆ (ಹೆಂಡ) ಕುಡಿದಿದ್ದಾರೆ. ಹರಿಗೋಲಿನ ಚುಕ್ಕಾಣಿ ಹಿಡಿದವರು ಅರೆಪ್ರಜ್ಞಾವಸ್ಥೆಯಲ್ಲಿಯೂ, ಅಮಲಿನಲ್ಲಿಯೂ, ಮತ್ತಿನಲ್ಲಿಯೂ ಇದ್ದಾರೆ. ನದಿ ದಾಟಲು ಬಯಸಿದ ಅಮಾಯಕ ಜನ ದೋಣಿಯನ್ನೇರಿದ್ದಾರೆ. ಬಿರುಗಾಳಿ ಬೀಸುತ್ತಿದೆ. ಜನ ಗಾಬರಿಯಾಗಿ ದೋಣಿಯಲ್ಲಿಯೇ ಎದ್ದೆದ್ದು ಕುಣಿಯುತ್ತಿದ್ದಾರೆ. ಆದರೂ ದೋಣಿ ಉರುಳಿಬೀಳದೆ ಇದೆ. ಇದೊಂದು ಆಶ್ಚರ್ಯ ಎನ್ನುತ್ತಾರೆ ಡಿವಿಜಿ.

ಹೆಂಡ ಕುಡಿದ ಜನರು ದೋಣಿಯನ್ನು ಸರಿಯಾಗಿ ಮುನ್ನಡೆಸುತ್ತಿಲ್ಲ. ಅವರಿಗೆ ಮೈಮೇಲೆ ಪ್ರಜ್ಞೆ ಇಲ್ಲ. ಅದೂ ಅಲ್ಲದೆ ಬಿರುಗಾಳಿ ಬೇರೆ ಬೀಸುತ್ತಿದೆ. ಜನರು ದೋಣಿಯಲ್ಲಿ ಆತಂಕದಿಂದ ಕುಣಿಯುತ್ತಿದ್ದಾರೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ದೋಣಿ ಮುನ್ನಡೆಯುವುದಿರಲಿ, ನಿಂತಲ್ಲೇ ಮುಳುಗಿ ಹೋಗಬೇಕು. ಆದರೂ ಏಕೆ ಹಾಗೆ ಆಗಿಲ್ಲ, ಇದೊಂದು ದೈವಲೀಲೆ ಎಂದು ಡಿವಿಜಿಯವರು ಪರೋಕ್ಷವಾಗಿ ಹೇಳುತ್ತಿದ್ದಾರೆ. ಯಾವುದೇ ಸಾಹಿತ್ಯ ಕೃತಿ ಸರ್ವಕಾಲಕ್ಕೂ ಪ್ರಸ್ತುತವಾಗುವುದೇ ಅದರ ಶ್ರೇಷ್ಠತೆಯ ಲಕ್ಷಣ. ಆ ದೃಷ್ಟಿಯಿಂದ 'ಮಂಕುತಿಮ್ಮನ ಕಗ್ಗ' ನಿಸ್ಸಂದೇಹವಾಗಿ ಒಂದು ಶ್ರೇಷ್ಠ ಕೃತಿ.

ಇಂದು ಕೂಡ ನಮ್ಮ ಸರಕಾರಗಳನ್ನು ಮುನ್ನಡೆಸುವವರು ಕುಡಿದ ಅಮಲಿನ ಸ್ಥಿತಿಯಲ್ಲಿಯೇ ಇದ್ದಾರೆ. ಕೆಲವರು ನಿದ್ರಿಸುವ ಹಾಗೆ ನಟಿಸುತ್ತಿದ್ದಾರೆ. ಮತ್ತೆ ಕೆಲವರು ಸರ್ಕಾರವನ್ನು ಮುನ್ನಡೆಸುವ ಆಟವಾಡುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ನಾಯಕರನ್ನು ಆಯ್ಕೆ ಮಾಡಿದ್ದು ಶ್ರೀಸಾಮಾನ್ಯರೇ ತಾನೆ ಎಂದರೆ, ಅದಕ್ಕೆ ಉತ್ತರ 'ಹೌದು' ಎಂಬುದೆ. ಆದರೆ ಮತದಾರನ ಮುಂದೆ ಬರೀ ಕತ್ತೆಗಳೇ ಇದ್ದಾಗ ಅವನು ಕತ್ತೆಗಳ ನಡುವೆ ಕುದುರೆಯ ಮಾದರಿಯನ್ನು ಕಷ್ಟಪಟ್ಟು ಹುಡುಕಬಹುದು, ಅಷ್ಟೆ. ಅಂದರೆ, ಇಂದು ಶ್ರೀಸಾಮಾನ್ಯನೂ ಕೂಡ ಭ್ರಷ್ಟನಾಗಿದ್ದಾನೆ. ಅವನ ಬಡತನದೊಡನೆ

ಚಲ್ಲಾಟವಾಡುತ್ತಿರುವ ವ್ಯವಸ್ಥೆಯು ಅವನನ್ನು ಭ್ರಷ್ಟನನ್ನಾಗಿ ಮಾಡಿದೆ. ಹಣ ಪಡೆದು ಮತ ಚಲಾಯಿಸುವ ಅವನಿಗೆ, ಒಂದು ದಿನ ತಾನು ಹಣ ಪಡೆಯುವ ಸಂತೋಷಕ್ಕೆ ಬದುಕಿನ ಹರ್ಷವೆಲ್ಲವೂ ತಪ್ಪಿಹೋಗುತ್ತದೆ ಎಂಬ ಕಠೋರ ವಾಸ್ತವದ ಅರಿವಿಲ್ಲ. ನಮ್ಮಲ್ಲಿ ಪ್ರತಿಯೊಬ್ಬನೂ ಕೂಡ ಸಾಮುದಾಯಿಕವಾಗಿ ಭ್ರಷ್ಟತೆಯನ್ನು ವಿರೋಧಿಸುತ್ತಾನೆ. ಆದರೆ ವೈಯಕ್ತಿಕವಾಗಿ ಭ್ರಷ್ಟನೇ ಆಗಿರುತ್ತಾನೆ. ತನ್ನ ಕಾರ್ಯಸಾಧನೆಗೋಸ್ಕರ ಯಾವ ವಾಮಮಾರ್ಗವನ್ನು ಬೇಕಾದರೂ ಅನುಸರಿಸುತ್ತಾನೆ. ಹಾಗೆಯೇ ಸಾರ್ವಜನಿಕ ಸೇವಾವಲಯದ ಬಗ್ಗೆ ಯಾರಿಗೂ ಆಸಕ್ತಿಯೇ ಇಲ್ಲವಾಗಿದೆ. ರಸ್ತೆಯಲ್ಲಿನ ಗುಂಡಿಗೆ ಯಾರಾದರೂ ಬಿದ್ದು ಸತ್ತಾಗಲೋ, ಕುಡಿಯುವ ನೀರಿನ ಅಭಾವ ಸೃಷ್ಟಿಯಾದಾಗಲೋ, ಸಾಂಕ್ರಾಮಿಕ ರೋಗದಿಂದ ಜನರು ಸತ್ತಾಗಲೋ ಆಕ್ರೋಶ ವ್ಯಕ್ತಪಡಿಸುವಾಗ ಕೂಡ ನಾವು ಅದನ್ನು ಕೇವಲ ಅಭಾವವೈರಾಗ್ಯದಂತೆ ನಿರ್ಲಿಪ್ತರಾಗಿ ಕಾಣುತ್ತೇವೆ.

ವೇಗವಾಗಿ ನಡೆಯುತ್ತಿರುವ ಸಾರ್ವಜನಿಕ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಪ್ರಗತಿ ಅಡಗಿದೆ ಎಂಬ ಪರಿಕಲ್ಪನೆಯೇ ನಾಶವಾಗಿದೆ. ಅದರ ಜಾಗದಲ್ಲಿ ವ್ಯಕ್ತಿಯು ತಾನು ಅಭಿವೃದ್ಧಿ ಹೊಂದಿದರೆ ಸಾಕು, ಎಲ್ಲರೂ ಅಭಿವೃದ್ಧಿ ಹೊಂದಿದಂತೆ ಎಂಬ ಭ್ರಮೆಯಲ್ಲಿ ಬದುಕುತ್ತಿದ್ದಾನೆ. ಇಂತಹ ವೈಯಕ್ತಿಕ ಹಿತಾಸಕ್ತಿಯಲ್ಲಿ ಮುಳುಗಿರುವವನು ತನ್ನ ಸ್ವಾರ್ಥವನ್ನು ಸಾಧಿಸುವಂಥ ಕೆಲಸವನ್ನು ಮಾತ್ರ ಮಾಡುತ್ತಾನೆ. ನಮ್ಮಿಂದ ಚುನಾಯಿತರಾದ ಎಲ್ಲ ನಾಯಕರಿಗೂ ತಾವು ಸಾರ್ವತ್ರಿಕ ಕಾರ್ಯಗಳನ್ನು ಮಾಡುವುದಕ್ಕಿಂತಲೂ ಸ್ವಂತ ಲಾಭವನ್ನು ಮಾಡಿಕೊಂಡರೆ ಸಾಕು ಎಂಬ ಭಾವನೆ ಬಂದುಬಿಟ್ಟಿದೆ. ಆದುದರಿಂದಲೇ ಕಳೆದ ಹಲವು ದಶಕಗಳನ್ನು ಗಮನಿಸಿದರೆ, ದೇಶದ ಪ್ರಗತಿಗಿಂತಲೂ ಕೆಲವೇ ಜನರ ವೈಯಕ್ತಿಕ ಪ್ರಗತಿ ಆಗಿರುವುದನ್ನು ಕಾಣುತ್ತೇವೆ. ವ್ಯಕ್ತಿಗಳ ತಲಾ ಆದಾಯವನ್ನೇ ಪ್ರಗತಿ ಎಂದು ಭ್ರಮಿಸಿದ್ದೇವೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಸಾರ್ವಜನಿಕ ವಲಯದ ಕೈಗಾರಿಕೆಗಳು ಸಂಪೂರ್ಣವಾಗಿ ಅವನತಿ ಹೊಂದಿವೆ. ಕೇವಲ ರಕ್ಷಣಾ ಇಲಾಖೆಯ ಕೈಗಾರಿಕೆಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಈಗ ರಕ್ಷಣಾ ವಲಯಕ್ಕೆ ಕೂಡ ಖಾಸಗೀಕರಣದ ಪ್ರವೇಶ ಆಗುತ್ತಿರುವುದು ಆತಂಕಕಾರಿ ಬೆಳವಣಿಗೆ.

ಪ್ರಜಾಪ್ರಭುತ್ವದ ಬಗ್ಗೆ ಬಣ್ಣಬಣ್ಣವಾಗಿ ಮಾತನಾಡುವ ಜನರಿಗೆ ಸಮಾಜವಾದ ಎಂಬುದು ಗುಗ್ಗರಿಯ ನಡುವೆ ಇರುವ ಕಲ್ಲಿನಂತೆ ಕಾಣುತ್ತಿದೆ. ಆದರೆ ಪ್ರಜಾಪ್ರಭುತ್ವಕ್ಕೆ ಆಗುತ್ತಿರುವ ವಿದ್ರೋಹವನ್ನು, ಸಾಮಾಜಿಕ ಟೊಳ್ಳುತನದ ವಿರುದ್ಧವಾಗಿ ಯಾರೂ ಮಾತನಾಡುತ್ತಿಲ್ಲ. ಪ್ರಜಾಪ್ರಭುತ್ವಕ್ಕೆ ನಿಜವಾದ ಬೆಲೆ ಇದ್ದದ್ದು ಪ್ರಾಚೀನ ಕಾಲದಲ್ಲಿದ್ದ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಂಬುದರ ಅರಿವೂ ಇಂದಿನ ಬಹುತೇಕ ಜನರಿಗಿಲ್ಲ. ಶ್ರೀಕೃಷ್ಣನ ಕಾಲದಲ್ಲಿ ಇದ್ದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜನಾದವನು

ಶ್ರೀಸಾಮಾನ್ಯರ ಅಭಿಪ್ರಾಯವನ್ನು ಕೇಳಿಯೇ ಮುನ್ನಡೆಯಬೇಕಾಗಿತ್ತು. ಶ್ರೀಕೃಷ್ಣನು ಎಷ್ಟೇ ಸಮರ್ಥನಾಗಿದ್ದರೂ, ಬಲರಾಮನು ಎಷ್ಟೇ ಬಲಶಾಲಿಯಾದರೂ, ಅವರುಗಳು ಕೊನೆಯವರೆಗೂ ರಾಜರಾಗಲೇ ಇಲ್ಲ. ಹಾಗೆಯೇ, ಭಗವಾನ್ ಬುದ್ಧನ ಪಾಲಿಗೆ "ಸಂಘ"ವೇ ಸರ್ವಸ್ವವಾಗಿತ್ತು. ಆದರೆ ಇಂದು ನಮ್ಮ ಭಾರತೀಯ ಪ್ರಜಾಪ್ರಭುತ್ವಕ್ಕೆ ಬ್ರಿಟನ್ ಮತ್ತು ಅಮೆರಿಕ ದೇಶಗಳು ಮಾದರಿಯಾಗಿವೆ. ದುರಂತದ ಸಂಗತಿಯೆಂದರೆ ಈ ಎರಡು ದೇಶಗಳ ಪ್ರಭುತ್ವವನ್ನೂ ನಿಯಂತ್ರಿಸುತ್ತಿರುವವರು ಬಂಡವಾಳಶಾಹಿಗಳು. ಹಾಗೆಯೇ ಭಾರತದಲ್ಲಿ ಇರುವುದೂ ಇಂತಹ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ರಕ್ಷಿಸುವ ಪ್ರಭುತ್ವ ಮಾತ್ರ. ದುರ್ದೈವದ ವಿಷಯವೆಂದರೆ, ಇದು ಆರಂಭವಾದದ್ದು ಪಂ. ನೆಹರೂ ಅವರ ಕಾಲದಲ್ಲಿಯೇ; ಅದು ಈಗಲೂ ಮುಂದುವರೆಯುತ್ತಿದೆ ಅಷ್ಟೆ. ಈ ಬಂಡವಾಳಶಾಹಿ ಪ್ರಜಾಪ್ರಭುತ್ವವೇ ನಮ್ಮ ಶಿಕ್ಷಣನೀತಿಯನ್ನು, ಜೀವನಪದ್ಧತಿಯನ್ನು, ಆಲೋಚನಾಕ್ರಮವನ್ನು, ನೈತಿಕತೆಯ ದಾರಿಯನ್ನು ನಿಯಂತ್ರಿಸುತ್ತಿರುವುದು ಒಂದು ಐತಿಹಾಸಿಕ ದುರಂತ. ಇಂದು ನಗರಜೀವನವು ಹಳ್ಳಿಯ ಜೀವನಕ್ಕಿಂತ ಶ್ರೇಷ್ಠವೆಂದು ಈ ಚಿಂತನೆ ಹೇಳಿಕೊಡುತ್ತದೆ. ಬಡತನವೆಂಬುದು ಅಸಹ್ಯ, ಶ್ರೀಮಂತಿಕೆ ಆಕರ್ಷಕ ಎನ್ನುತ್ತದೆ. ರೈತನಿಗಿಂತಲೂ ನೌಕರನೇ ಉತ್ತಮವೆನ್ನುತ್ತದೆ.

ಕಲೆಗಿಂತ ವಿಜ್ಞಾನ, ವಿಜ್ಞಾನಕ್ಕಿಂತ ವಾಣಿಜ್ಯ ಅಧ್ಯಯನ ಶ್ರೇಷ್ಠವೆಂದು ಇಂದಿನ ಶಿಕ್ಷಣ ಪದ್ಧತಿಯೇ ತರತಮಗಳನ್ನು ಸೃಷ್ಟಿಸುತ್ತಿರುವುದು ಅಪಾಯಕಾರಿ. ಜನತೆ ಮತ್ತು ಪ್ರಭುತ್ವ ಈಗಲಾದರೂ ಸರಿದಾರಿಯಲ್ಲಿ ಚಿಂತಿಸಿ ಮುನ್ನಡೆಯಬೇಕಾಗಿದೆ.

ಡಾ. ಎಂ.ಎನ್. ನಂದೀಶ್ ಹಂಚೆ

ಎನ್ನ ಮಸ್ತಕದಲ್ಲಿ ಹಕಾರವಾಗಿದ್ದಾತ ಪ್ರಭುದೇವ
ಎನ್ನ ಲಲಾಟದಲ್ಲಿ ಓಂಕಾರವಾಗಿದ್ದಾತ ಚೆನ್ನಬಸವ
ಎನ್ನ ಘ್ರಾಣದಲ್ಲಿ ನಕಾರವಾಗಿದ್ದಾತ ಮಡಿವಾಳಯ್ಯ
ಎನ್ನ ಬಾಯಿಯಲ್ಲಿ ಮಕಾರವಾಗಿದ್ದಾತ ಮರುಳು ಶಂಕರಯ್ಯ
ಎನ್ನ ನೇತ್ರದಲ್ಲಿ ಶಿಕಾರವಾಗಿದ್ದಾತ ಬಸವ
ಎನ್ನ ಕಪೋಲದಲ್ಲಿ ವಕಾರವಾಗಿದ್ದಾತ ಪಡಿಹಾರಿ ಬಸವಯ್ಯ
ಎನ್ನ ಶ್ರೋತ್ರದಲ್ಲಿ ಯಕಾರವಾಗಿದ್ದಾತ ಹಡಪದಪ್ಪಣ್ಣ
ಎನ್ನ ಜಿಹ್ವೆಯಲ್ಲಿ ಹ್ರೀಂಕಾರವಾಗಿದ್ದಾಕೆ ಅಕ್ಕನಾಗಮ್ಮ
ಎನ್ನ ಸರ್ವಾಂಗದಲ್ಲಿ ಸಕಲ ಪ್ರಣವರೂಪಾಗಿದ್ದಾತ
ಗುರುವಿನ ಗುರು ಚೆನ್ನಬಸವ ಪಾದಕ್ಕೆ ನಮೋ ನಮೋ
ಎಂಬೆನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ

ಸಿದ್ಧರಾಮೇಶ್ವರ

ಪ್ರವಚನಸಾರ

ಹಂಸಧ್ಯಾನ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಭಗವಂತನನ್ನು ತಿಳಿದುಕೊಳ್ಳುವ, ಕಥನಿಸುವ ಪ್ರಯತ್ನ ಸಾವಿರಾರು ವರ್ಷಗಳಿಂದ ಸಾಗುತ್ತಿದೆ. ಶತಶತಮಾನಗಳಿಂದ ಭಗವಂತನನ್ನು ಅರಿತವರು ಬಾಳಿ ಬದುಕಿದರು. ತಮಗೆ ಭಗವಂತನ ಬಗ್ಗೆ ಏನು ಗೊತ್ತಾಯಿತು ಅದನ್ನು ಲೋಕದಲ್ಲೆಲ್ಲಾ ತಿಳಿಸಿಕೊಡುವ ಪ್ರಯತ್ನವನ್ನು ಮಾಡಿದರು. ಅವರು ಬಳಸಿದ ಭಾಷೆ, ಆ ವಸ್ತುವನ್ನು ವರ್ಣಿಸುವ ರೀತಿ ಅತ್ಯಂತ ಮಾರ್ಮಿಕವಾಗಿತ್ತು. ಅದು ಅವಶ್ಯವೂ ಹೌದು. ಭಾಷೆ ದೃಶ್ಯ ಜಗತ್ತನ್ನು ವರ್ಣಿಸುವಂತೆ ಅದೃಶ್ಯ ವಸ್ತುವನ್ನೂ ವರ್ಣಿಸುತ್ತದೆ. ಈ ಭಾಷೆಯ ಮಾಧ್ಯಮವನ್ನು ಬಹಳ ನಾಜೂಕಾಗಿ ಬಳಸಿದವರು ಸಂತರು. ಸಾಮಾನ್ಯ ವಸ್ತುಗಳ ಬಗ್ಗೆ ನಾವು ಸ್ವಲ್ಪ ಅಜಾಗರೂಕ ಭಾಷೆ ಬಳಸಿದರೂ, ಆ ವಸ್ತು ಹಲವರಿಗೆ ಪ್ರತ್ಯಕ್ಷ ಇರುವುದರಿಂದ ಅಷ್ಟು ಅಪಾರ್ಥವಾಗ ಲಿಕ್ಕಿಲ್ಲ. ಅಧ್ಯಾತ್ಮಿಕ ರಂಗದಲ್ಲಿ ಹಾಗಾಗುವುದಿಲ್ಲ. ಮೊದಲನೆಯದಾಗಿ ಆ ವಸ್ತುವು ಅದೃಶ್ಯ. ಎರಡನೆಯದಾಗಿ ನಮ್ಮ ಸಹಜ ಗಮನಕ್ಕೆ ಅದು ಬರುವಂಥದೂ ಅಲ್ಲ. ಅದಲ್ಲದೆ ಅನೇಕರಿಗೆ ಅದು ಗೊತ್ತೂ ಇಲ್ಲ. ಆದ್ದರಿಂದ ಭವ್ಯ ವಸ್ತುವನ್ನು ಕುರಿತು ಭಾಷೆ ಬಳಸುವಾಗ ಬಹಳ ಜಾಗರೂಕತೆ ವಹಿಸಿದರು ಶರಣರು, ಸಂತರು. ಒಂದು ಶಬ್ದ ಹೆಚ್ಚಾಗುವಂತಿಲ್ಲ, ಕಡಿಮೆ ಆಗುವಂತಿಲ್ಲ. ಹಾಗೆ ಎಷ್ಟು ಬೇಕೋ ಅಷ್ಟು ಬಳಸಿ ಭಗವಂತನು ನಮ್ಮ ಮನಸ್ಸಿನ ಪಟಲದ ಮೇಲೆ ಸ್ಪಷ್ಟವಾಗಿ ಅಲ್ಲದಿದ್ದರೂ ಅಸ್ಪಷ್ಟವಾಗಿಯಾದರೂ ಮೂಡುವಂತೆ ಯತ್ನಿಸಿದರು. ಅವರ ಆ ತೂಕದ ಮಾತುಗಳೇ ವಚನಗಳು, ಉಪನಿಷತ್ತುಗಳು.

ಅದನ್ನು ನೇರವಾಗಿ ವರ್ಣಿಸುತ್ತಾರೆ ಕೆಲವು ಸಲ. ಇನ್ನು ಕೆಲವು ಸಲ ಅಪ್ರತ್ಯಕ್ಷವಾಗಿ ಆ ವಸ್ತುವನ್ನು ಲಿಖಿಸುತ್ತಾರೆ. ಮೊದಲನೆಯದು ಭಾವಭಾಷೆ. ಎರಡನೆಯದು ಅಭಾವಭಾಷೆ. ಭಾವಭಾಷೆ ಆ ಪರಮ ಆಧ್ಯಾತ್ಮಿಕ ಸತ್ಯತತ್ತ್ವ ಹೇಗಿದೆ ಎಂಬುದನ್ನು ಲಕ್ಷಣದ ಮೂಲಕ ಚಿತ್ರಿಸುತ್ತದೆ. ಅಭಾವಭಾಷೆಯು ಯಾವುದು ಆ ತತ್ತ್ವ ಅಲ್ಲ ಎನ್ನುವುದನ್ನು ಹೇಳುತ್ತದೆ. ಮೊದಲನೆಯದಕ್ಕೆ ವಿಧಿಮಾರ್ಗವೆಂದೂ, ಎರಡನೆಯದಕ್ಕೆ ನಿಷೇಧಪದ್ಧತಿ ಎಂದೂ ಹೆಸರಿಸಬಹುದೆನಿಸುತ್ತದೆ.

'ಇದು', ಎಂದು ಹೇಳುವುದು ನೇರವಾಗಿ ವಸ್ತುವನ್ನು ದರ್ಶಿಸುತ್ತದೆ. 'ಇದಲ್ಲ' ಎಂದು ಹೇಳುವುದು ಪರೋಕ್ಷವಾಗಿ ವಸ್ತುವನ್ನು ದರ್ಶಿಸುತ್ತದೆ. ಅದು ಯಾವುದು ಅಲ್ಲ ಎನ್ನುವುದನ್ನು ನಮಗೆ ತಿಳಿಸಿಕೊಡುತ್ತದೆ. ಎರಡನ್ನೂ ಬಳಸಿದರೆ ವಸ್ತುವಿನ ಸಂಪೂರ್ಣ

ಜ್ಞಾನ ನಮಗೆ ಉಂಟಾಗುತ್ತದೆ. ಕೆಲವರಿಗೆ ವಿಧಿ ಪದ್ಧತಿ ಇಷ್ಟ. ಇನ್ನು ಕೆಲವರಿಗೆ ನಿಷೇಧ ಪದ್ಧತಿ ಇಷ್ಟ. ಅವರವರ ಸ್ವಭಾವಕ್ಕೆ ಭಾಷೆ ಬಳಸುವ ಅವಶ್ಯಕತೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ

ಒಂದು ಪೂರ್ಣ ಶಬ್ದ ಬಳಸಿ ವಿಶ್ವ ಹಾಗೂ ವಿಶ್ವಾತ್ಮನನ್ನು ಕುರಿತು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದಾರೆ. ತಾಸು ತಾಸು ವರುಷ ಹೇಳಬಹುದಾದುದನ್ನು ಒಂದೆರಡು ಸಾಲುಗಳಲ್ಲಿ ವಿವರಿಸಿದ್ದಾರೆ. ಅಂತಿಮ ಸತ್ಯವನ್ನು ನಿಜವಾಗಿ ವರ್ಣಿಸಲು ಆಗದು. ಆದರೂ ಜ್ಞಾನಿಗಳು ಅದನ್ನು ನಾಲ್ಕೇನಾಲ್ಕು ಶಬ್ದಗಳಲ್ಲಿ ಗ್ರಹಿಸಿದ್ದಾರೆ; ಸಂಗ್ರಹಿಸಿದ್ದಾರೆ. ಈ ಪೂರ್ಣಮದಃ ಎಂಬ ಸಾಗರಾರ್ಥವುಳ್ಳ ಮಂತ್ರ ರಚಿಸಲು ಅನುಭಾವಿಯು ಜೀವನದ ತುಂಬಾ ಚಿಂತನೆ ಮಾಡಬೇಕಾಗಿತ್ತು, ಸತ್ಯದ ದರ್ಶನ ಮಾಡಿಕೊಳ್ಳಬೇಕಾಗಿತ್ತು. ವಿಶ್ವದ ವಿಶ್ವಾತೀತವಾದ ವಸ್ತುವಿನ ಸಂಬಂಧವನ್ನು ಪ್ರತ್ಯಕ್ಷವಾಗಿ ಕಾಣಬೇಕಾಗಿತ್ತು!

ಆ ಪ್ರತಿ ಮಾತಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಮಾತಿನ ಹಿಂದಿರುವಂಥ ಮರ್ಮವನ್ನು ಸವಿಯುವುದು, ಅದನ್ನು ಸವಿಯುತ್ತ ಆನಂದಮಗ್ನರಾದರೆ ಆ ಋಷಿ ಕಂಡ ಸತ್ಯ ನಮ್ಮ ಭಾವಕ್ಕೆ ಬರುತ್ತದೆ.

ಒಂದು ಚಾಕ್ಲೇಟು ಎಂದು ಇಟ್ಟುಕೊಳ್ಳಿ, ಚಾಕ್ಲೇಟ್ ಮುರಿದು ನುಂಗಿ ಬಿಟ್ಟರೆ ಅದರ ರುಚಿ ಗೊತ್ತಾಗುವುದಿಲ್ಲ. ನಾಲಿಗೆಯ ಮೇಲಿಟ್ಟು ಅದರ ಸವಿಯನ್ನು ಹೀರುತ್ತಾ ಹೀರುತ್ತಾ ಹೋದರೆ ಅದರೊಳಗಿರುವ ಎಲ್ಲಾ ಮಾಧುರ್ಯ ನಮ್ಮ ಅನುಭವಕ್ಕೆ ಬರುತ್ತದೆ! ಹಾಗೆ ಮಂತ್ರಗಳನ್ನಾಗಲಿ ವಚನಗಳನ್ನಾಗಲಿ ಕೇವಲ ಕೇಳುವುದಲ್ಲ; ಅದನ್ನು ಹೃದಯದೊಳಗೆ ಇಟ್ಟು, ಮನನ ಮಾಡಬೇಕು. ಆ ಮನನ, ಅದರಿಂದುಂಟಾಗುವ ಜ್ಞಾನರಸ ನಮ್ಮನ್ನು ಭಗವದೆತ್ತರಕ್ಕೆ ಮುಟ್ಟಿಸುತ್ತದೆ. ಯಾವ ಶರಣರಲ್ಲಿ ನಾವು ಪೂಜ್ಯ ಭಾವನೆ ತಾಳಿರುತ್ತೇವೆಯೋ ಅವರ ಒಂದು ಎರಡು ವಚನ ಮುಂಜಾವಿನಲ್ಲಿ ಓದುವುದು, ಪ್ರಪಂಚದ ಉಲಿವು ಆರಂಭವಾಗುವ ಮುಂಚೆ. ಓದಿದ ವಚನದರ್ಥವನ್ನೂ ಭಾವವನ್ನೂ ಮನನಿಸುವುದು, ಆ ಮನನ-ಆನಂದ ಮನವ ತುಂಬಿರಲು ಆ ದಿನದ ಪ್ರಾಪಂಚಿಕ ಕರ್ತವ್ಯ ಕರ್ಮಗಳ ಆಚರಿಸುವುದು. ಇದು ಅಧ್ಯಾತ್ಮಜೀವನ!

ಶರಣರು ಅನುಭವಮಂಟಪ ರಚಿಸಿದರು. ತಮಗೆ ಅನುಭವಕ್ಕೆ ಬಂದುದನ್ನು ಅಲ್ಲಿ ಉಳಿದವರೊಂದಿಗೆ ಹಂಚಿಕೊಂಡರು. ಅವರ ಅನುಭವ ಶ್ರೀಮಂತವಾಯಿತು. ಅದನ್ನು ದಿನದಿನವೂ ಸವಿದು ಬದುಕನ್ನು ದಿವ್ಯವಾಗಿಸಿದರು. ನಿಜಾರ್ಥದಲ್ಲಿ ಆನಂದಶರಣರಾದರು.

ಸಾಮಾನ್ಯವಾಗಿ ಶರಣರು, ಸಂತರು ಸಣ್ಣ ಪುಟ್ಟ ಕಾಯಕ ಮಾಡಿಕೊಂಡಿದ್ದವರು. ಕಲಿತು ವಿದ್ವಾಂಸರಾಗಲಿಲ್ಲ. ಬಲಿತು ಅಧಿಕಾರಿಗಳಾಗಲಿಲ್ಲ; ಕಟ್ಟಿಗೆ ಕಡಿದು ಮಾರಿದರು;

ಬೀಸಿದರು; ಅಡಿಗೆ ಮಾಡಿದರು; ನೇಯ್ದರು; ಉತ್ತಿ ಬಿತ್ತಿದರು; ಕಾಯಕದೊಂದಿಗೇ ಚಿಂತನೆ ಮಾಡಿದರು. ಅವರ ಹೃದಯ ಹಸನು. ಅದರಿಂದಾಗಿ ಬದುಕಿನ ನಿಜಸತ್ಯ ಕಂಡರು. ಸಾದಾ ಶಬ್ದಗಳಲ್ಲಿ ವಚಿಸಿದರು. ಅವೇ ವಚನಗಳು. ಅವು ಸುಸೇವ್ಯ, ಸುಶ್ರಾವ್ಯ ಹಾಗೂ ಮನನೀಯ.

ಶರಣರು ಉದ್ದೇಶಪೂರ್ವಕ ವಚನ ಹಾಡಿದವರಲ್ಲ. ಅವರು ಕಾರ್ಯರತರು; ಆತ್ಮಸಾಧಕರು. ಅವರ ಜೀವನಾನುಭವ ಹಾಸುಹೊಕ್ಕಾಗಿ ಶಬ್ದಗಳ ಮಧ್ಯ ತುಂಬಿತು. ಅವರ ಕೈ ನೇಯ್ಗೆಯಲ್ಲಿ; ಅವರ ಮನಸ್ಸು ದೇವಬಟ್ಟೆಯಲ್ಲಿ. ಅವರ ವಚನಗಳಲ್ಲಿ ದೇವಾಂಬರ! ಶಬ್ದಗಳ ಸಹಾಯವಿಡಿದು ಈ ಅನುಭವಾಂಬರ ಸಿದ್ಧವಾಗುತ್ತಿತ್ತು. ಅಧ್ಯಾತ್ಮ ಹಾಗೂ ಬದುಕು ಭಿನ್ನವಾಗಿರಲಿಲ್ಲ. ನಮ್ಮದು ಅವರಂತಲ್ಲ. ನಾವು ಅಧ್ಯಾತ್ಮವನ್ನು ಬದುಕಿನಿಂದ ಬೇರ್ಪಡಿಸಿದ್ದೇವೆ. ಸಾಧ್ಯವಾದಷ್ಟು ಅಲ್ಪ ಸಮಯದಲ್ಲಿ ಆಧ್ಯಾತ್ಮಿಕ ಕಾರ್ಯ ಮಾಡಿ ಮುಗಿಸುವ ತವಕ, ಅವಸರ. ಭಗವದ್ಗೀತೆಯನ್ನಾಗಲಿ, ಬೇರೆ ಗ್ರಂಥವನ್ನಾಗಲಿ ಒಂದು ನೂರು ಸಲ ಪಾರಾಯಣ ಮಾಡಬೇಕೆಂದು ವ್ರತ ಹಿಡಿದಿರುತ್ತೇವೆ. ವ್ರತ ಪೂರೈಸುವುದೊಂದೇ ಉದ್ದೇಶ. ಪಾರಾಯಣ, ವಾಚನ ಎಷ್ಟು ತೀವ್ರ! ಸಾಕ್ಷಾತ್ ಭಗವಂತ ಕೃಷ್ಣನೇ ಬಂದು ಕೇಳಿದರೂ ಅವನಿಗೆ ನಾವು ಯಾವ ಶ್ಲೋಕ ಓದುತ್ತಿದ್ದೇವೆ ತಿಳಿಯಲಾರದು! ಹಾಗೆ ಹೀಗೆ ಒಂದು ನೂರು ದಿವಸ ಯಾವಾಗ ಮುಗಿದೀತೋ ಆಗ ಸಂಭ್ರಮ. ಕೊನೆಯ ವಾಚನದ ದಿನ ಹಬ್ಬ. ಗೀತೆ ಅರಿತು ಅಲ್ಲ. ಗೀತಾವ್ರತ ಮುಗಿಯಿತೆಂದು! ಈ ರೀತಿ ಸಾವಿರ ಪಾರಾಯಣ ಮಾಡಿದರೂ ಲಾಭವೇನು? ಭಗವದ್ದರ್ಶನವೆಲ್ಲಿ? ಆಧ್ಯಾತ್ಮಿಕ ಸಿದ್ಧಿ ಎಂತು?

ಒಂದು ಹಕ್ಕಿ ಹಾರಿ, ಮೇಲೆ ಆಕಾಶಕ್ಕೆ ಹೋಗಿ ಮೋಡದ ಮರೆಯಲ್ಲಿ ಅವಿತು ಹಾಡಿತು! ಸ್ಕೈಲಾರ್ಕ್ ಹಾಡಿತು! ಸ್ಕೈಲಾರ್ಕ್ ಆಕಾಶದ ಹಕ್ಕಿ; ತನ್ನ ಧ್ವನಿಯನ್ನು ವಿಶ್ವದ ತುಂಬ ಹರವುವ ಹಕ್ಕಿ. ಹಾಡಿತು! ಒಬ್ಬ ಮನುಷ್ಯ ಅದನ್ನು ವಿಚಾರಿಸಿದ: 'ಯಾಕೆ ಹಾಡುತ್ತೀ? ಯಾರೂ ಕೇಳುತ್ತಲೇ ಇಲ್ಲವಲ್ಲ?' ಹಕ್ಕಿ ಹೇಳಿತು: "ಕೇಳುವವರಿಗಾಗಿ ಹಾಡುವವರು ಮನುಷ್ಯರು! ಭಗವಂತನ ಸಮೃದ್ಧವಾದ, ಸುಂದರ ರಾಜ್ಯದ ಆನಂದಾನುಭೂತಿ ನನ್ನ ಹೃದಯ ತುಂಬಿದೆ. ಅದು ಧ್ವನಿಯ ಮೂಲಕ ಹೊರಗೆ ಚಿಮ್ಮುತ್ತಿದೆ! ನನ್ನ ಗಾನ ಯಾರಿಗಾಗಿಯೂ ಅಲ್ಲ; ನನ್ನ ಆನಂದಕ್ಕಾಗಿ! ವಿಶ್ವವನ್ನು ಇನ್ನಷ್ಟು ಮಧುರಗೊಳಿಸಲೆಂದು. ನಾನಿರುವವರೆಗೆ ಹಾಡುವೆ. ಮನುಷ್ಯನೇ, ನನ್ನ ಗಾನ ನಿನ್ನ ಗಾನದಂತೆ ಮುಗಿಯದು!" ಪಕ್ಷಿಯದು ನಿಜವಾದ ಆನಂದಾವಿರ್ಭಾವ!

ಕಲ್ಲುಸಕ್ಕರೆಯನ್ನು ನಿಧಾನವಾಗಿ ಮೆಲ್ಲಬೇಕು, ಅದರ ರಸ ರುಚಿ ದೇಹ ಹಾಗೂ ಮನಸ್ಸನ್ನು ವ್ಯಾಪಿಸಬೇಕು. ಆಗ ಸಿಹಿಯ ಆನಂದ ತಿಳಿಯುತ್ತದೆ. ಹಾಗೆ ಸಂತರ ವಚನಗಳನ್ನು, ಶರಣರ ಮಾತುಗಳನ್ನು ಮೈತುಂಬುವಷ್ಟು ಸವಿಯಬೇಕು, ಮೆಲ್ಲಬೇಕು; ಅದೂ ಸಾವಧಾನದಿಂದ, ಮೆಲ್ಲಮೆಲ್ಲನೆ. ಆಗ ಅಧ್ಯಾತ್ಮಿಕ ಉನ್ಮಾದ ಬರುತ್ತದೆ. ಹಾಗೆ ಅನುಭವಿಸುವ ಸಾಮರ್ಥ್ಯ ನಮಗಿಲ್ಲವೆಂತಲ್ಲ. ನಮಗೆ ಅವಕಾಶವಿಲ್ಲ. ಸಮಯವಿಲ್ಲ ಅಷ್ಟೇ. ಭಗವಚ್ಚಿಂತನೆ ಮನನಕ್ಕಾಗಿ.

ಬರೀ ಕೇಳಲೂ ಅಲ್ಲ, ಪಾರಾಯಣ ಮಾಡಲೂ ಅಲ್ಲ. ಎಷ್ಟು ದಿನ ಭಗವಚ್ಚಿಂತನ? ಪ್ರಶ್ನೆಗೇ ಅರ್ಥವಿಲ್ಲ. ಸೂರ್ಯೋದಯವನ್ನು ಎಷ್ಟು ದಿವಸ ನೋಡುವುದು? ತಂಪಾದ ಮಧುರ ನೀರನ್ನು ಎಷ್ಟು ದಿವಸ ಕುಡಿಯುವುದು? ಜೀವಭಾವ ಇರುವವರೆಗೆ ಚಿಂತನ! ದೇವಚಿಂತನ! ಜ್ಞಾನಿಗಳ ಒಂದೊಂದು ಶಬ್ದ ನಮ್ಮ ಚಿಂತನೆಗೆ ಸಾಕು! ಇಲ್ಲಿ ಒಂದು ಶಬ್ದವಿದೆ ನೋಡಿ.

'ಹಂಸ', ಅತಿ ಶುಭ್ರವಾದ ಸತ್ಯವಸ್ತು! ನಿಷ್ಕಳಂಕ, ಸ್ವಚ್ಛ ಚೇತನ, ಧೂಳು ಅಂಟದು. ಜಲ ಅದನ್ನು ತೋಯಿಸದು. ಅಗ್ನಿ ಸುಡದು. ಗಾಳಿ ಅಲುಗಿಸದು. ಭವ್ಯ ಚೇತನ! ಸುಂದರ, ಶುದ್ಧ. ಅದು 'ಹಂಸ'! ಹಂಸಪಕ್ಷಿಯ ವಾಸ ನಿರ್ಜನಪ್ರದೇಶದಲ್ಲಿ. ಮಾನಸ ಸರೋವರದೊಳಗೆ ಅದರ ವಿಹಾರ! ನಿಶ್ಯಬ್ದ! ಸುಶಾಂತ! ಅದು ಬೆಳ್ಳಗೆ! ಹೊರಗೂ ಒಳಗೂ! ವ್ಯಷ್ಟಿರಂಗದಲ್ಲಿ ವ್ಯಷ್ಟಿಮನಸ್ಸೇ ಸರೋವರ. ಅಲ್ಲಿ ತೇಲುವ ಚೇತನ ಹಂಸವು ಜೀವದ ಪ್ರತೀಕ.

ವಿಶ್ವರಂಗದಲ್ಲಿ ಸಮಷ್ಟಿ ಮನಸ್ಸೇ ಸರೋವರ; ಅಲ್ಲಿ ತೇಲುವ ಚೇತನ ಹಂಸವು ಈಶ. ಈ ಜೀವ, ಈಶ ಎಂಬವು ಎರಡೂ ಹಂಸಗಳು, ಎರಡೂ ಶುಭ್ರ! ಅವು ಇರುವುದರಿಂದಲೇ ದೇಹಕ್ಕೂ ವಿಶ್ವಕ್ಕೂ ಶೋಭೆ. ಸೌಂದರ್ಯವಿದೆ. ಅದನ್ನು ಕಣ್ಣು ನೋಡಬೇಕು. ಕೈ ಕಾರ್ಯ ಮಾಡಬೇಕು. ಮನಸ್ಸು ಭಾವಿಸಬೇಕು. ಬುದ್ಧಿ ಆಲೋಚಿಸಬೇಕು. ಇದಕ್ಕೆಲ್ಲ ಜೀವ-ಹಂಸ ಅವಶ್ಯ. ಆ ಹಂಸ ಹಾರಿಹೋದರೆ ಬದುಕು ಶೂನ್ಯ.

ಭವ್ಯ ಮನೆ, ಮನೆಯಲ್ಲಿ ಚಿತ್ರಗಳು, ಸಂಪತ್ತು ಭೋಗ ಭಾಗ್ಯಗಳು, ಹೆಂಡತಿ ಮಕ್ಕಳು, ರಾತ್ರಿ ಒಂದು ದೀಪ ಮಿಣುಕುತ್ತಿದೆ. ಒಂದು ಮೂಲೆಯೊಳಗೆ. ಕಿರಣಗಳು ಹರಿದು ಇಡೀ ಮನೆಯನ್ನು ವ್ಯಾಪಿಸಿವೆ. ಎಲ್ಲೆಡೆ ಬೆಳಕು. ಸೌಂದರ್ಯ. ನಲಿವು ಒಲವು ಎಲ್ಲವೂ ಬೆಳಕಿನಲ್ಲಿ ಶೋಭಿಸುತ್ತಿವೆ. ಮನೆಯ ಜನರ ಮುಖದ ಕಳೆ ಹೊಳೆಯುತ್ತಿದೆ. ದೀಪ ಆರಿತೋ ಅದೆಲ್ಲ ವೈಭವ ಮಾಯ. ಆ ಹಂಸನಿದ್ದರೆ ವ್ಯಷ್ಟಿ ಸಮಷ್ಟಿ ಮನೆಗಳು ಮನೋಹರ. ಜೀವಹಂಸ ಶುಚಿ-ಸದ್. ಈಶಹಂಸ ವರಸತ್. ಎರಡು ಭಾವ-ಮಿತಿ ಇಲ್ಲದ ಅನಂತ ಚೇತನವೆ ಅಂತರಿಕ್ಷ-ಸದ್ (ವ್ಯೋಮಸದ್).

ಆ ಹಂಸ ಎಲ್ಲೆಡೆ ವಾಸಿಸಿದೆ. ಅಂತರಿಕ್ಷದಲ್ಲಿ, ಆಕಾಶದಲ್ಲಿ, ಭೂಮಿಯಲ್ಲಿ, ಭೂದೇಹಗಳಲ್ಲಿ, ಮಾನವ ದೇವತೆಗಳ ಅಂತರಂಗದಲ್ಲಿ ಆ ಸುಂದರ ಹಂಸ ತೇಲುತ್ತಲಿದೆ. ಹೀಗೆ ಭಾವಿಸಿಕೊಳ್ಳುವುದು ಭಗವಚ್ಚಿಂತನ.

ಜೀವಹಂಸದ ಸ್ಥಾನ ಭಾವಲಹರಿಯ ಮನಸ್ಸು. ಆ ಮನಸ್ಸನ್ನು ಭಾವ-ವೀಚಿ-ಶೂನ್ಯ ಮಾಡಿದರೆ ಹಂಸ. ಅಂದರೆ ಜೀವಹಂಸ-ಭಾವಮಿತಿ ಕಳಚಿ ಈಶಹಂಸದಲ್ಲಿ ಒಂದಾಗುತ್ತದೆ. ಜೀವಭಾವವೇ ಇಲ್ಲವಾಗಿ 'ಈಶ' ಕಲ್ಪನೆಯೂ ಕರಗಿಹೋಗುತ್ತದೆ. ಆಗ ಉಳಿದುದು ಪರಮಹಂಸ. ಅದು ಕೇವಲ ಚೇತನಾನುಭವ. ಅದು ಮುಕ್ತಿಸ್ಥಿತಿ.

ಹಂಸಸಾಧನೆ ಹೃದ್ಯ. ನಮ್ಮ ಇಂದ್ರಿಯಕ್ಷೇತ್ರದಲ್ಲಿ, ನಮ್ಮ ಮನೋಕ್ಷೇತ್ರದಲ್ಲಿ, ನಮ್ಮ ಆಲೋಚನಾಕ್ಷೇತ್ರದಲ್ಲಿ ಹಂಸ ತೇಲುವುದನ್ನು ಭಾವಿಸಬೇಕು. ಗುರುತಿಸಬೇಕು.

ಸುತ್ತಮುತ್ತಲಿನ ಅಸಂಖ್ಯ ದೇಹಗಳಲ್ಲಿ 'ಹಂಸ' ಈಜುವುದನ್ನು ಗುರುತಿಸುವುದು ಹಂಸಧ್ಯಾನ. ಜಗತ್ತಿನ ವಿಸ್ತಾರದಲ್ಲಿ, ಸೂರ್ಯನ ಉದಯದಲ್ಲಿ, ಜಲ ವರ್ಷಿಸುವಲ್ಲಿ, ಬೀಸುವ ಗಾಳಿಯಲ್ಲಿ ಹಂಸಗತಿಯನ್ನು ಈಕ್ಷಿಸುವುದು ಹಂಸಭಾವ.

ಅಂತರಂಗದಲ್ಲಿ ಚೇತನಾನುಭವ ಮಾಡಿಕೊಳ್ಳುವುದು ಜೀವಹಂಸ ಧ್ಯಾನ. ವಿಶ್ವದಲ್ಲಿ ಚೇತನಾಸ್ತಿತ್ವವನ್ನು ಕಾಣುವುದು ಈಶಹಂಸದರ್ಶನ. ಜೀವೇತರ ಭಾವ ತ್ಯಜಿಸಿ ಕೇವಲ ಹಂಸ(ಚೇತನ)ದತ್ತ ಈಕ್ಷಿಸುವುದು ಪರಮಹಂಸ-ಸಂಧಾನ. ಒಂದು ಅಂಗಭಾವ; ಎರಡನೆಯದು ಲಿಂಗಭಾವ. ಮೂರನೆಯದು ಅಂಗಲಿಂಗ ಸಮರಸಭಾವ. ಪರಮಹಂಸ ಸ್ಥಿತಿ.

ಆ ಸ್ಥಿತಿ ಪಡೆದವರು ಮಹಾನ್ ಸಂತರು. ಅವರಲ್ಲಿ ಅವಿದ್ಯಾದಿ ಕ್ಲೇಶಗಳಿಲ್ಲ. ಸ್ವಾನಂದವಿಹಾರಿಗಳು. ಋಗತುಷ್ಪ್ರ ಪರ್ಷಿಯಾದ ಸಂತ. ಆತನಿಂದ ವಿದ್ಯೆ ಪಡೆದ ಶಿಷ್ಯನೊಬ್ಬ ಅನುಭಾವಿಯಾದ. ಅವನ ಕಣ್ಣಲ್ಲಿ ಹಂಸ; ಹೃದಯದಲ್ಲಿ ಹಂಸ! ಎಲ್ಲೆಡೆ ಶಾಂತಿದರ್ಶನ. ಅದನ್ನು ಎಲ್ಲೆಡೆ ಹರಡಲು ಹೊರಟ. ಆಗದವನೊಬ್ಬ ಅವನ ಕೊಲೆ ಮಾಡಲೆಳಸಿದ. ಅರಣ್ಯ ಮಾರ್ಗದಲ್ಲಿ ಹಿಂದಿನಿಂದ ಬಂದು ಕತ್ತಿಯಿಂದ ಇರಿದ. ರಕ್ತ ಮಡುಗಟ್ಟಿತು. ಸಂತ ಸಾವಿನಂಚಿಗೆ ತಲುಪಿದ. ಆಗ ಆ ಕೊಲೆಗೈವ ಮನುಷ್ಯನನ್ನು ಸನಿಹ ಕರೆದು ಅವನ ಕೈಗೆ ತಾನು ಅನುಭವಿಸಿದ ಪರಮವಿದ್ಯೆಯ ಗ್ರಂಥ ಕೊಟ್ಟು ಹೇಳಿದ, "ಇದರಲ್ಲಿ ಶಾಂತಿವಿದ್ಯೆ ಇದೆ. ನೀನು ಓದು; ಅನುಭವಿಸು, ಮಹಾ ಸಂತನಾಗು. ನಾನು ಮಾಡುತ್ತಲಿದ್ದ ಈ ಶಾಂತಿ ವಿದ್ಯಾಪ್ರಸಾರ ನೀನು ಮುಂದುವರೆಸು!" ಹೀಗೆ ನುಡಿದು ಕಣ್ಣು ಮುಚ್ಚಿದ! ಗ್ರಂಥ ಪಡೆದ ಕೊಲೆಗಾರನಲ್ಲಿ ಹಂಸ ಸುಳಿಯಿತು. ಜೀವಭಾವ ಅಳಿಯಿತು. ಅನುಭಾವಿಯಾದ! 'ಅಹುರಾ ಮಝ್ದಾ' ಅವನನ್ನು ಆವರಿಸಿತು.

ಹಂಸವಿದ್ಯೆ ಅಂಗವಿಸಿದರೆ ಯಾರ ಬಗೆಗೂ ದ್ವೇಷ ಮತ್ಸರಗಳು ಇರುವುದಿಲ್ಲ. ಸ್ವಚ್ಛಂದವಾದ ಶುಭ್ರವಾದ ಹಂಸ-ಹೃದಯ ಉಂಟಾಗಿರುತ್ತದೆ. ಕಳ್ಳ ಕೊಲೆಗಡುಕರು ಕೂಡ ಕೂಡಲಸಂಗಮನಾಗಿ ಕಾಣುತ್ತಾರೆ. ಕಳ್ಳನಾಗಿ ಬಂದವನು ಶರಣನಾಗಿ ಹೋಗುತ್ತಾನೆ. ಹಿಂಸಕನಾಗಿ ಬಂದವನು ಪ್ರೇಮಮಯಿಯಾಗಿ ಹೋಗುತ್ತಾನೆ. ಇದು ಹಂಸವಿದ್ಯೆಯ ಪರಿಣಾಮ. ಕವಿದರ್ಶನದ ಪ್ರತಿಫಲ! ಇದು ನೀರಸ ತತ್ವಚಿಂತನವಲ್ಲ. ಸರಸ ಸುಂದರವಾದ ಅನುಭವಶಾಸ್ತ್ರ. ಬಾಹ್ಯಾಂತರಂಗದಲ್ಲೆಲ್ಲ ಸುರಮ್ಯ ಹಂಸದರ್ಶನ!

ಎಲ್ಲ ಕಡೆ ಕತ್ತಲೆ ಆವರಿಸಿದಾಗ ಅಂತರಂಗ ಅದೊಂದು ಸರೋವರ ಎಂದು ಭಾವಿಸಿ ಅಲ್ಲಿ ಹಂಸ ತೇಲುತ್ತಿದೆ ಎಂದು ಕಲ್ಪಿಸಿ ಆ ಹಂಸದ ಧ್ಯಾನ ಮಾಡುವುದು. ಆ ಹಂಸವು ತಾನು; ತಾನೇ ಹಂಸವಾಗಿ ಪರಿಭಾವಿಸುವುದು. ಈ ಪರಿಭಾವನೆ ಕರಿಗೊಂಡುದಾದರೆ ದಿವ್ಯದೃಷ್ಟಿ ಪ್ರಾಪ್ತಿ. ಆಗ ಕಣ್ತೆರೆದು ಜಗವ ನೋಡಿ. ಎಲ್ಲೆಡೆ ಹಂಸ ತೇಲಿದ ಅನುಭವ. ಎಲ್ಲೆಡೆ ಶಾಂತತೆ, ಶುಭ್ರತೆ! ಇದು ಭಗವಚ್ಚಿಂತನದ ಫಲ!

□

ಮಾತೃಹೃದಯಿ

ಶ್ರೀಮತಿ ಜಗದಾಂಬಾ ಮಲ್ಲೇದೇವರು

ಭಾನುವಿನಂತಿಪ್ಪುದು ಜ್ಞಾನ, ಭಾನುಕಿರಣದಂತಿಪ್ಪುದು ಭಕ್ತಿ
ಭಾನುವನುಳಿದು ಕಿರಣಂಗಳಿಲ್ಲ, ಕಿರಣಂಗಳನುಳಿದು ಭಾನುವಿಲ್ಲ
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು
ಚನ್ನಮಲ್ಲಿಕಾರ್ಜುನಾ

ಸುತ್ತೂರು ವೀರಸಿಂಹಾಸನಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಭಕ್ತಿ ಜ್ಞಾನಗಳ ಸಂಗಮದಂತಿದ್ದಾರೆ. ಭಕ್ತಿಗೆ ಬಸವಣ್ಣನಂತೆ, ಜ್ಞಾನಕ್ಕೆ ಅಲ್ಲಮಪ್ರಭುವಿನಂತೆ. ಈ ಎರಡರ ಸಂಗಮದಿಂದ ಸುವರ್ಣದ ಪುಷ್ಪಕ್ಕೆ ಸುಗಂಧ ಬೆರೆತಂತೆ ಶ್ರೀಗಳವರ ವ್ಯಕ್ತಿತ್ವ ಉಪಮಾತೀತವಾಗಿದೆ. ನಾಡಿನ ಅನೇಕ ವರ್ಷಗಳ ತಪಸ್ಸಿನ ಫಲವಾಗಿ ರೂಪುಗೊಂಡವರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಭುವನದ ಭಾಗ್ಯದಿಂದುದಿಸಿದ ಪರಮ ಪೂಜ್ಯ ಶ್ರೀಗಳವರು "ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ" ಎಂಬ ಶರಣರ ನುಡಿಯಂತೆ ಕಾಯಕನಿರತರಾಗಿ, ನುಡಿದಂತೆ ನಡೆದು ತಮ್ಮ ಆದರ್ಶ ಜೀವನದಿಂದ ದೇಶದ ಸರ್ವತೋಮುಖ ಪ್ರಗತಿಗೆ ಅಹರ್ನಿಶಿ ದುಡಿಯುತ್ತಿರುವುದು ನಾಡಿನ ಸುದೈವ. ಧಾರ್ಮಿಕ ನಿಧಿಯಾದ ಶ್ರೀಗಳವರು "ಜ್ಯೋತಿ ಮುಟ್ಟಿ ಜ್ಯೋತಿಯಪ್ಪಂತೆ" ಜನಸಾಮಾನ್ಯರನ್ನುದ್ಧರಿಸುತ್ತಿರುವರು.

ಜಗದ್ಗುರುಗಳವರು ನಾಡಿನ ಎಲ್ಲ ವರ್ಗದ ಜನರ ಏಳಿಗೆಗಾಗಿ ಪರಿಶ್ರಮಿಸುತ್ತಿರುವುದು ಒಂದು ಪುಣ್ಯವಿಶೇಷ. 'ಜ್ಞಾನಾನ್ನ ದಾಸೋಹಿ'ಗಳಾದ ಶ್ರೀಗಳವರು ಸ್ತ್ರೀಪುರುಷರೆಂಬ ಭೇದವಿಲ್ಲದೆ, ಬಡವ ಬಲ್ಲಿದನೆಂಬ ತಾರತಮ್ಯವಿಲ್ಲದೆ, ಸ್ಪೃಶ್ಯ ಅಸ್ಪೃಶ್ಯನೆಂಬ ಭಾವನೆ ಇಲ್ಲದೆ, ಶಕ್ತ ಅಶಕ್ತನೆನ್ನದೆ ಎಲ್ಲ ವರ್ಗದ ಜನರಿಗೂ ಉದಾರಾಶ್ರಯವನ್ನಿತ್ತಿದ್ದಾರೆ. ಅನೇಕ ವಿದ್ಯಾಕೇಂದ್ರಗಳನ್ನು ಸ್ಥಾಪಿಸುವುದರ ಮೂಲಕ ನಾಡಿನ ಏಳಿಗೆಗೆ ಕಾರಣೀಭೂತರಾಗಿದ್ದಾರೆ. ಸ್ತ್ರೀ ಮತ್ತು ಪುರುಷರು ಸಮಾಜದ ಎರಡು ಕಣ್ಣುಗಳು, ಸಮಾಜದ ಒಂದು ಕಣ್ಣು ಎಂದು ಭಾವಿಸಿದ ಮಹಿಳೆಯರಿಗಾಗಿ ಶ್ರೀಗಳವರು ಅನೇಕ ರೀತಿಯ ಸೌಲಭ್ಯಗಳನ್ನೊದಗಿಸಿ ಮಹಿಳೆಯರ ಸರ್ವತೋಮುಖ ಪ್ರಗತಿಗೆ ದಾರಿದೀಪವಾಗಿದ್ದಾರೆ.

"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ" ಎಂಬ ಉಕ್ತಿ ಅನೇಕ ಶತಮಾನಗಳ ಕಾಲ ಮರೆಯಾಗಿ, 'ನ ಸ್ತ್ರೀಸ್ವಾತಂತ್ರ್ಯಮರ್ಹತಿ' ಎಂಬ ಸಾಮಾಜಿಕ ಶಾಸನದ ಕಟ್ಟುಪಾಡಿಗೆ ಸಿಲುಕಿದ ಮಹಿಳೆ, ಅನೇಕ ಶತಮಾನಗಳ ಕಾಲ ಅಜ್ಞಾತ ವಾಸವನ್ನನು

ಭವಿಸಬೇಕಾಯಿತು. ಪುರುಷನ ದಬ್ಬಾಳಿಕೆಯ ಪರಿಣಾಮವಾಗಿ ಆತನ ಸೂತ್ರದ ಬೊಂಬೆಯಾಗಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹೀಗೆ ಯಾವುದೇ ರಂಗದಲ್ಲಿಯೂ ಸ್ವಾತಂತ್ರ್ಯವನ್ನು ಪಡೆಯದೆ ಅನೇಕ ಶತಮಾನಗಳ ಕಾಲ ತುಳಿಯಲ್ಪಟ್ಟಳು. ಹೀಗೆ ತುಳಿಯಲ್ಪಟ್ಟ ಸ್ತ್ರೀಯ ಭಾಗ್ಯದ ಬಾಗಿಲು 12ನೆಯ ಶತಮಾನದಲ್ಲಿ ತೆರೆಯಲ್ಪಟ್ಟಿತು. ಈ ದಿಶೆಯಲ್ಲಿ ಮೊದಲ ಹೆಜ್ಜೆಯಿಟ್ಟವರೆಂದರೆ ಬಸವಾದಿ ಪ್ರಮಥರು.

"ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನಾ" ಎಂದು ಸಿದ್ಧರಾಮರು ಅರುಹಿದ್ದಾರೆ. ಶರಣರು ಮಹಿಳೆಯರಿಗೆ ದೈವತ್ವದ ಸ್ಥಾನವನ್ನಿತ್ತು ಗೌರವಿಸಿದರು. "ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ" ಎಂಬ ದೇವರ ದಾಸಿಮಯ್ಯರ ಹಾಗೂ 'ಉಭಯ ದೃಷ್ಟಿಯಿಂದ ದೃಷ್ಟವಕಾಂಬಂತೆ, ದಂಪತಿಗಳು ಏಕಭಾವವಾಗಿ ನಿಲ್ಲಬೇಕು' ಎಂಬ ಅಲ್ಲಮಪ್ರಭುವಿನ ನುಡಿ ಪುರುಷ ಹಾಗೂ ಮಹಿಳೆಯರಿಗೆ ಇರುವ ಸಮಾನತೆಯನ್ನು ಸೂಚಿಸುತ್ತದೆ. 12ನೆಯ ಶತಮಾನದಲ್ಲಿ ಸ್ತ್ರೀಯರು ಸಮಾಜದ ಎಲ್ಲ ರಂಗಗಳಲ್ಲಿಯೂ ಭಾಗವಹಿಸಿದುದಲ್ಲದೆ, ಧಾರ್ಮಿಕ ಸ್ವಾತಂತ್ರ್ಯವನ್ನು ಪಡೆದು ಇಹಪರಗಳಲ್ಲಿ ಸಲ್ಲುವಂತಾಯಿತು.

ಶರಣರ ನಂತರ ಶ್ರೀ ರಾಜಾರಾಮ ಮೋಹನರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ ಮೊದಲಾದವರು ಸ್ತ್ರೀಯನ್ನು ಗೌರವಿಸಿ, ಸಮಾಜದ ಸರ್ವತೋಮುಖ ಪ್ರಗತಿಗೆ ಪ್ರಯತ್ನಿಸಿದರು. "ಯಾವ ರಾಜ್ಯ, ಯಾವ ಜನಾಂಗ ಮಹಿಳೆಯರಿಗೆ ಗೌರವವನ್ನು ತೋರಿಸುವುದಿಲ್ಲವೋ ಅದು ಎಂದಿಗೂ ಘನತೆಗೆ ಏರಿಲ್ಲ, ಏರಲಾರದು" ಎಂಬ ಎಚ್ಚರಿಕೆಯ ಗಂಟೆಯನ್ನು ಬಾರಿಸಿದ್ದಾರೆ ಸ್ವಾಮಿ ವಿವೇಕಾನಂದರು. ಮಹಾತ್ಮ ಗಾಂಧೀಜಿಯವರು "ಬಾಳಿನ ಧಾರ್ಮಿಕತೆಯನ್ನೂ ಪವಿತ್ರತೆಯನ್ನೂ ರಕ್ಷಿಸುವ ರಕ್ಷಣಾಧಿಕಾರಿ ಹೆಣ್ಣು" ಎಂದರುಹಿ ಮಹಿಳೆಯ ಘನತರ ಜವಾಬ್ದಾರಿಯನ್ನು ಎತ್ತಿ ತೋರಿಸಿದ್ದಾರೆ. ಇಂತಹ ರಕ್ಷಣಾಧಿಕಾರಿಯಾದ ಸ್ತ್ರೀಯನ್ನು ಸುಧಾರಿಸುವುದು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಆದರೆ ಆ ಕರ್ತವ್ಯ ಸರಿಯಾದ ವ್ಯಕ್ತಿಗಳ ಸಹಕಾರವಿಲ್ಲದೆಯೋ ಅಥವಾ ಸ್ತ್ರೀಯರ ದೌರ್ಭಾಗ್ಯದ ಫಲವೋ, ಕಾಲಕಾಲಕ್ಕೆ ಸುಧಾರಿಸದೆ ಕುಂಠಿತವಾಗಿರುವುದು ಕಂಡುಬರುತ್ತದೆ. ಹೀಗೆ ಮಂದಗತಿಯಲ್ಲಿ ಸಾಗುತ್ತಿರುವ ಮಹಿಳೋದ್ಧಾರ ಕಾರ್ಯವನ್ನು ಜಗದ್ಗುರುಗಳವರು ಕಳಕಳಿಯಿಂದ ಹಾಗೂ ಉದಾರ ಹೃದಯದಿಂದ ಮಾಡುತ್ತಿರುವುದು ಈ ಶತಮಾನದ ಮಹಿಳೆಯರ ಸೌಭಾಗ್ಯವೆನ್ನಬಹುದು.

ಶ್ರೀಗಳವರು ಸಮಾಜಕ್ಕೆ ಮಾಡುತ್ತಿರುವ ಕಾರ್ಯದ ಮಹತಿ ಅಪರಿಮಿತವಾದುದು. ಅವರ ದೂರದೃಷ್ಟಿ, ವಿದ್ಯಾಕೇಂದ್ರಗಳನ್ನು ಸ್ಥಾಪಿಸುವಲ್ಲಿ ಅವರ ಔಚಿತ್ಯಜ್ಞಾನ ಅಸದಳವಾದುದು. ಬೇಬಿ ಸಿಟ್ಟಿಂಗ್ ಸೆಂಟರ್ (Baby Sitting Center)ನಿಂದ ಮೊದಲು ಗೊಂಡು ಕಾಲೇಜಿನವರೆಗೆ ಎಲ್ಲ ಹಂತದ ವಿದ್ಯಾಕೇಂದ್ರಗಳನ್ನು ತೆರೆದಿದ್ದಾರೆ. ಬೇಬಿ ಸಿಟ್ಟಿಂಗ್ ಸೆಂಟರ್, ಬಾಲವಿಹಾರಗಳಲ್ಲದೆ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆಗಳಲ್ಲದೆ

ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕವಾದ ಪ್ರೌಢಶಾಲೆ ಹಾಗೂ ಮಹಿಳಾ ಕಾಲೇಜುಗಳನ್ನೂ ಸ್ಥಾಪಿಸಿದ್ದಾರೆ. ಇದಲ್ಲದೆ ಮಹಿಳೆಯರಿಗೇ ಮೀಸಲಾಗಿರುವ ಮೂಲ ಶಿಕ್ಷಣ ತರಬೇತಿ ಕೇಂದ್ರ ಹಾಗೂ ತಾಂತ್ರಿಕ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿರುವರು. ದಯಾಮಯರಾದ ಸ್ವಾಮೀಜಿಯವರು ಪ್ರಚಲಿತ ಸಮಾಜದ ಅವಶ್ಯಕತೆಗಳಿಗೆ ಅನುಗುಣವಾಗಿ ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ನಾಡಿನ ಭಾಗ್ಯೋದಯಕ್ಕೆ ಕಾರಣೀಭೂತರಾಗಿದ್ದಾರೆ. 'ಬೇಬಿ ಸಿಟ್ಟಿಂಗ್ ಸೆಂಟರ್'ಅನ್ನು ಮೈಸೂರಿನಲ್ಲಿಯೇ ಪ್ರಪ್ರಥಮವಾಗಿ ತೆರೆದು ಉದ್ಯೋಗಸ್ಥ ಮಹಿಳೆಯರ ಎಳೆಯ ಕಂದಗಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಏರ್ಪಡಿಸಿದ್ದಾರೆ. ಇಲ್ಲಿ ಮೂರು ತಿಂಗಳ ಮಗುವಿನಿಂದ ಹಿಡಿದು ಮೂರು ವರ್ಷದ ಮಕ್ಕಳವರೆಗೂ ನೋಡಿಕೊಳ್ಳುವ ವ್ಯವಸ್ಥೆಯಿದೆ. ಉದ್ಯೋಗಸ್ಥ ಮಹಿಳೆಯರಿಗೆ ಇದೊಂದು ವರದಾನ. ಒಮ್ಮೆ ಶ್ರೀಗಳವರ ವಿದ್ಯಾಸಂಸ್ಥೆಯನ್ನು ಸೇರಿದ ಮಕ್ಕಳು ಡಿಗ್ರಿಯವರೆಗೆ ಬೇಕಾದರೂ ಅಧ್ಯಯನ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ.

ಗ್ರಾಮೀಣ ಪ್ರದೇಶದಿಂದ ಬರುವ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಅನೇಕ ಸೌಲಭ್ಯಗಳನ್ನೊದಗಿಸಿಕೊಟ್ಟಿದ್ದಾರೆ. ಅವರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ತೆರೆದು ನಿರಾತಂಕವಾಗಿ ವಿದ್ಯಾಭ್ಯಾಸ ಮಾಡುವಂತೆ ಏರ್ಪಡಿಸಿದ್ದಾರೆ. ಮೂಲ ಶಿಕ್ಷಣ ತರಬೇತಿ ಪಡೆಯುವ ಹೆಣ್ಣುಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ವಿದ್ಯಾರ್ಥಿನಿಲಯವಿದೆ. ಇದಲ್ಲದೆ ನಾನಾ ಭಾಗಗಳಿಂದ ಬರುವ ಉದ್ಯೋಗಸ್ಥ ಮಹಿಳೆಯರಿಗಾಗಿ ಮೈಸೂರು ನಗರದಲ್ಲಿ ಒಂದು ಪ್ರತ್ಯೇಕ ವಸತಿಗೃಹವನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದ ಕೀರ್ತಿ ಶ್ರೀಗಳವರದು. ಹೀಗೆ ಸ್ತ್ರೀಯರಿಗೆ ಜ್ಞಾನಾನ್ನದಾಸೋಹದ ಅವಕಾಶವನ್ನು ಒದಗಿಸುವುದಲ್ಲದೆ ಅನೇಕ ಮಹಿಳೆಯರಿಗೆ ತಮ್ಮ ವಿದ್ಯಾಸಂಸ್ಥೆಗಳಲ್ಲಿ ಉದ್ಯೋಗ ಸೌಲಭ್ಯಗಳನ್ನೂ ಒದಗಿಸಿ ಕೊಟ್ಟಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯ ದುಡಿಮೆ ಅತ್ಯವಶ್ಯಕ ಎಂಬುದನ್ನು ಮನಗಂಡ ಶ್ರೀಗಳವರು ಉದಾರ ಹೃದಯದಿಂದ ನೂರಾರು ಜನರಿಗೆ ಉದ್ಯೋಗಾವಕಾಶ ವನ್ನು ಕಲ್ಪಿಸಿಕೊಟ್ಟು ತನ್ಮೂಲಕ ಸಮಾಜದ ಅಭ್ಯುದಯಕ್ಕೆ ಕಾರಣರಾಗಿದ್ದಾರೆ.

ಶ್ರೀಗಳವರ ಜ್ಞಾನಾನ್ನದಾಸೋಹ ಕೇವಲ ಪಟ್ಟಣಗಳಿಗೇ ಸೀಮಿತವಾಗದೆ ಗ್ರಾಮೀಣ ಪ್ರದೇಶಗಳಿಗೂ ಹಬ್ಬಿ ಹರಡಿದೆ. ದೇಶವು ಸರ್ವತೋಮುಖ ಪ್ರಗತಿಯನ್ನು ಹೊಂದಬೇಕಾದರೆ ಪಟ್ಟಣಗಳಿಂದ ಮಾತ್ರ ಸಾಧ್ಯವಿಲ್ಲ, ಹಳ್ಳಿಗಳೂ ಅತ್ಯವಶ್ಯಕವಾಗಿ ಮುಂದುವರಿಯಬೇಕು ಎಂಬುದನ್ನು ಮನಗಂಡ ಶ್ರೀಗಳವರು ಗ್ರಾಮೀಣ ಪ್ರದೇಶಗಳಲ್ಲಿ ಸ್ತ್ರೀ ಪುರುಷರಿಬ್ಬರಿಗೂ ವಿದ್ಯಾಭ್ಯಾಸದ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ. ಹೀಗೆ ಶ್ರೀಗಳವರ ಅಭಯಹಸ್ತ ವಿಶಾಲವಾಗಿ ಚಾಚಿದೆ. ಗ್ರಾಮೀಣ ಪ್ರದೇಶದ ಮಕ್ಕಳೂ ಈ ಕೃಪಾ ಛತ್ರದಲ್ಲಿ ಆಶ್ರಯ ಪಡೆದು ಧನ್ಯರಾಗುತ್ತಿದ್ದಾರೆ.

ಪ್ರಸಕ್ತ ಸಮಾಜದ ಅವಶ್ಯಕತೆಯನ್ನು ಗಮನಿಸದೇ ಇರುವ ಧರ್ಮ ವ್ಯರ್ಥ ಎಂಬ ಶ್ರೀಗಳವರ ನಿಲವು ಅವರ ರಚನಾತ್ಮಕ ವ್ಯಕ್ತಿತ್ವದ ಕುರುಹಾಗಿದೆ. ಧರ್ಮಪೀಠಾಧಿಪತಿಗಳಾದ

ಶ್ರೀಗಳವರು ಕೇವಲ ಧರ್ಮಪ್ರಸಾರ ಕಾರ್ಯವೊಂದೇ ಇಂದಿನ ಸಮಾಜಕ್ಕೆ ಸಾಲದು ಎಂಬುದನ್ನು ಮನವರಿಕೆ ಮಾಡಿಕೊಂಡರು. ಜ್ಞಾನದ ತಳಹದಿಯ ಮೇಲೆ ಧರ್ಮ ನಿಂತಿದ್ದೇ ಆದರೆ ಭದ್ರಬುನಾದಿಯನ್ನು ಹಾಕಿದಂತೆ ಎಂಬ ಸತ್ಯವನ್ನರಿತ ಶ್ರೀಗಳವರು, ಪ್ರಸಕ್ತ ಸಮಾಜದ ಆವಶ್ಯಕತೆ ಯನ್ನರಿತು 'ಜ್ಞಾನಾನ್ನದಾಸೋಹ' ಕಾರ್ಯನಿರತರಾಗಿ ಆ ಮೂಲಕ ಧರ್ಮದ ಕೋಟೆಯನ್ನು ಭದ್ರಪಡಿಸಿದ್ದಾರೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಭಾರತೀಯ ಧರ್ಮಸೂತ್ರವನ್ನು ಸಮಾಜದ ಜನರಿಗೆ ಅರುಹುತ್ತ ಶ್ರೀಗಳವರು ಧರ್ಮ, ಸಾಹಿತ್ಯ ಹಾಗೂ ಸಮಾಜೋದ್ಧಾರ ಕಾರ್ಯನಿರತರಾಗಿ ಆ ದಿಸೆಯಲ್ಲಿ ಅದ್ಭುತ ಸಾಧನೆ ಮಾಡಿರುವುದು ಸರ್ವರಿಗೂ ವಿದಿತವಾಗಿದೆ. 'ಆಧುನಿಕ ಶಿಕ್ಷಣಕ್ಕೆ ಸನಾತನ ಧರ್ಮವನ್ನು ಅಳವಡಿಸಿಕೊಂಡಾಗ ಸಮಾಜದ ಕ್ಷೋಭೆ ಹಿಂಗುತ್ತದೆ' ಎಂದರುಹಿದ ಜಗದ್ಗುರುವರ್ಯರು ಸಮಾಜವೆಂಬ ಶಿಶುವಿಗೆ ಮಾತೃಸ್ವರೂಪರಾಗಿ, ತಾಯಿಯು ಅಶಕ್ತವಾದ ಮಗುವಿಗೆ ಕಾಲಕ್ಕೆ ಅನುಗುಣವಾಗಿ ಪೌಷ್ಟಿಕ ಆಹಾರವನ್ನು ಕೊಟ್ಟು ಸಶಕ್ತನನ್ನಾಗಿ ಮಾಡುವಂತೆ, ಸಮಾಜದ ಶ್ರೇಯೋಭಿವೃದ್ಧಿಗೆ ಅಹರ್ನಿಶಿ ದುಡಿಯುತ್ತಿದ್ದಾರೆ. ಸರಕಾರ ಹಾಗೂ ವಿಶ್ವವಿದ್ಯಾಲಯಗಳು ಮಾಡುವಂತಹ ರಾಷ್ಟ್ರವಿಧಾಯಕ ಕಾರ್ಯಗಳನ್ನು ಅವರು ಮಾಡುತ್ತಿರುವುದು ನಾಡಿನ ಸೌಭಾಗ್ಯ. ಶ್ರೀಗಳವರು ಕೇವಲ ಒಂದು ವ್ಯಕ್ತಿಯಲ್ಲ, ಒಂದು ಮಹಾಶಕ್ತಿ.

ದೇಶದ ಬಗೆಗೆ ಅವರಿಗಿರುವ ಕಳಕಳಿಯ ಪರಿಣಾಮವೇ ಈ ಮಹಾಸಂಸ್ಥೆಯ ಉದಯಕ್ಕೆ ನಾಂದಿ. ಸ್ತ್ರೀಪುರುಷರಿಬ್ಬರೂ ಒಂದು ರಥದ ಎರಡು ಗಾಲಿಗಳಂತೆ. ಸಮಾಜವೆಂಬ ರಥ ಸನ್ಮಾರ್ಗದಲ್ಲಿ ಸುಗಮವಾಗಿ ಸಾಗಬೇಕಾದರೆ ಸ್ತ್ರೀ ಪುರುಷರೆಂಬ ಎರಡು ಚಕ್ರಗಳೂ ಸಮಾನವಾಗಿ ಮುಂದುವರಿಯಬೇಕು. ಅದಕ್ಕೆ ಕಡೆಗೀಲು ಆಧಾರ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡಬುದ ಮಾಬುದೆ
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಢಶರಣರ
ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ

ಆ ಕಡೆಗೀಲೆಂದರೆ 'ಧರ್ಮ'. ಧರ್ಮವೆಂಬ ಕಡೆಗೀಲನ್ನು ಹಾಕಿ ಸ್ತ್ರೀ ಪುರುಷರೆಂಬ ಗಾಲಿಗಳ ಮೂಲಕ ಸಮಾಜವೆಂಬ ರಥವನ್ನು ಮುನ್ನಡೆಸುವ ಮಹಾಸಾರಥಿಯಾಗಿದ್ದಾರೆ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು.

ಪರಮ ಕರುಣಾಳುಗಳೂ, ಸೌಜನ್ಯ ಸಂಸ್ಕೃತಿಯ ಸಾಕಾರಮೂರ್ತಿಗಳೂ, ಕರ್ತೃತ್ವಶಕ್ತಿ ಮಹಿಮಾನ್ವಿತರೂ ಆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ನಮ್ಮ ಪುಣ್ಯದ ಫಲವಾಗಿ ಉದಿಸಿ ಆ ಮೂಲಕ ನಾಡಿಗೆ ನಾಡನ್ನೇ ಉದ್ಧರಿಸುವ ಕಾಯಕನಿರತ ಯೋಗಿಯಾಗಿದ್ದಾರೆ. ಇಂತಹ ಲೋಕಕಲ್ಯಾಣ ಕಾರ್ಯಗಳನ್ನು ನಿರಂತರ ಮಾಡುತ್ತಿದ್ದರೂ ಮಾಡಿದೆನೆಂಬ ಭಾವ ಮನದಲ್ಲಿ ಮೂಡಲಿಕ್ಕೂ ಅಸ್ಪದವೀಯದೆ ಬಸವಣ್ಣನವರ ನುಡಿಗಡಣಕ್ಕೆ ಸಾಕ್ಷೀಭೂತರಾಗಿದ್ದಾರೆ.

ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಚಂ ॥ ಸಿರಿ ಶಚಿ ವಾಣಿ ರೋಹಿಣಿ ಕರಾಳಿ ಕಳಾವತಿ ಕಾಳರಾತ್ರಿ ಸೌಂ।
ದರಿ ವನಲಕ್ಷ್ಮಿ ಶಾಕಿನಿ ಕಪಾಲಿನಿ ಡಾಕಿನಿ ಕಾಳಿ ಮಾರಿ ಶಾ ॥
ರ್ವರಿ ರತಿ ಮುಕ್ತಕೇಶಿ ಶವವಾಹಿನಿ ಮೋಹಿನಿ ಚಂಡಿ ಸಿದ್ಧಸಂ।
ಗರಚರಚಕ್ರಧಾರಿಣಿ ಮನೋನ್ಮನಿ ಮಾಲಿನಿಯೆಂಬ ಶಕ್ತಿಯರ್ ॥ ೧೨ ॥

ಟೀಕೆ ॥ ಸಿರಿ – ಲಕ್ಷ್ಮಿ (ಶ್ರೀ), ಶಚಿ – ಇಂದ್ರನ ಮಡದಿ, ವಾಣಿ – ಸರಸ್ವತಿ, ರೋಹಿಣಿ – ಚಂದ್ರನ ಮಡದಿ, ಕರಾಳಿ – ಕಾಳರಾತ್ರಿ, ಸೌಂದರಿ, ವನಲಕ್ಷ್ಮಿ – ವನದೇವತೆ, ಶಾಕಿನಿ – ಪಿಶಾಚದೇವತೆ, ಕಪಾಲಿನಿ – ಭೈರವನ ಹೆಂಡತಿ, ಡಾಕಿನಿ – ದೆವ್ವಗಳೊಡತಿ, ಕಾಳಿ – ವೀರಭದ್ರನ ಹೆಂಡತಿ, ಮಾರಿ – ಮೃತ್ಯುದೇವತೆ, ಶಾರ್ವರಿ – ರಾತ್ರಿದೇವತೆ, ರತಿ – ಮನ್ಮಥನ ಹೆಂಡತಿ, ಮುಕ್ತಕೇಶಿ – ಪ್ರತ್ಯಂಗಿರಾ ದೇವತೆ, ಶವವಾಹಿನಿ – ದಕ್ಷಿಣಕಾಳಿ, ಮೋಹಿನಿ – ಗಂಧರ್ವದೇವಿ, ಚಂಡಿದುರ್ಗಿ – ಸಿದ್ಧಿ ಫಲದೇವತೆ, ಸಂಗರಚರಿ – ರಣದುರ್ಗೆ, ಚಕ್ರಧಾರಿಣಿ – ಯಂತ್ರದೇವತೆ, ಮನೋನ್ಮನಿ – ನಾಡಿದೇವತೆ, ಮಾಲಿನಿ – ಪುಷ್ಪದೇವತೆ ಎಂಬ ಶಕ್ತಿಯರ್ – ಸಾಮರ್ಥ್ಯ ರೂಪಿಣಿಯರು ॥ ೧೨ ॥

ಮ ॥ ಕ್ಷಿತಿ ಶಾಕಾಂಬರಿ ವಾರದೇವತೆಯರಾಶಾದೇವಿಯರ್ಯಜ್ಞದೇ।
ವತೆ ಮಂತ್ರಾತ್ಮಿಕೆ ಸಪ್ತಮಾತೃಕೆಯರಂಭೋವಾಸಿನೀ ನಿಮ್ನಗಾ ॥
ಸತಿಯರ್ಜೋಗಿಣಿಯರ್ಸುಧಾಂಶು ವಧುಗಳ್ಗಾಯಿತ್ರಿ ಸಾವಿತ್ರಿ ಸ।
ನ್ಮತಿವಿಖ್ಯಾತೆಯನಿಪ್ಪ ದೇವಿಯರ ಮಂದೋತ್ಸಾಹದಿಂದೆಯ್ದಿದರ್ ॥ ೧೩ ॥

ಟೀಕೆ ॥ ಕ್ಷಿತಿ – ಭೂದೇವಿ, ಶಾಕಾಂಬರೆ –ವನದುರ್ಗೆ, ವಾರದೇವತೆಯರ್ – ದಿವಾಭಿಮಾನಿಯರು, ಆಶಾದೇವಿಯರ್ – ದಿಗ್ದೇವತೆಗಳು, ಯಜ್ಞದೇವತೆ – ಕರ್ಮಸ್ವರೂಪಿಣಿ, ಮಂತ್ರಾತ್ಮಿಕೆ, ವೇದರೂಪಿಣಿ ಸಪ್ತಮಾತೃಕೆಯರ್ – ೧ ಬ್ರಾಹ್ಮೀ, ೨ ಮಾಹೇಶ್ವರಿ, ೩ ಕೌಮಾರಿ, ೪ ವೈಷ್ಣವಿ, ೫ ವಾರಾಹಿ, ೬ ಇಂದ್ರಾಣಿ, ೭ ಚಾಮುಂಡಿ, ಅಂಭೋವಾಸಿನಿ, ವಾರುಣೀದೇವಿ, ನಿಮ್ಮಗಾಸತಿಯರ್ – ನದ್ಯಭಿಮಾನಿಗಳು, ಜೋಗಿಣಿಯರ್ – ೬೪ ಕೋಟಿ ಯೋಗಿನಿಗಣಂಗಳು, ಸುಧಾಂಶುವಧುಗಳ್ –

ಚಂದ್ರಪತ್ನಿಯರಾದ ನಕ್ಷತ್ರಂಗಳೂ, ಗಾಯತ್ರಿ – ಪ್ರಾತಸ್ಸಂಧ್ಯಾದೇವತೆ, ಸಾವಿತ್ರಿ – ಮಾಧ್ಯಾಹ್ನಿಕ ಸಂಧ್ಯಾದೇವತೆ, ಸನ್ಮತಿ, ಸಾಯಂ – ಸಂಧ್ಯಾದೇವತೆ, ವಿಖ್ಯಾತಿ ಕೀರ್ತಿದೇವಿಯೆನಿಪ್ಪ – ಎನಿಸಿಕೊಂಡಿರುವ, ದೇವಿಯರ್ – ದೇವಸ್ತ್ರೀಯರು, ಅಮಂದೋತ್ಸಾಹದಿಂದ – ಕಿರಿದಾಗದ ಸಂತೋಷದಿಂದ ಎಯ್ದಿದರ್ ॥ ೧೩ ॥

ಚಂ ॥ ಬಡನಡು ಬಳ್ಕೆ ಬಟ್ಟಮೊಲೆ ಮೇಲುದಮೆತ್ತನಿತಂಬಮಂಡಲಂ ।
ಪೊಡರೆ ಕಟಾಕ್ಷಕಾಂತಿ ಮಿರುಗುತ್ತಿರೆ ಸೋರ್ಮುಡಿ ಜಾರೆಮೀರಿ ಧೀಂ ॥
ಕಿಡೆರದನಾಂಶುಬಿಲ್ಸರಗಳ ನಾರತುಕರಾಗ್ರದೊಳಾರ್ಪಿನಿಂದದೇಕೆ ।
ನಡೆದುದೊಕಾರ ಕಾರ್ಮುಗಿಲ ಬಿಣ್ಣದತಿಣ್ಣದ ನಿರ್ಜರೀಜನಂ ॥ ೧೪ ॥

ಟೀಕೆ ॥ ಬಡನಡು – ಸೂಕ್ಷ್ಮ ಮಧ್ಯವು, ಬಳ್ಕೆ – ಕದಲುತ್ತಿರಲು, ಬಟ್ಟಮುಲೆ – ವೃತ್ತಕುಚಾಗ್ರವು, ಮೇಲುದು – ಮೇಲುಶರಗನ್ನು, ಎತ್ತೆ – ನಿತಂಬಮಂಡಲಂ, ಶ್ರೋಣಿಯು, ಪೊಡರೆ – ಉಬ್ಬಲು, ಕಟಾಕ್ಷಕಾಂತಿ – ಕುಡಿನೋಟದ ಹೊಳಪು, ಮಿರುಗುತ್ತಿರೆ – ಥಳಥಳಿಸಲು, ಸೋರ್ಮುಡಿ – ಜೋಲ್ದುರುಬು, ಜಾರೆ – ಬಿಚ್ಚಿಹೋಗುತ್ತಿರಲು, ರದನಾಂಶು – ಹಲ್ಲುಗಳ, ಕಾಂತಿ – ಮಿಂಚಿ, ಧೀಂಕಿಡೆ – ಧುಮ್ಮಿಕ್ಕುತ್ತಿರಲು, ಬಿಲ್ಸರಗಳಂ ಧನುರ್ಬಾಣಗಳನ್ನು, ಕರಾಗ್ರದೊಳು – ಕೈಕೊನೆಗಳಲ್ಲಿ, ಆಂತು – ಹಿಡಿದು, ಆರ್ಪಿನಿಂ – ಗರ್ವದಿಂದ, ಕಾರ್ಮುಗಿಲ – ಕಪ್ಪುಮೋಡದ, ಬಣ್ಣದ – ವರ್ಣವುಳ್ಳ, ತಿಣ್ಣದ – ಮಂದಗಮನದ, ನಿರ್ಜರೀಜನಂ – ದೇವಸ್ತ್ರೀಯರು, ಏಂ ನಡೆದುದು – ಏನು ಸೊಗಸಾಗಿ ನಡೆದು ಬರುತ್ತಿದ್ದರು ॥ ೧೪ ॥

ಮ ॥ ಅಳಿಕುಲ ನೀಲಕುಂತಳದ ಕಾಂತಿವಪುರ್ಲತೆಯಂ ಮುಸುಂಕಿದಂ ।
ತಳವಡೆ ಕರ್ಮ ಕಾರ್ಮುಗಿಲ ಮಿಂಚೆನೆ ಕಣ್ಗದಿಪುರ್ವಿಮಿಂಚೆ ಸಾ ॥
ರ್ದೆಳಸಿಪಗಿಲ್ತ ಕೇಕಿಯನೆ ಬಲ್ಮುಡಿತೋರೆ ಕಲಾವಮಾಲೆ ಸಂ ।
ಗಳಿಸೆ ನಗೇಂದ್ರಜಾತೆಯೊಡನೇಳ್ತರುತಿರ್ದರಮರ್ತ್ಯನಾರಿಯರ್ ॥ ೧೫ ॥

ಟೀಕೆ ॥ ಅಳಿಕುಲ – ತುಂಬಿವಿಂಡಿನಂತೆ, ನೀಲ – ಕಪ್ಪಾದ, ಕುಂತಳನ – ಕುರುಳಿನ, ಕಾಂತಿ–ಹೊಳಪು, ವಪುರ್ಲತೆಯಂ – ಬಳ್ಳಿಯಂತಿರ್ಪ ಮೈಯನ್ನು, ಮುಸುಕಿದಂತೆ – ಮುಚ್ಚಿಕೊಂಡಿರುವಂತೆ, ಕರ್ಮ – ಶರೀರದ ವರ್ಣವು, ಅಳವಡೆ – ಅಣಿಯಾಗಿರಲು, ಕಾರ್ಮುಗಿಲ – ಕಪ್ಪುಮೋಡದ, ಮಿಂಚೆನೆ – ಮಿಂಚೋ ಇದು ಎಂಬಂತೆ, ಕಣ್ಗದಿರ್ – ಕಣ್ಣಿನ ಕಿರಣಗಳು, ಉರ್ವಿ– ಉರುಬಿ, ಮಿಂಚಿ – ಹೊಳೆಯಲು, ಸಾರ್ದು – ಹತ್ತಿರಕ್ಕೆ ಬಂದು, ಎಳಸಿ – ತಾನಾಗಿ ಬಯಸಿ, ಪಗಿಲ್ತ – ಗರಿಗಳನ್ನು ಬಿಚ್ಚಿಕೊಂಡಿರುವ, ಕೇಕಿಯನೆ – ನವಿಲೋ ಎಂಬ ಹಾಗೆ, ಬಿಲ್ಮುಡಿ – ತೋರವಾದ ತಲೆಗಂಟು, ತೋರೆ – ಕಾಣಿಸುತ್ತಿರಲು, ಕಲಾವಮಾಲೆ – ನವಿಲುಗರಿಗಳ ದಂಡೆಯು, ಸಂಗಳಿಸೆ – ಕೂಡಿರಲು, ಅಮರ್ತ್ಯ ನಾರಿಯರ್ – ದೇವಸ್ತ್ರೀಯರು, ನಗೇಂದ್ರಜಾತೆಯ – ಗಿರಿ ರಾಜಪುತ್ರಿಯ, ಒಡನೆ – ಸಂಗಡ, ಏಳ್ತರುತಿರ್ದರ್ – ಎದ್ದುಬರುತಿದ್ದರು.

ತಾ॥ ಬೇಡಿತಿಯರು ಸಹಜವಾಗಿ ಕಪ್ಪಗೆ ಕಾಣಿಸುತ್ತಿರಲು, ಅವರ ಮುಂಗುರುಳಿನ ಕಪ್ಪುಬಣ್ಣವು ಮೈಯನ್ನು ಮುಚ್ಚಿಕೊಂಡಿತೋ ಎಂದು ಊಹಿಸುವದರಿಂದ ಮೈ ಕಪ್ಪಿಗಿಂತಲೂ ಕೂದಲು ಕಪ್ಪು ಮತ್ತು ಹೆಚ್ಚಾಗಿರುವದೆಂದು ತೋರುವ ಧ್ವನ್ಯರ್ಥದಿಂದ ಸಿದ್ಧವಾಗುವ ಹೇತೋತ್ಪ್ರೇಕ್ಷಾಲಂಕಾರವು. ಆಂತಾ ಕಪ್ಪು ಮೈಯಲ್ಲಿ ಕಣ್ಣಿನ ಹೊಳಪು ಕರಿಯ ಮೋಡದೊಳಗಿನ ಮಿಂಚೋ ಎಂಬಂತೆ ಉತ್ಪ್ರೇಕ್ಷಾಲಂಕಾರವು. ತುರುಬು ನವಿಲೋ ಎಂಬಂತೆ ಉತ್ಪ್ರೇಕ್ಷೇ ಮೈಯನ್ನು ಮುಗಿಲೆನುತಲೂ ಕಣ್ಣ ಹೊಳಪನ್ನು ಮಿಂಚೆನುತಲೂ ಭ್ರಮಿಸಿ ನವಿಲು ಬಂದಂತೆ ಕಾರಣವನ್ನು ಕಲ್ಪಿಸುವ ಧ್ವನಿಯಿಂದ ಭ್ರಾಂತಿನಿಮಿತ್ತಕ ಹೇತೋತ್ಪ್ರೇಕ್ಷಾಲಂಕಾರವು ॥ ೧೫ ॥

ಚಂ ॥ ತಳಿರ್ಗಳಮರ್ತೆವೆತ್ತ ತಲೆಗಟ್ಟು ಲತಾಂತದ ಮಾಲೆ ಬೆನ್ನ ಬ ।
ತ್ತಳಿಕೆ ಮರಂದದಣ್ಣುವಸುರಂಗಿಗೆ ಪೀಲಿಯ ಪಕ್ಕಜಲ್ಲಿ ಗೇ ॥
ಣಳವಡೆತೊಟ್ಟ ಪೊಂಬುಲಿಯ ಸಮ್ಮದ ಚಲ್ಲಣವೊಪ್ಪಿ ಬಿಲ್ದರ ।
ಲ್ದಳೆದು ಗಣಾಳಿ ರುದ್ರತತಿತಾಳ್ದುದನೂನಪುಳಿಂದ ವೇಷಮಂ ॥ ೧೬ ॥

ಟೀಕೆ ॥ ತಳಿರ್ಗಳ – ಚಿಗುರುಗಳ, ಅಮರ್ತೆವೆತ್ತ – ಹೊದಿಕೆಯಂ ಪಡೆದ, ತಲೆಗಟ್ಟು – ಟೊಪ್ಪಿಗೆ, ಲತಾಂತದ – ಹೂವಿನ, ಮಾಲೆ – ಸರ, ಬೆನ್ನ – ಪೃಷ್ಠದಲ್ಲಿರುವ, ಬತ್ತಳಿಕೆ – ಅಂಬಿನ ಸಂಬಳಿಗೆ, ಮರಂದದ – ಹೂಜೇನಿನ, ಅಣ್ಪು – ಅಂಗರಾಗ, ಪಸುರಂಗಿಗೆ – ಹಸಿರುಕವಚಕ್ಕೆ, ಪೀಲಿಯ – ನವಿಲುಗರಿಗಳ, ಪಕ್ಕಜಲ್ಲಿ – ಪಾರ್ಶ್ವದ ಝಾಲರಿ, ಗೇಣಳವಡೆ – ಗೇಣುದ್ದವಾಗಿ ಒಪ್ಪುತ್ತಿರಲು, ತೊಟ್ಟಪೊಂಬುಲಿಯ – ಹೊಂಬಣ್ಣ ಹುಲಿಯ, ಸಮ್ಮದ – ಚರ್ಮದ, ಚಲ್ಲಣಂ – ಚಡ್ಡಿ, ಒಪ್ಪಿ – ಸೊಗಸಾಗಿ, ಬಿಲ್ದರಲ್ದಳೆದು – ಧನುರ್ಬಾಣಂಗಳಂ ಪಿಡಿದು, ಗಣಾಳಿ – ಪ್ರಮಥಶ್ರೇಣಿಯೂ, ರುದ್ರತತಿ – ರುದ್ರಮೂರ್ತಿಗಳ ಗುಂಪು, ಅನೂನಪುಳಿಂದ ವೇಷಮಂ – ಕೊರತೆಗೊಳ್ಳದ ಕಿರಾತರ ಅಲಂಕಾರವನ್ನು, ತಾಳ್ದುದು – ಧರಿಸಿತು. ಕಿರಾತ ವೇಷಸ್ಯ ಭಾವೋಕ್ತ್ಯಲಂಕಾರಂ.

ಮ॥ ಸ್ರ ॥ ನೆರದೇಳ್ತಂದಿರ್ದುದಾ ವೇಳೆಯೊಳೆ ವನಚರಾಕಾರಮಂ ತಾಳ್ದು ನಂದೀ ।
ಶ್ವರನುಂ ಭೃಂಗೀಶ ವೀರೇಶ್ವರ ಗುಹಗಣಪರ್ದಾರು ಕಂರೇಣುಕಂ ದು ॥
ರ್ಧರನುಂ ಧೂಮಾಕ್ಷನುಂ ಧೂರ್ಜಟಿಯಸಿತಗಳಂ ಬಭ್ರು ಶುಭ್ರಾಂಗನಂಭೋ ।
ಧರನಾದಂ ತಾಳಜಂಘಂ ಮೊದಲೆನಿಪ ಮಹಾಸತ್ಯಸಾಂದ್ರರ್ಗಣೇಂದ್ರರ್ ॥ ೧೬ ॥

ಟೀಕೆ ॥ ಆವೇಳೆಯೊಳೆ – ಆದೇ ಹೊತ್ತಿನಲ್ಲಿ, ನಂದೀಶ್ವರನುಂ – ಬಸವನೂ, ಭೃಂಗೀಶ – ಪ್ರಮಥನಾಟ್ಯಪತಿಯೂ (ರುದ್ರಸಭೆಯೊಳು ಹಾಸ್ಯಗಾರ), ವೀರೇಶ್ವರ – ವೀರಭದ್ರ, ಗುಹ – ಕುಮಾರಸ್ವಾಮಿ, ಗಣಪರ್ – ವಿಘ್ನೇಶ್ವರ, ದಾರುಕ, ರೇಣುಕ, ದುರ್ಧರ, ಧೂಮ್ರಾಕ್ಷ, ಧೂರ್ಜಟಿ, ಅಸಿತಗಳ, ಬಭ್ರು ಶುಭ್ರಾಂಗ, ಅಂಭೋಧರನಾದ ತಾಳಜಂಘ ಎಂಬುವರು, ಮೊದಲೆನಿಪ – ಮುಂತಾದ, ಮಹಾಸತ್ಯಸಾಂದ್ರರ – ಅಧಿಕ

ಸಾಮರ್ಥ್ಯ ಘನರಾದ, ಗಣೇಂದ್ರರ – ವೀರಶೈವ ಗಣಾಧಿಪತಿಗಳ, ವನಚರ – ಕಾಡಿನಲ್ಲಿ ತಿರುಗುವ ಬೇಡರ. ಆಕಾರಮಂ – ರೂಪವನ್ನು. ತಾಳ್ದು – ಧರಿಸಿ, ಏಳ್ತಂದು – ಬಂದು, ನೆರೆದು – ತುಂಬಿ, ಇರ್ದುದು – ಇದ್ದರು. ॥ ೧೭ ॥

ಮ॥ ಸ್ರ ॥ ಭುವನೇಶಂ ಭೂತಿಯುಕ್ತಂ ಭುಜಗಧರನಜೇಯಂ ಮಹಾಕಾಯನು ।
ಗ್ರಂ ಶಿವರುದ್ರಂ ಪೂರ್ಣಭದ್ರಂ ಬಲವಿಕರಣನಭ್ರಾಂಗನಾದಿತ್ಯವರ್ಣಂ ॥
ಭವನಾಶಂ ಶಂಭು ರುದ್ರಂ ಕಲವಿಕರಣನೋಂಕಾರನೀಶಾನರುದ್ರಂ ।
ಧವಳಾಂಗಂ ಧರ್ಮರೂಪಂ ದಮನವಿಮದ ರುದ್ರರ್ಕಳೆಯ್ತಂದರಾಗಳ್ ॥ ೧೮ ॥

ಟೀಕೆ ॥ ಭುವನೇಶಂ, ಭೂತಿಯುಕ್ತಂ, ಭುಜಗಧರಂ, ಅಜೇಯಂ, ಮಹಾಕಾಯಂ, ಉಗ್ರಂ, ಶಿವರುದ್ರಂ, ಪೂರ್ಣಭದ್ರಂ, ಬಲವಿಕರಣಂ, ಅಭ್ರಾಂಗಂ, ಆದಿತ್ಯವರ್ಣಂ, ಭವನಾಶಂ, ಕಮಲವಿಕರಣಂ, ಓಂಕಾರಂ, ಈಶಾನರುದ್ರಂ, ಧವಳಾಂಗಂ, ಧರ್ಮರೂಪಂ, ದಮನರುದ್ರಂ, ವಿಮದರುದ್ರಂ, ಆಗಳ್ ಎಯ್ತಂದರ್.

ತಾ ॥ ಅನ್ವರ್ಥನಾಮರಾದ ರುದ್ರಗಣಂಗಳು ಬಂದರು ॥ ೧೮ ॥

ಮ॥ ಸಿಡಿಲಂ ನುರ್ಗುವ ಶೇಷನಂ ತೊಡುವ ಕಲ್ಪಾಂತಾಗ್ನಿಯಂ ತೀಡಿ ಬೊ ।
ಟ್ಟಿಡುವಾಕಾಶಧರಾತಳಂಗಳನೆ ಕೈದಾಳಂಗಳಂ ಮಾಳ್ಪ ಪೇ ॥
ರ್ಗಡಲಂ ಪೀರ್ವ ಕುಲಾಚಲಂದಳೆದು ಪೊಯ್ಸಂಡಾಡುವಾದಿತ್ಯನಂ ।
ಮಿಡಿವಾರ್ಪುಳ್ಳಗಣಾಧಿನಾಥರೊಡನೇಳ್ತಂದರ್ಮಹೋತ್ಸಾಹದಿಂ ॥ ೧೯ ॥

ಟೀಕೆ ॥ ಸಿಡಿಲಂನುರ್ಗುವ – ಸಿಡಿಲನ್ನು ಪುಡಿ ಮಾಡುವವರೂ, ಶೇಷನಂ – ಹಾವುಗಳೊಡೆಯನಂ, ತೊಡುವ – ಧರಿಸುವವರೂ, ಕಲ್ಪಾಂತಾಗ್ನಿಯಂ – ಪ್ರಳಯ ಕಾಲದ ಬೆಂಕಿಯನ್ನು, ತೀಡಿ – ಉಜ್ಜಿ, ಬೊಟ್ಟಿಡುವ – ಹಣೆಗೆ ಇಡುವವರೂ, ಆಕಾಶಧರಾತಳಂಗಳನೆ – ದ್ಯಾವಾಭೂಮಿಗಳನ್ನೇ, ಕೈತಾಳಂಗಳಂ ಮಾಳ್ಪ – ಕೈಲಿ ಹಿಡಿಯ ತಕ್ಕ ತಾಳಗಳನ್ನಾಗಿ ಮಾಡುವವರೂ ಅಥವಾ ಹೀರುವವರೂ, ಕುಲಾಚಲಂ – ಹೆಬ್ಬೆಟ್ಟಗಳನ್ನು, ತಳಿದು – ಹಿಡಿದು, ಪೂಯ್ಸಂಡಾಡುವ – ಹೊಡೆಯುವ ಚಂಡಿನಂತೆ ಆಡಿಸುವವರು, ಆದಿತ್ಯನಂ – ಸೂರ್ಯಬಿಂಬವನ್ನು, ಮಿಡಿವ – ಬೆರಳಿನಿಂದ ಹೊಡೆಯುವವರೂ ಅಥವಾ ಹಿಂಸಿಸುವವರು, ಆರ್ಪುಳ್ಳ – ಶಕ್ತಿಯುಂಟಾದವರೂ ಆದ ಗಣಾಧಿನಾಥರು – ಪ್ರಮಥರು, ಮಹೋತ್ಸಾಹದಿಂ – ಹೆಚ್ಚಾದ ಉಲ್ಲಾಸದಿಂದ, ಒಡನೆ ಏಳ್ತಂದರ್. ಸ್ವಭಾವಾತಿ ಶಯೋಕ್ತ್ಯಲಂಕಾರಂ ॥ ೧೯ ॥

ವ॥ ಅಂತೇಳ್ತಂದ ಗಣೇಂದ್ರ ಸಂದೋಹಮಲ್ಲದೆಯುಂ ಬೇರೆಬೇರೆ ನಿಜ ।
ರಮಣಿಯರೊಡನೆ ಕಿರಾತರ್ನೂತ್ನವೇಷಾಲಂಕೃತರಾಗಿ ॥ ೧ ॥

ಟೀಕೆ ॥ ಅಂತು – ಹಾಗೆ, ಏಳ್ತಂದ – ಬಂದ, ಗಣೇಂದ್ರ – ಪ್ರಮಥರ, ಸಂದೋಹಮಲ್ಲದೆಯುಂ – ಗುಂಪೇ ಹೊರತು ಬೇರೆಬೇರೆಯಾಗಿ, ನಿಜರಮಣಿಯರ

– ತಮ್ಮ ಮಡದಿಯರ, ಒಡನೆ, ಕಿರಾತರ್ – ಬೇಡರು, ನೂತ್ನ – ಹೊಸದಾದ, ವೇಷ – ಅಲಂಕಾರಗಳಿಂದ, ಅಲಂಕೃತರ್ – ಸಿಂಗರಿಸಲ್ಪಟ್ಟವರು ಆಗಿ.

ಚ॥ ಕುಲಿಶಧರಂ ಧನಂಜಯನಿನಾತ್ಮಭವಂ ದನುಜಂ ಜಲಾಧಿಪಂ ।
ಜ್ವಲನಸಖಂ ಕುಬೇರನನಲಾಕ್ಷಮಹರ್ಪತಿ ಪದ್ಮವೈರಿಮಂ ॥
ಗಳನುಶನಂ ಬೃಹಸ್ಪತಿ ಮುಖರ್ವಸುಗಳ್ಸುರಸಿದ್ಧಸಾಧ್ಯರು ।
ಜ್ವಳತರ ಯಕ್ಷಚಾರಣ ಪಿಶಾಚಗಣಂ ನಡೆತಂದುದಳ್ತಿಯಿಂ ॥ ೧೯ ॥

ಟೀಕೆ ॥ ಕುಲಿಶಧರಂ – ವಜ್ರಾಯುಧವಂ ಧರಿಸಿದ ಇಂದ್ರನು, ಧನಂಜಯಂ – ಅಗ್ನಿ, ಇನಾತ್ಮಭವಂ – ಸೂರ್ಯನ ಮಗನಾದ ಯಮನು, ದನುಜಂ – ನಿರುತಿ, ಜಲಾಧಿಪಂ – ನೀರ್ಗಳಿಗೊಡೆಯನಾದ ವರುಣ, ಜ್ವಲನಸಖಂ – ಬೆಂಕಿಗೆ ಗೆಳೆಯನಾದ ವಾಯು, ಕುಬೇರಂ – ಯಕ್ಷರಾಜನು, ಅನಲಾಕ್ಷಂ – ಅಗ್ನಿನೇತ್ರನಾದ ಈಶಾನನು, ಅಹರ್ಪತಿ – ಹಗಲಿಗೊಡೆಯನಾದ ಸೂರ್ಯನು, ಪದ್ಮವೈರಿ – ತಾವರೆಗಳಿಗೆ ಹಗೆಯಾದ ಚಂದ್ರನು, ಮಂಗಳಂ – ಅಂಗಾರಕನು, ಉಶನಂ – ಶುಕ್ರನು, ಬೃಹಸ್ಪತಿ – ದೇವಗುರು, ಮುಖರ್ – ಮೊದಲಾದವರೂ, ಸುರ – ದೇವರ್ಕಳು, ಸಿದ್ಧ – ಕರ್ಮಫಲವಂ ಪಡೆದು ದೇವತೆಗಳಾಗಿರುವವರು, ಸಾಧ್ಯರು – ಕರ್ಮಗಳಂ ಮಾಡಿ ದೇವತ್ವಕ್ಕೆ ಕಾದಿರುವವರು, ಉಜ್ವಳತರ – ಬಹಳ ಹೊಳೆಯುತಲಿರುವ, ಯಕ್ಷ – ತಾಮಸ ಯಜ್ಞಂಗಳಂಯ್ದಗೆ, ಧನಾದಿ ವಿಚಾರಕರು, ಚಾರಣ ಪಿಶಾಚಗಣಂ – ವಿಮಾನಗಳಲ್ಲಿ ತಿರುಗುವ ಊಳಿಗದ ದೇವತೆಗಳು, ಅಳ್ತಿಯಿಂ – ಪ್ರೀತಿಯಿಂದ, ನಡೆತಂದುದು – ನಡೆದುಬಂತು ॥ ೨೦ ॥

(ಮುಂದುವರಿಯುವುದು)

ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ
ಆಕಾರವಿಡಿದು ಸಾಕಾರಸಹಿತ ನಡೆವೆ
ಹೊರಗೆ ಬಳಸಿ ಒಳಗೆ ಮರೆದಿಪ್ಪೆ
ಬೆಂದ ನುಲಿಯಂತೆ ಹುರಿಗುಂದದಿಪ್ಪೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ
ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆ

ಅಕ್ಕಮಹಾದೇವಿ

ರೇಚಣ್ಣ ಶರಣರ ವಚನ–ನಿರ್ವಚನ

ಪ್ರಕಾಶ ಗಿರಿಮಲ್ಲನವರ

12ನೇ ಶತಮಾನದಲ್ಲಿ ಕಲ್ಯಾಣ ಪಟ್ಟಣದಲ್ಲಿ ಜರುಗಿದ ಕ್ರಾಂತಿಯ ಪರಿಣಾಮವಾಗಿ ಶರಣರೆಲ್ಲರೂ ವಚನಕಟ್ಟುಗಳೊಂದಿಗೆ ಉಳವಿಯತ್ತ ಪ್ರಯಾಣ ಬೆಳೆಸುತ್ತಾರೆ. ಆಗ ಚನ್ನಬಸವಣ್ಣನವರ ಜೊತೆ ರೇಚಯ್ಯರೆಂಬ ಶರಣರು ಬರುತ್ತಾರೆ. ಅವರು ವೀಳ್ಯದೆಲೆ ಹಂಚುವ ಕಾಯಕ ಕೈಕೊಂಡಿದ್ದ ಎಂಬ ಸಂಗತಿ ತಿಳಿಯುತ್ತದೆ. ಚೆನ್ನಬಸವಣ್ಣನವರ ಅಪ್ಪಣೆಯಂತೆ ರೇಚಣ್ಣ ಶರಣರು ಬೆಳಗಾವಿ ಜಿಲ್ಲೆಯ ಅಂಕಲಗಿ ಪ್ರದೇಶದಲ್ಲಿ ಉಳಿದುಕೊಳ್ಳುತ್ತಾರೆ. ಅವರು ಸುಮಾರು 700 ವರ್ಷಗಳವರೆಗೆ ಬದುಕಿದ್ದರೆಂದೂ ಇಡೀ ಭಾರತವನ್ನು ಸಂಚರಿಸಿ ಬಂದಿದ್ದರೆಂದೂ, ಅನೇಕ ಗ್ರಂಥಗಳಲ್ಲಿ ನಮೂದಿಸಲಾಗಿದೆ. ಇದೊಂದು ಭಕ್ತರ ನಂಬಿಕೆ. ಇಂಥ ಸಾಧನೆಗಳು ಜ್ಞಾನದೃಷ್ಟಿಗೆ ಸಾಧ್ಯವಾಗಿದೆ, ಯೋಗದೃಷ್ಟಿಗೆ ಸುಲಭಸಾಧ್ಯವಾಗಿದೆ ಹಾಗೂ ವಿಸ್ಮಯಕರವಾಗಿದೆ. ಅವರನ್ನು ನಂಬಿ ಅದರಂತೆ ಆಚರಿಸಿದ ಭಕ್ತರ ಇಚ್ಛೆಗಳನ್ನು ಪೂರೈಸಿದ್ದರಿಂದ, ರೇಚಣ್ಣ ಶರಣರು ದಿವ್ಯಾತ್ಮರಾಗಿದ್ದಾರೆ, ಶಿವಯೋಗಸಿದ್ಧರಾಗಿದ್ದಾರೆ. ಇವರೇ ಅಂಕಲಗಿ ಅಡವಿ ಸಿದ್ಧೇಶ್ವರ ಮಠದ ಮೂಲಪುರುಷರಾದರು ಎಂಬುದು ಗಮನಾರ್ಹ ಸಂಗತಿ.

ರೇಚಣ್ಣ ಶರಣರು ಬರೆದ 9 ವಚನಗಳು ನಮಗಿಂದು ಲಭ್ಯವಾಗಿವೆ. ಈ ವಚನಗಳ ನಿರ್ವಚನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ಎನ್ನಾಧಾರಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಬಸವಣ್ಣನು
ಎನ್ನ ಸ್ವಾಧಿಷ್ಠಾನಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಚೆನ್ನಬಸವಣ್ಣನು
ಎನ್ನ ಮಣಿಪೂರಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಘಟ್ಟಿವಾಳ ಮದ್ದಯ್ಯನು
ಎನ್ನ ಅನಾಹತಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಸಿದ್ಧರಾಮಯ್ಯನು
ಎನ್ನ ವಿಶುದ್ಧಿಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಮರುಳಶಂಕರದೇವರು

ಎನ್ನ ಆಜ್ಞಾಚಕ್ರ ಸ್ಥಾನದಲ್ಲಿ
ಮೂರ್ತಿಗೊಂಡನಯ್ಯಾ ಪ್ರಭುದೇವರು
ಆಧಾರಕ್ಕಾಚಾರಲಿಂಗವಾದಾತ ಬಸವಣ್ಣ
ಸ್ವಾಧಿಷ್ಠಾನಕ್ಕೆ ಗುರುಲಿಂಗವಾದಾತ ಚೆನ್ನಬಸವಣ್ಣ
ಮಣಿಪೂರಕಕ್ಕೆ ಶಿವಲಿಂಗವಾದಾತ ಘಟ್ಟಿವಾಳ ಮದ್ದಯ್ಯ
ಅನಾಹತಕ್ಕೆ ಜಂಗಮಲಿಂಗವಾದಾತ ಸಿದ್ಧರಾಮಯ್ಯ
ವಿಶುದ್ಧಿಗೆ ಪ್ರಸಾದಲಿಂಗವಾದಾತ ಮರುಳಶಂಕರದೇವರು
ಆಜ್ಞೆಗೆ ಮಹಾಲಿಂಗವಾದಾತ ಪ್ರಭುದೇವರು
ನಿಃಕಳಂಕ ಕೂಡಲ [ಚೆನ್ನ] ಸಂಗಮದೇವಾ
ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು

ಇಲ್ಲಿ ರೇಚಣ್ಣ ಶರಣರು ತಮ್ಮ ಸಮಕಾಲೀನ ಶರಣರಲ್ಲಿ ಪ್ರಖ್ಯಾತರಾದ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮೊದಲಾದವರು ಯೋಗಸಾಧನೆಯಲ್ಲಿ ಎಷ್ಟೊಂದು ಬಲ್ಲಿದರು ಮತ್ತು ಯಾವೆಲ್ಲ ಸಾಧನೆಯನ್ನು ಮಾಡಿ ತಮಗೆ ಮಾರ್ಗದರ್ಶನ ಮಾಡಿದರು ಎಂಬುದನ್ನು ಸೂಚ್ಯವಾಗಿ ನಿರೂಪಿಸಿದ್ದಾರೆ.

1. ಮೂಲಾಧಾರ : ಇದು ಬೆನ್ನುಮೂಳೆಯ ಅತ್ಯಂತ ಕೆಳಭಾಗದಲ್ಲಿದ್ದು ದೇಹಕ್ಕೆ ಆಶ್ರಯವಾಗಿದೆ. ಈ ಕಮಲಕ್ಕೆ ನಾಲ್ಕು ದಳಗಳಿದ್ದು ಪದ್ಮಾಕಾರ, ಸುವರ್ಣದ್ದಾಗಿದೆ. ವ.ಶ.ಷ.ಸ ನಾಲ್ಕು ಅಕ್ಷರಗಳು. ಪೃಥ್ವಿಯೆಂಬ ಮಹಾಭೂತ. ಇಲ್ಲಿ ಅನೇಕ ಜನ್ಮಗಳ, ಅನೇಕ ಸಂಸ್ಕಾರಪೂರಿತ ಜ್ಯೋತಿಸ್ಮೃತಿ ಭಗವತಿ ಕುಂಡಲಿನಿ ಶಕ್ತಿಯು ಸುಪ್ತಾವಸ್ಥೆಯಲ್ಲಿದೆ. ಮೂಲಾಧಾರದಲ್ಲಿ 'ನ'ಕಾರ ಮಂತ್ರವು ಮೂರ್ತಿವತ್ತಾಗಿದೆ. ಇಲ್ಲಿ ಆಚಾರಲಿಂಗವಿದೆ. ಭಕ್ತನ ಸದಾಚಾರದಿಂದ ಈ ಚಕ್ರ ಜಾಗೃತವಾಗುವುದರಿಂದ ಸ್ಮೃತಿ ಮತ್ತು ಸುಪ್ತಮನಸ್ಸಿನ ಭಾವನೆಗಳು ಜಾಗೃತವಾಗುವವು. ಇಲ್ಲಿ ರೇಚಣ್ಣನವರು ತಮ್ಮ ಆಧಾರಚಕ್ರದಲ್ಲಿ ಬಸವಣ್ಣ ನೆಲೆಗೊಂಡ ಎಂದು ಹೇಳುತ್ತಿದ್ದಾರೆ.

2. ಸ್ವಾಧಿಷ್ಠಾನ : ಈ ಕಮಲಕ್ಕೆ ಆರು ದಳಗಳು. ಬ.ಭ.ಮ.ಯ.ರ.ಲ ಆರು ಅಕ್ಷರಗಳು. ಅಪ್ಪುವೆಂಬ ಮಹಾಭೂತ. ಇದು ಹಸಿರು ವರ್ಣದ್ದಿದ್ದು ಗೋಲಾಕಾರವಾಗಿದೆ. ಮೃಗೀಯ ಜೀವನಕ್ಕೆ ಸಂಬಂಧಿಸಿದ ಭಾವನೆಗಳ ಕೇಂದ್ರ ಇದಾಗಿದ್ದು ಗುಹ್ಯಸ್ಥಾನದಲ್ಲಿದೆ. ಈ ಕೇಂದ್ರ ಜಾಗೃತವಾಗುವುದರಿಂದ ಮೃಗೀಯ ತೃಷ್ಣೆಯ ಮೇಲೆ ಹತೋಟಿ ಬರುವುದು. ಈ ಶಕ್ತಿಯನ್ನು ದೈವೀಕರಿಸಿ ಆಧ್ಯಾತ್ಮಿಕ ಶಕ್ತಿಯ ವಿಕಾಸಕ್ಕೆ ಉಪಯೋಗಿಸಿಕೊಳ್ಳಬಹುದು. ಸ್ವಾಧಿಷ್ಠಾನ ಚಕ್ರದ ಮೂಲಪ್ರಣವ 'ಮ' ಕಾರವಾಗಿದ್ದು ಇಲ್ಲಿ ಗುರುಲಿಂಗವಿದೆ. ಈ ಕಮಲಕ್ಕೆ ಅಧಿದೇವತೆ ಬ್ರಹ್ಮ. ರೇಚಣ್ಣನವರು ತಮ್ಮ ಸ್ವಾಧಿಷ್ಠಾನ ಚಕ್ರದಲ್ಲಿ ಚನ್ನಬಸವಣ್ಣನು ನೆಲೆನಿಂತಿದ್ದಾನೆ ಎಂದು ಹೇಳುತ್ತಾರೆ.

3. ಮಣಿಪೂರಕ : ನಾಭಿಸ್ಥಾನದಲ್ಲಿ ಮಣಿಪೂರಕ ಚಕ್ರವಿದೆ. ಈ ಚಕ್ರಕ್ಕೆ ಹತ್ತು ದಳಗಳು. ಡ.ಢ.ಣ.ತ.ಥ.ದ.ಧ.ನ ಪ.ಫ. ಎಂಬ ಹತ್ತು ಅಕ್ಷರಗಳು. ತ್ರಿಕೋಣೆ. ತೇಜವೆಂಬ ಮಹಾಭೂತ. ನೀಲ ಬಣ್ಣ. 'ಶಿ' ಕಾರವೆ ಮಂತ್ರಾಕ್ಷರ. ಶಿವಲಿಂಗವು ಈ ಚಕ್ರದಲ್ಲಿದೆ. ಮಣಿಪೂರಕ ಚಕ್ರವು ನೀಲಿ ಬಣ್ಣದ **ನಿರಹಂಕಾರ** ಪದ್ಮವೆಂಬ ಹೆಸರನ್ನು ಹೊಂದಿದೆ. ಇಲ್ಲಿರುವ ಶಿವಲಿಂಗವು ಕಣ್ಣುಗಳಿಗೆ ಮೂಲವಾಗಿರುವದರಿಂದ ತೇಜೋಮಯವೆನಿಸಿದೆ. ಇದಕ್ಕೆ ಅಧಿದೇವತೆ ವಿಷ್ಣು. ಈ ಕೇಂದ್ರ ವಿಕಾಸಗೊಳ್ಳುವುದರಿಂದ ಸಾಂಸಾರಿಕ ಸುಖಗಳು ಶಾಂತಿಯನ್ನು ನೀಡುವುದಿಲ್ಲವೆಂಬ ಅರಿವು ಸಾಧಕನಿಗೆ ಗೊತ್ತಾಗುವುದು. ಈ ಮಣಿಪೂರಕ ಚಕ್ರದ ಸಾಧನೆ ಮಾಡಿದ ಘಟ್ಟಿವಾಳ ಮದ್ದಯ್ಯನು ನನ್ನ ಮಣಿಪೂರಕದಲ್ಲಿಯೂ ನೆಲೆನಿಂತಿದ್ದಾನೆ ಎನ್ನುತ್ತಾರೆ ರೇಚಣ್ಣ ಶರಣರು.

4. ಅನಾಹತ : ಹೃದಯವೇ ಅನಾಹತಚಕ್ರದ ತಾಣವಾಗಿದೆ. ವಾಯುವೆಂಬ ಮಹಾಭೂತ. ಈ ಕಮಲಕ್ಕೆ ಹನ್ನೆರಡು ದಳಗಳು, ಕ.ಖ.ಗ.ಘ.ಙ. ಚ.ಛ.ಜ.ಝ.ಞ.ಟ.ಠ. ಹನ್ನೆರಡು ಅಕ್ಷರಗಳು. ಎಂಟು ದಳಗಳು ಸ್ಫುಟವಾಗಿವೆ, ನಾಲ್ಕು ದಳಗಳು ಗೌಪ್ಯವಾಗಿವೆ. ಜೀವಾತ್ಮನು ಕೇವಲ ಕೆಳಮುಖಗಳಾದ ಎಂಟು ದಳಗಳಲ್ಲಿ ಸಂಚರಿಸುವನು. ಆಗ ಆ.ಆ. ದಳಗಳ ಕ್ರಮದಂತೆ ವಿಭಿನ್ನ ವೃತ್ತಿಯುಳ್ಳವನಾಗುವನು. ಊರ್ಧ್ವ ದಳದ ಮಹಾದೇವನನ್ನು ಮರೆಯುವನು. ಇಲ್ಲಿ 'ವಾ'ಕಾರ ಮಂತ್ರಮೂರ್ತಿಯಾದ ಚಿನ್ಮಯ ರೂಪಿ ಚರಲಿಂಗ (ಜಂಗಮಲಿಂಗ) ಇರುವುದು. ಈ ಜಂಗಮಲಿಂಗವು ಕುಂಕುಮವರ್ಣದ ಸುಮನ ಪದ್ಮದಲ್ಲಿ ಅರ್ಧಚಂದ್ರಾಕೃತಿಯುಳ್ಳದ್ದು. ಅಷ್ಟಕಲೆಗಳಿಂದ ಕೂಡಿ, ಅಷ್ಟಮದಗಳ ಕಳೆದು ಅಷ್ಟವಿಧ ಪೂಜೆಗೊಳಪಡುವುದು ಜಂಗಮಲಿಂಗ. ಅನಾಹತವೆಂದರೆ ಉದ್ವಿಗ್ನಗೊಳ್ಳದೆ ಇರುವುದು, ಎಂದು ಅರ್ಥ. ಈ ಕೇಂದ್ರ ವಿಕಾಸವಾದಾಗ ಸಾಧಕನನ್ನು ವಿಶ್ವಪ್ರೇಮಕ್ಕೆ ಕರೆದೊಯ್ಯುವುದು. ಈ ಚಕ್ರದ ಅಧಿದೇವತೆ ಮಹೇಶ್ವರನು. ಈ ಅನಾಹತದ ಸಾಧನೆ ಮಾಡಿದವನು ಸಿದ್ಧರಾಮನು. ಆತನೇ ನನ್ನ ಅನಾಹತ ಚಕ್ರವಾಗಿದ್ದಾನೆ ಎಂದು ರೇಚಣ್ಣನವರು ಹೇಳುತ್ತಾರೆ.

5. ವಿಶುದ್ಧಿ : ವಿಶುದ್ಧಿಚಕ್ರಕ್ಕೆ ಕಂಠವೇ ಆಶ್ರಯಸ್ಥಾನ. ಬಿಳಿ ಬಣ್ಣದ್ದಿದ್ದು, ಹದಿನಾರು ದಳಗಳಿಂದ ಕೂಡಿದೆ. ಅ.ಆ.ಇ.ಈ.ಉ, ಊ. ಋ, ೠ, ಌ, ೡ, ಏ, ಐ, ಒ, ಓ, ಔ. ಅಂ. ಅಃ, ಹೀಗೆ ಹದಿನಾರು ಅಕ್ಷರಗಳು. ಆಕಾಶವೆಂಬ ಮಹಾಭೂತ. ಇದು ವಿಕಾಸವಾದಾಗ ಸಾಧಕನಲ್ಲಿ ಪವಿತ್ರತೆ ಉಂಟಾಗುತ್ತದೆ. ಸತ್ಯಜ್ಞಾನವಾಗಿ ಶಿವಭಾವನೆ ಜಾಗ್ರತವಾಗುವುದು. ವಿಶುದ್ಧಿಚಕ್ರದ ಮಧ್ಯದಲ್ಲಿ 'ಯ' ಕಾರ ಮಂತ್ರಾಕ್ಷರಮೂರ್ತಿಯಾಗಿ ಪ್ರಸಾದಲಿಂಗವು ಇದೆ. ಇದಕ್ಕೆ ಶ್ರೋತ್ರವೇ ಮುಖ, ದರ್ಪಣಾಕಾರ ಪರಿಪೂರ್ಣ ರೂಪು. ಷೋಡಶದಳದ ಸುಜ್ಞಾನಪದ್ಮದಲ್ಲಿ ಮಂಡಿಸಿದೆ. ಇದು ಶ್ರೋತ್ರಕ್ಕೆ ಶ್ರೋತ್ರವಾಗಿದೆ. ಇದಕ್ಕೆ ಅಧಿದೇವತೆ ಸದಾಶಿವನು. ಇಂಥ ವಿಶುದ್ಧಚಕ್ರವಾಗಿ ನನಗೆ ಗೋಚರಿಸಿದವನು ಮರುಳಶಂಕರದೇವರು ಎಂದು ರೇಚಣ್ಣನವರು ಭಾವಿಸುತ್ತಾರೆ.

6. ಆಜ್ಞಾ : ಎರಡು ಹುಬ್ಬುಗಳ ಮಧ್ಯೆ ಇರುವ ಈ ಚಕ್ರ ಎರಡು ದಳಗಳಿಂದ ಕೂಡಿದೆ. ಹಂ. ಕ್ಷ ಎರಡು ಅಕ್ಷರಗಳು. ಮನವೆಂಬ ಮಹಾಭೂತ. ಇದು ಜಾಗೃತವಾದಾಗ ಸಾಧಕನಿಗೆ ಪರಮಸತ್ಯ ತಿಳಿಯುವುದು. ಗಾಜಿನ ಕಪಾಟಿನಲ್ಲಿಯ ವಸ್ತುವನ್ನು ನೋಡುವಂತೆ ಸತ್ಯವನ್ನು ಸಾಧಕ ನಿಚ್ಚಳವಾಗಿ ಕಾಣುತ್ತಾನೆ. ಸರ್ವಜ್ಞ ಸ್ವರೂಪದ 'ಓಂ'ಕಾರ ಪ್ರಣವ ಮಂತ್ರ ಮೂರ್ತಿಯಾದ ಮಹಾಲಿಂಗವು ಇಲ್ಲಿದೆ. ಮಾಣಿಕ್ಯವರ್ಣ ಕಾಂತಿಯುಳ್ಳ ಅನಂತ ಮಿಂಚಿನ ವರ್ಣದಿಂದ ಒಡಗೂಡಿದ ಜ್ಯೋತಿಯಾಕಾರ ಉಳ್ಳದ್ದಾಗಿದೆ. ಮಹಾಲಿಂಗಕ್ಕೆ ಹೃದಯವೇ ಮುಖ. ಮನಸೋ ಮನಃ, ಇದು ಮನಕ್ಕೆ ಮನವಾಗಿದೆ. ಈ ಚಕ್ರದ ಅಧಿದೇವತೆ ಶ್ರೀಗುರು. ರೇಚಣ್ಣ ಶರಣರು ಈ ಆಜ್ಞಾಚಕ್ರದಲ್ಲಿ ನೆಲೆನಿಂತವನು ಪ್ರಭುದೇವರು ಎಂದು ಮನದುಂಬಿ ಹೇಳುತ್ತಾರೆ. ಈವೆಲ್ಲ ಯೋಗಸಾಧನೆಯ ವಿವಿಧ ಹಂತಗಳು. ಇಂಥ ಯೋಗಸಾಧನೆಗೆ ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಅಲ್ಲಮರು ನನಗೆ ದಾರಿ ತೋರಿದ್ದಾರೆ ಇದರ ಪಾದಗಳಿಗೆ ನಾನು ನಮಸ್ಕರಿಸುವೆ ಎಂದು ಮೇಲಿನ ವಚನದಲ್ಲಿ ರೇಚಣ್ಣನವರು ಪ್ರತಿಪಾದಿಸಿದ್ದಾರೆ.

ಒಂದನಹುದೆನ್ನದೆ, ಒಂದನಲ್ಲ ಎನ್ನದೆ
ಬಾಯಿಗೆ ಬಂದಂತೆ ಅಂದಚೆಂದವ ಸೇರಿಸಿ
ಬಾಯಿಗೆ ಬಂದಂತೆ ಒಂದೊಂದ ನುಡಿಯದೆ
ಇದು ಬಂಧ ಮೋಕ್ಷ ಕರ್ಮವೆಂದು
ದಂದುಗವ ಗಂಡನಿಕ್ಕಿ ಕೊಂಡಾಡದೆ
ತಾ ನಿಂದಲ್ಲಿ ನಿಜಸುಖಿಯಾದ ಮತ್ತೆ
ಇತ್ಯಾದಿಗಳಲ್ಲಿ ಹೊತ್ತು ಹೋರಲೇತಕ್ಕೆ ?
ಶಿಲೆ ರಸವನುಂಡಂತೆ, ಮರೀಚಿಕಾಜಲದಂತೆ
ಅಂಬುವಿನ ಸಂಭ್ರಮದಂತೆ
ಕುಂಭದಲ್ಲಿ ಅಡಗಿದ ಸರ್ಪನ ಇಂದ್ರಿಯದಂತೆ
ಇದು ಗುಣಲಿಂಗಾಂಗಿಯ ನಿರ್ಗಮನ
ನಿಃಕಳಂಕ ಕೂಡಲಚೆನ್ನಸಂಗಮದೇವ, ತಾನಾದ ಶರಣನ ಇರವು

ರೇಚಣ್ಣ ಶರಣರು ಇಲ್ಲಿ ಶರಣನ ಇರವು ಹೇಗಿರುತ್ತದೆ ಎಂದು ತಿಳಿಸುತ್ತಾರೆ. ವೇದಿಕೆಯ ಮೇಲೆ ನಿಂತು ದೇವರ ಬಗ್ಗೆ ಮಾತನಾಡುತ್ತಾ, ಒಬ್ಬರು ದೇವರು ಒಬ್ಬನೆಂದು, ಇನ್ನೊಬ್ಬರು ಒಂದಲ್ಲಾ ಬಹಳಷ್ಟು ಎಂದು ಅಂದಚೆಂದದ ಮಾತುಗಳಿಂದ ಜನರನ್ನು ಮರುಳು ಮಾಡುತ್ತಾರೆ. ಬಂಧ–ಮೋಕ್ಷ ಎಂಬ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತವನ್ನು ಹೇಳುತ್ತ ನಿಜವಾದ ಅಧ್ಯಾತ್ಮವನ್ನು ಮರೆಯುತ್ತಾರೆ. ಇವೆಲ್ಲ ವ್ಯರ್ಥವಾದ ಕಾಲಕ್ಷೇಪದ ಪ್ರಯತ್ನವೆಂದು ರೇಚಣ್ಣನವರು ಹೇಳುತ್ತಾರೆ. ಬೃಹತ್ತಾದ ಶಿಲೆಯೂ ನೀರನ್ನು ಹೀರುತ್ತದೆ (ಹೀಗಾಗಿ ಕಲ್ಲಿನಲ್ಲಿ ಕಪ್ಪೆಗಳು ಇರುವುದು ನಮ್ಮ ಗಮನಕ್ಕೆ ಬರುತ್ತದೆ). ಮರೀಚಿಕೆ ಎಂದರೆ ಮರುಭೂಮಿ. ಅಂತಹ ಮರುಭೂಮಿಯಲ್ಲಿಯೂ ನೀರು ಒಮ್ಮೊಮ್ಮೆ ಓಯಸಿಸ್‌ನಂತೆ

ಸಿಗಬಹುದು. ಅಂಬು ಎಂದರೆ ನೀರು. ಮರುಭೈಮಿಯಲ್ಲಿ ನೀರನ್ನು ಕಂಡು ಸಂಭ್ರಮಪಟ್ಟಂತೆ ಶರಣನ ಇರವು ಇರುತ್ತದೆ. ಶಿವಯೋಗ ಸಾಧನೆಯಲ್ಲಿ ಕುಂಡಲಿನಿ ಸಾಧನೆಯ ವಿವರ ಬರುತ್ತದೆ. ಸರ್ಪವು ಕುಂಭದಲ್ಲಿ ಅಂದರೆ ಗಡಿಗೆಯಲ್ಲಿ ಅಡಗಿದಂತೆ ದೇಹದೊಳಗಿನ ಕಾಮವೇ ಮೊದಲಾದ ಅರಿಷಡ್ವರ್ಗಗಳು ಶರಣರ ಸಾಧನೆಯಲ್ಲಿ ಅಡಗಿಕೊಳ್ಳುತ್ತವೆ. ಅದನ್ನೇ ರೇಚಣ್ಣನವರು ಗುಣಲಿಂಗಾಂಗಿಯ ನಿರ್ಗಮನ ಎನ್ನುತ್ತಾರೆ. ಅಂಗಲಿಂಗಗಳ ಸಮನ್ವಯವಾದ ನಂತರ ಒಂದು ರೀತಿಯಲ್ಲಿ ಲೋಕದ ಹಂಗು ಹರಿದು, ಸ್ಥಿತಪ್ರಜ್ಞನ ಹಂತದಲ್ಲಿ ಶರಣನಿರುತ್ತಾನೆ ಎಂಬುದು ಇಲ್ಲಿಯ ಭಾವ.

ಕಂಡ ಚಿತ್ತ ವಸ್ತುವಿನಲ್ಲಿ ಮಗ್ನವಾದ ಮತ್ತೆ
ಸಂಸಾರ ವಿಷಯಕ್ಕೆ ಮತ್ತನಪ್ಪುದೆ?
ಮತ್ತೆ ಭಕ್ತರ ಗೃಹ ರಾಜದ್ವಾರದ ತಪ್ಪಲ ಕಾಯ್ವುದೆ?
ಆ ಚಿತ್ತ ತೊಟ್ಟು ಬಿಟ್ಟ ಹಣ್ಣು, ಕಟ್ಟಿ ಸತ್ತ ಬಿದಿರು
ದೃಷ್ಟ ನಷ್ಟವಾದ ಅಂಗಕ್ಕೆ ಮತ್ತೆ ಬಪ್ಪುದೆ ಪುನರಪಿಯಾಗಿ?
ಇದು ನಿಶ್ಚಯ, ನಿಜಲಿಂಗಾಂಗ ನಿರ್ಲೇಪನ ಹೊಲಬು
ಮತ್ತೆ ಜಗದ ಮೊತ್ತದವನಲ್ಲ
ನಿಃಕಳಂಕ ಕೊಡಲಚೆನ್ನ ಸಂಗಮದೇವ ತಾನಾದ ಶರಣ

ಶರಣನ ಚಿತ್ತ ಎಂದರೆ ವಿಚಾರಗಳಿಂದ ತಿಳಿದ, ಗ್ರಹಿಸಿದ ಮನಸ್ಸು. ಪರಬ್ರಹ್ಮ ವಸ್ತುವಿನಲ್ಲಿ ಅದು ಮಗ್ನವಾದ ಬಳಿಕ ಮತ್ತೆ ಸಂಸಾರಸುಖಕ್ಕೆ ಮನಸ್ಸು ಮಾಡುವುದಿಲ್ಲ. ಪರಮಾತ್ಮನು ಕೂಡ ಬಾಣನ ಬಾಗಿಲನ್ನು ಕಾಯ್ದ ಎಂದು ಹೇಳುವ ಮಾತು ತಪ್ಪು ಎನ್ನುತ್ತಾರೆ ರೇಚಣ್ಣ ಶರಣರು. ಕರಣ ಚತುಷ್ಟಯಗಳಲ್ಲಿ ಒಂದಾದ ಚಿತ್ತವು ಲಿಂಗಯೋಗ ದಲ್ಲಿ ಮನಮಗ್ನವಾದ ಬಳಿಕ ಅದು ತೊಟ್ಟು ಕಳಚಿಬಿದ್ದ ಹಣ್ಣಾಗುತ್ತದೆ. ತೊಟ್ಟು ಕಳಚಿದ ಹಣ್ಣು ಮತ್ತೆ ಮರದೊಂದಿಗೆ ಕೂಡುವುದು ಸಾಧ್ಯವಿಲ್ಲ. ಬಿದಿರು ಒಣಗಿದ ನಂತರ ಮತ್ತೆ ಹಸಿಬಿದರಿನ ಕೊಳಲಿನಲ್ಲಿ ಸಿಕ್ಕಲಾರದು. ದೃಷ್ಟನಷ್ಟ ಎಂದರೆ ವಿಷಯ ಮೋಹಗಳಿಂದ ಬಿಡುಗಡೆ ಪಡೆದ ಅಂಗನು ಮತ್ತೆ ಪುನಃ ಅವುಗಳ ಜಂಜಡದಲ್ಲಿ ಸಿಕ್ಕಿಕೊಳ್ಳಲಾರ. ಇದು ನಿಶ್ಚಯವಾದ ಸತ್ಯ. ಹಾಲಿನಲ್ಲಿ ಸಕ್ಕರೆ ಬೆರೆತಂತೆ ಅಂಗನು ಲಿಂಗದಲ್ಲಿ ಅಡಗಿದ ಬಳಿಕ ಮತ್ತೆ ಈ ಜಗದ ಸಂಸಾರಭವದಲ್ಲಿ ಮರಳಿ ಬರಲಾರನು. ಇದು ಲಿಂಗಾಂಗಸಾಮರಸ್ಯದ ಪರಮ ಸ್ಥಿತಿಯನ್ನು ಹೊಂದಿದ ನಿಜವಾದ ಶರಣನ ಲಕ್ಷಣ ಎನ್ನುತ್ತಾರೆ ರೇಚಣ್ಣ ಶರಣರು.

ಕರ್ಮದಿಂದ ಕರ್ಮವ ಕಂಡಲ್ಲದೆ
ಮುಂದಣ ವರ್ಮವನರಿಯಬಾರದು
ವರ್ಮದಿಂದ ಸರ್ವವ ತಿಳಿದಲ್ಲದೆ
ಸತ್ಕರ್ಮ ನಾಸ್ತಿ ವಿರಕ್ತನಾಗಬಾರದು
ಮುಕುರದೊಳಗಣ ನೆಳಲ ತಾ ನೋಡಿ ಕಾಬಂತೆ
ಇದು ಕ್ರಿಯಾಪಥ, ವಿರಕ್ತನ ಶ್ರದ್ಧೆ

ಅದು ಸನ್ಮುಕ್ತವಾದಲ್ಲಿ ಮಾಡೆನೆಂಬ ಶಂಕೆ
ಮಾಡಿದೆನೆಂಬ ಕೃತ್ಯ ಉಭಯದ ಕಲೆಯಿಲ್ಲ
ನಿಃಕಳಂಕ ಕೂಡಲಚೆನ್ನಸಂಗಮದೇವ ತಾನಾದ ಶರಣ

ಕರ್ಮ ಎಂದರೆ ಮಲ, ಮಾಯಾ, ಕರ್ಮ, ಬಿಂದು ಮತ್ತು ತಿರೋಧಾನ ಎಂಬ ಜೀವರುಗಳನ್ನು ಬಂಧಿಸುವ ಪಂಚಪಾಶಗಳಲ್ಲಿ ಒಂದು. ಕರ್ಮದಿಂದ ಕರ್ಮದ ಮರ್ಮವನ್ನು ಅರಿಯಬೇಕೆಂದು ರೇಚಣ್ಣ ಶರಣರು ಹೇಳುತ್ತಾರೆ. ಮುಳ್ಳಿನಿಂದಲೇ ಮುಳ್ಳನ್ನು ತೆಗೆಯುವಂತೆ, ಕರ್ಮಬಂಧನದಲ್ಲಿ ಇದ್ದುಕೊಂಡೇ, ಅದರಿಂದ ಹೊರಗೆ ಬರುವ ದಾರಿಯನ್ನು ಕಾಣಬೇಕೆಂದು ಸೂಚಿಸುತ್ತಾರೆ. ಕರ್ಮಗಳಲ್ಲಿ ಒಳ್ಳೆಯ ಕರ್ಮಗಳು, ಕೆಟ್ಟ ಕರ್ಮಗಳೂ ಇರುತ್ತವೆ. ಈ ಎರಡೂ ಬಗೆಯ ಕರ್ಮಗಳ ಬಂಧನದಿಂದ ಮುಕ್ತನಾಗದೆ ವಿರಕ್ತನಾಗಲು ಸಾಧ್ಯವಿಲ್ಲ ಎನ್ನುತ್ತಾರೆ ರೇಚಣ್ಣ ಶರಣರು. ಮುಕುರ ಎಂದರೆ ಕನ್ನಡಿ ಅಥವಾ ದರ್ಪಣ. ಈ ಕನ್ನಡಿಯಲ್ಲಿ ತನ್ನ ನೆರಳನ್ನು ನೋಡುವಂತೆ, ಸತ್ಕರ್ಮದ ಕ್ರಿಯಾಪಥದಲ್ಲಿ ಸಾಗಬೇಕಾದ ಶ್ರದ್ಧೆ ವಿರಕ್ತನಿಗಿರಬೇಕು. ಈ ಶ್ರದ್ಧೆ ಇದ್ದರೆ ನಾನು ಮಾಡಿದೆ, ನಾನು ಕಟ್ಟಿದೆ ಎಂಬ ಅಹಂಕಾರ ಮಮಕಾರಗಳೆಂಬ ಉಭಯದೋಷಗಳಿಂದ ಆತನು ಮುಕ್ತನಾಗುತ್ತಾನೆ. ಒಬ್ಬ ವಿರಕ್ತ ಮಠಾಧೀಶನಿಗಿರಬೇಕಾದ ಸಕಲ ಸಲ್ಲಕ್ಷಣಗಳನ್ನು ರೇಚಣ್ಣನವರು ಇಲ್ಲಿ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಗಜಗಮನ, ಅಹಿತ ಶರಸಂಧಾನ, ಮಯೂರನ ಶಯನ
ಮಾರ್ಜಾಲನ ಧ್ಯಾನ, ಕಂಠೀರವನ ಲಾಗು
ಬಕಮೂರ್ತಿಯ ಅನುಸಂಧಾನ
ಅಳಿಯ ಗಂಧಭುಂಜನೆ, ಮಧುಮಕ್ಷಿಕದ ಘೃತಗೊಡ ವಾಸ
ಮೂಷಿಕದ ದ್ವಾರಭೇದ, ಮರೆವಾಸವೈದುವ ಸಂಚ
ಚೋರನ ಕಾಹು, ಪರಿಚಾರಕನ ವೇಳೆ, ಸಾಹಿತ್ಯನ ಉಪಮೆ
ಸಂಗೀತರ ಸಂಚು, ತಾಳಧಾರಿಯ ಕಳವು
ವಾದ್ಯಭೇದಕನ ಮುಟ್ಟು, ಘ್ರಾಣನ ಹರಿತ, ಭಾವಜ್ಞನ ಚಿತ್ತ
ಇಂತೀ ನಾನಾ ಗಣಂಗಳ ಲಕ್ಷಾಲಕ್ಷಿತವ ತಿಳಿದು
ಶ್ರುತ ದೃಷ್ಟ ಅನುಮಾನ ಮುಂತಾದ ನಾನಾ
ಭೇದಂಗಳಲ್ಲಿ ವಿಚಾರಿಸಿ ಕಂಡು
ನಾನಾರೆಂಬುದದೇನೆಂದು ತಿಳಿದು
ತನಗೂ ಇದಿರಿಂಗೂ ಪಡಿಪುಚ್ಚವಿಲ್ಲದೆ
ಸಿಂಧುವಿನೊಳಗಾದ ಸಂಭ್ರಮಂಗಳ ಸಂಚಾರದ
ಅಂಗವೆಲ್ಲ ಹೋಗಿ ನಿರಂಗವಾದಂತೆ
ಅಂಗವಾತ್ಮನ ಸಂಗ, ಈ ಅಂಗವೆಂದು ತಿಳಿದು
ಆವ ಸ್ಥಲವನಂಗೀಕರಿಸಿದಲ್ಲಿಯೂ
ಪರಿಪೂರ್ಣವಾಗಿ ಏನ ಹಿಡಿದಲ್ಲಿಯೂ

ತಲೆವಿಡಿಯಿಲ್ಲದೆ ಏನ ಬಿಟ್ಟಲ್ಲಿಯೂ
ಕುಳವಿಡಿಯಿಲ್ಲದೆ ಕರ್ಪುರ ಮಹಾಗಿರಿಯ ಸುಟ್ಟಡೆ
ಒಕ್ಕುಡಿತೆ ಬೂದಿ ಇಲ್ಲದಂತೆ
ಚಿತ್ತನಿಶ್ಚಯವಾದ ಸದ್ಭಕ್ತ ಪರಮವಿರಕ್ತನ ಇರವು ಇದು
ಎನ್ನೊಡೆಯ ಚೆನ್ನಬಸವಣ್ಣನ ಹರವರಿಯ ತೆರನಿದು
ಸಾಧ್ಯ ಮೂವರಿಗಾಯಿತ್ತು, ಅಸಾಧ್ಯವಸಂಗತ
ನಿಃಕಳಂಕ ಕೂಡಲಚೆನ್ನ ಸಂಗಮದೇವರೆಂದರಿದವಂಗೆ
ಅಸಾಧ್ಯ ಸಾಧ್ಯವಾಯಿತ್ತು !

ಪ್ರಾಣಿ ಪಶು ಪಕ್ಷಿಗಳ ಬದುಕಿನ ಉದಾಹರಣೆಗಳೊಂದಿಗೆ ಮನುಷ್ಯನು ಮುಕ್ತಿ ಪದಕ್ಕೆ ಸಾಗುವ ದಾರಿಯನ್ನು ರೇಚಣ್ಣ ಶರಣರು ತುಂಬ ವಿಸ್ತೃತವಾಗಿ ಕಟ್ಟಿಕೊಟ್ಟಿದ್ದಾರೆ. ಗಜಗಮನ ಅಂದರೆ ಆನೆಯ ನಡಿಗೆ, ಬಾಣದ ಹೊಡೆತ, ನವಿಲಿನ ನಿದ್ರೆ, ಬೆಕ್ಕಿನ ಧ್ಯಾನ, ಸಿಂಹದ ಚಾತುರ್ಯ, ಬಕಪಕ್ಷಿ ಆಹಾರದ ಸಲುವಾಗಿ ಮಾಡುವ ಪ್ರತೀಕ್ಷೆ ಅಥವಾ ಕಾಯುವಿಕೆ, ಅಳಿ ಎಂದರೆ ದುಂಬಿಯು ಗಂಧದ ಸೇವನೆ ಮಾಡಿದಂತೆ. ಮಧುಮಕ್ಷಿಕವು (ಜೇನು) ತುಪ್ಪದಲ್ಲಿ ವಾಸವಾದಂತೆ, ಮೂಷಿಕವು (ಇಲಿ) ಬಿಲದ ದಾರಿಯನ್ನು ಗಮನಿಸಿ ಜಾಗೃತವಾದಂತೆ, ದುಷ್ಟರ ಸಂಚು, ಕಳ್ಳನ ಕೈಚಳಕ, ಪರಿಚಾರಕನ ಸಮಯ, ಸಾಹಿತ್ಯದಲ್ಲಿ ಬರುವ ಉಪಮೆಗಳು, ಸಂಗೀತಗಾರರ ಸಂಚು, ತಾಳಧಾರಿಯು ಒಮ್ಮೊಮ್ಮೆ ತಾಳದ ಲಯವನ್ನು ನುಂಗಿ ಹಾಕುತ್ತಾನೆ. ವಾದ್ಯಗಳಲ್ಲಿ ಭೇದ ಮಾಡುವ ವ್ಯಕ್ತಿ, ವಾಸನೆಯ ಬಗೆಗಿನ ತಿಳಿವಳಿಕೆ, ಭಾವಜೀವಿಯ ಚಿತ್ತ ಮುಂತಾದ ಸ್ವಭಾವಗಳನ್ನು ಅರಿತು ವೇದಾಂತದಲ್ಲಿ ಬರುವ ಶ್ರುತ ದೃಷ್ಟಾಂತ ಅನುಮಾನ ಮೊದಲಾದ ಭೇದಗಳನ್ನು ತಿಳಿದುಕೊಂಡು 'ನಾನು ಯಾರು' ಎಂಬುದನ್ನು ಅರ್ಥ ಮಾಡಿಕೊಂಡು, ತನಗೂ ತನ್ನ ವೈರಿಗೂ ಯಾವುದೇ ಪ್ರತಿಪ್ರಶ್ನೆ ಇಲ್ಲದೆ, ನದಿಯೊಳಗಾದ (ಸಿಂಧು) ಸಂಭ್ರಮದಂತೆ, ಅಂಗವೆಲ್ಲ ಶರೀರಸಂಬಂಧವಾದ ಕರ್ಮ ಇಲ್ಲದ ಭಾವ (ನಿರಂಗ) ಅಳವಡಬೇಕು. ಅಂಗ (ದೇಹ) ಮತ್ತು ಆತ್ಮದ ಸಂಗ ಎರಡೂ ಒಂದೇ ಎಂದು ತಿಳಿದು ಸಾಧನೆಯ ಪಥದಲ್ಲಿ ಪರಿಪೂರ್ಣತೆಯಿಂದ ಸಾಗಬೇಕು. ಕುಳವಿಡಿಯದೆ (ಅಂದರೆ ಜಾತಿಯನ್ನು ಅರಸದೆ) ಕರ್ಪುರದಿಂದ ಆದ ಮಹಾಪರ್ವತವೊಂದು ಸುಟ್ಟರೆ ಅದರ ಬೂದಿಯೂ ಕೂಡ ನಮಗೆ ದೊರೆಯುವುದಿಲ್ಲ. ಕರ್ಪುರ ಸುಟ್ಟರೆ ಏನೂ ಉಳಿಯು ವುದಿಲ್ಲವೋ ಹಾಗೇಯೇ ನಿಶ್ಚಲಚಿತ್ತನಾದ ಸದ್ಭಕ್ತ ಪರಮ ವಿರಕ್ತನ ಇರವು ಇರಬೇಕೆಂದು ರೇಚಣ್ಣ ಶರಣರು ಹೇಳುತ್ತಾರೆ. ಇಂತಹ ವಿರಕ್ತಿಯ ಸಾಧನೆ ಮೂವರಿಗಾಯಿತು (ಅಕ್ಕ–ಅಲ್ಲಮ–ಚನ್ನಬಸವ ಈ ಮೂವರಿಗೂ ವಿರಕ್ತಭಾವ ಒಡಮೂಡಿತು). ಇವರಿಗೆ ಅಸಾಧ್ಯವೂ ಸಾಧ್ಯವಾಯಿತು ಎಂದು ರೇಚಣ್ಣ ಶರಣರು ಹೇಳುತ್ತಾರೆ.

ಪೃಥ್ವಿಯಲ್ಲಿ ಅಪ್ಪುಸಾರವಿಲ್ಲದಿರೆ ಬೀಜವ ತಳಿಯಲಾಗಿ
ಪ್ರತ್ಯಕ್ಷ ಅಂಕುರ ದೃಷ್ಟವಪ್ಪುದೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ವಿಶ್ವಾಸವಿಲ್ಲದಿದ್ದಡೆ ಸದ್ಭಕ್ತನಪ್ಪನೆ?
ಇಂತೀ ದೃಷ್ಟ ಸಿದ್ಧಾಂತದಿಂದ ತಪ್ಪು ಕುಳಿತ ಮತ್ತೆ
ದೃಷ್ಟಾಂತರವ ಇದಿರ ಕೈಯಲ್ಲಿ ಕೇಳಲುಂಟೆ?
ನುಂಗಬಾರದ ಘೃತ, ಉಗುಳಬಾರದ ಪ್ರಿಯ
ಬಿಡಬಾರದ ಭಕ್ತಿ , ವಿಶ್ವಾಸವಿಲ್ಲದ ಆ ಭಕ್ತಿಪೂಜೆ
ಘನಸಿಂಧುವಿನಲ್ಲಿ ನಾನಾ ವರ್ಣವ ಕದಡಿದಂತಾಯಿತ್ತು
ಇದನಿನ್ನಾರಿಗುಸುರುವೆ!
ನಿಃಕಳಂಕ ಕೂಡಲಚೆನ್ನಸಂಗಮದೇವಾ, ನೀನೇ ಬಲ್ಲೆ

ಈ ಭೂಮಿಯಲ್ಲಿ ನೀರಿನ ಸಾರ ಇಲ್ಲದಿದ್ದರೆ ಭೂಮಿಗೆ ಬೀಜ ಹಾಕಿದರೆ ಅವು ನಾಟುತ್ತಿರಲಿಲ್ಲ. ಇದು ಪ್ರತ್ಯಕ್ಷ ಅನುಭವದ ಸಂಗತಿ. ಹಾಗೆಯೇ ಮನುಷ್ಯನಲ್ಲಿ ಶ್ರದ್ಧೆ ಸನ್ಮಾರ್ಗ ಮತ್ತು ಭಕ್ತಿ ವಿಶ್ವಾಸಗಳು ಇಲ್ಲದಿದ್ದರೆ ಆತ ನಿಜವಾದ ಭಕ್ತನಾಗಲು ಸಾಧ್ಯವಿಲ್ಲ. ಬಿಸಿ ತುಪ್ಪವನ್ನೆಂದೂ ನುಂಗಲಾಗುವುದಿಲ್ಲ, ತುಪ್ಪದ ಮೇಲೆ ಪ್ರೀತಿ ಇರುವುದರಿಂದ ಅದನ್ನು ಉಗಳಲೂ ಆಗುವುದಿಲ್ಲ. ಆದ್ದರಿಂದ ಗುರುಗಳು ಹೇಳುತ್ತಾರೆಂದು ಬಿಡಲಾರದೆ ಭಕ್ತಿ ಮಾಡುವುದು, ವಿಶ್ವಾಸವಿಲ್ಲದೆ ಪೂಜೆ ಮಾಡುವುದು ಇವೆಲ್ಲವೂ ನದಿಯ ನೀರನ್ನು ಕದಡಿದಂತೆ ವ್ಯರ್ಥವಾಗುವುದು; ಇದನ್ನು ಯಾರಿಗೆ ಹೇಳಲಿ ಎಂದು ರೇಚಣ್ಣ ಶರಣರು ಪ್ರಶ್ನಿಸುತ್ತಾರೆ.

ಭಕ್ತನಂತೆ ತ್ರಿವಿಧ ಮಲಕ್ಕಿಕ್ಕುವನೆ ಚಿತ್ತವ?
ವಿರಕ್ತನಂತೆ ಸರ್ವವ್ಯಾಪಾರಕ್ಕೆ ಮೊತ್ತದ ಇಂದ್ರಿಯ ವರ್ಗದಲ್ಲಿ
ಸುಚಿತ್ತವ ಬಿಟ್ಟು ಮತ್ತೆ ವಿರಕ್ತನಪ್ಪನೆ?
ಈ ಉಭಯದ ಭಾವವ ನಿಶ್ಚೈಸಿದಲ್ಲಿ
ಕುಸುಮ ಗಂಧದಂತೆ, ಮುಕುರ ಬಿಂಬದಂತೆ
ಉರಿ ಕಪ್ಪುರದಿರವಿನ ತೆರದಂತೆ
ನಿಃಕಳಂಕ ಕೂಡಲಚೆನ್ನಸಂಗಮದೇವ ತಾನಾದ ಶರಣ

ಭಕ್ತನಾದವನು ಆಣವಮಲ, ಮಾಯಾಮಲ ಮತ್ತು ಕಾರ್ಮಿಕಮಲಗಳಿಗೆ ಹೊರಗಾಗಿ ತನ್ನ ಚಿತ್ತವನ್ನು ಭಗವಂತನೆಡೆಗೆ ತಿರುಗಿಸುವನು. ಹಾಗೆಯೇ ವಿರಕ್ತನಾದವನು ಎಲ್ಲ ಇಂದ್ರಿಯಗಳನ್ನೂ ಜಯಿಸಿ ಪರಮಾತ್ಮನ ಸಂಗದಲ್ಲಿ ಇರಬಯಸುತ್ತಾನೆ. ವಿರಕ್ತನು ತನ್ನ ಸುಚಿತ್ತವನ್ನು ಬಿಟ್ಟರೆ ವಿರಕ್ತ ಎಂಬ ಪದಕ್ಕೆ ಅರ್ಥ ಉಳಿಯುವುದಿಲ್ಲ. ಆದ್ದರಿಂದ ಗಂಧದಲ್ಲಿ ಅಡಗಿದಂತಿರುವ ಸುವಾಸನೆಯಂತೆ, ಕನ್ನಡಿಯೊಳಗಿನ ಬಿಂಬದಂತೆ, ಕರ್ಪೂರದ ಉರಿಯಂತೆ ನಿಶ್ಚಿಂತನಾಗಿ ಬದುಕಿದವನೇ ಶರಣನಾಗುತ್ತಾನೆ ಎನ್ನುತ್ತಾರೆ ರೇಚಣ್ಣ ಶರಣರು.

ಮರದ ದೇವರಿಗೆ ಉರಿಯ ಪೂಜೆಯುಂಟೆ ?
ಮಣ್ಣಿನ ಹರುಗುಲದಲ್ಲಿ ತುಂಬಿದ ತೊರೆಯ ಹಾಯಬಹುದೆ ?
ತೆರಕಾರನ ನಚ್ಚಿ ಕಳನೇರಬಹುದೆ ?
ಇಂತೀ ಗುಣದ ದೃಷ್ಟವ ಕಡೆಗಾಣಿಸಿದಲ್ಲಿ
ಪ್ರಮಾಣಿಸಿದಲ್ಲಿಯೂ ಏತರನು
ಹಾಂಗೆ ಬರಿಹುಂಡರ, ಆಚಾರಭ್ರಷ್ಟರ, ಅರ್ತಿಕಾರರ
ಚಚ್ಚಗೋಷಿವಂತರ, ಬಹುಯಾಚಕರ
ಪಗುಡೆ ಪರಿಹಾಸಕರ, ತ್ರಿವಿಧದಲ್ಲಿ ಸೂತವನರಸುವ
ವಿಶ್ವಾಸಘಾತಕರ, ಅಪ್ರಮಾಣ ಪಾತಕರ
ಭಕ್ಕಿಯ ತೊಟ್ಟಲ್ಲಿ ಭಕ್ತನೆಂದಡೆ
ವಿರಕ್ತಿಯ ತೊಟ್ಟಲ್ಲಿ ಕರ್ತುವೆಂದಡೆ
ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ
ತಪ್ಪ ಕಂಡಲ್ಲಿ ಎತ್ತಿ ತೋರುವೆನು
ಗುಟ್ಟಿನಲ್ಲಿ ಚಿತ್ತ ಬಿಡಲಾರದಿರ್ದಡೆ
ನಿಃಕಳಂಕ ಕೂಡಲಚೆನ್ನ ಸಂಗಮದೇವರಾದಡೂ ಎತ್ತಿಹಾಕುವೆನು

ರೇಚಣ್ಣ ಶರಣರು ಅನೇಕ ಉದಾಹರಣೆಗಳ ಮೂಲಕ ಮನುಷ್ಯ ಜೀವನದ ಸಾರ್ಥಕತೆಯನ್ನು ವಿವರಿಸುತ್ತಾರೆ. ಮರದಿಂದ ಮಾಡಿದ ದೇವರುಗಳಿಗೆ ಬೆಂಕಿಯಿಂದ ಪೂಜೆ ಮಾಡಿದರೆ ಅವು ಸುಟ್ಟುಹೋಗುತ್ತವೆ, ಮಣ್ಣಿನಿಂದ ಮಾಡಿದ ನಾವೆಯು (ದೋಣಿ) ನೀರಿನಲ್ಲಿ ಕರಗಿಹೋಗುತ್ತದೆ, ಸುಂಕ ವಸೂಲಿ ಮಾಡುವವನನ್ನು ನಂಬಿ ಧಾನ್ಯವನ್ನು ಒಕ್ಕುವ ಸ್ಥಳವನ್ನು ಲೆಕ್ಕ ಹಾಕಬಹುದೆ, ಇಂತಹ ಗುಣಗಳಿರುವ ವಿಚಾರಗಳನ್ನು ಗಮನಿಸಿ ಹೇಳುವುದಾದರೆ, ಬರಿ ಹುಂಡರ (ದಡ್ಡರ) ಆಚಾರಭ್ರಷ್ಟರ, ಅರ್ತಿಕಾರ (ಆಸೆಬುರಕ), ಸಮಯ ಹಾಳುಮಾಡುವ ಹರಟೆಕೋರರ, ಬೇಕು ಬೇಕು ಎಂದು ಅತಿಯಾಸೆ ಪಡುವವರ, ಪಗಡೆ (ಜೂಜಾಟ) ಆಡುವವರ, ವಿಶ್ವಾಸಘಾತ ಮಾಡುವವರ, ಅಪ್ರಮಾಣಿಕರ, ಪಾತಕರ, ವೇಷವ ತೊಟ್ಟವರನ್ನು ಭಕ್ತರೆಂದರೆ, ವಿರಕ್ತಿಯ ವೇಷ ತೊಟ್ಟವರನ್ನು ಕರ್ತಾರನೆಂದರೆ, ದೀಕ್ಷೆ ಮಾಡಿದವನನ್ನು ಗುರುವೆಂದರೆ ಹೇಗೆ ನಂಬುವುದು? ನನಗೆ ತಪ್ಪುಗಳು ಕಂಡಲ್ಲಿ ಎತ್ತಿ ಹೇಳುವೆನು. ಸುಳ್ಳು ಹೇಳಿ ವಿಚಾರಗಳನ್ನು ಮುಚ್ಚಿಟ್ಟು ನಿಜವಾದ ಅಧ್ಯಾತ್ಮಜ್ಞಾನದ ಸೂತ್ರಗಳನ್ನು ಮತ್ತಷ್ಟು ಕಠಿಣ ಮಾಡಲಾರೆ ಎಂದು ರೇಚಣ್ಣ ಶರಣರು ಹೇಳುತ್ತಾರೆ.

ಹೊರಗಣ ಸಿಪ್ಪೆ ಒಳಗೆ ಮೆಲುವನ್ನಕ್ಕ ಉಭಯದ ಕೂಟ
ಅಗಲಿಗೆ ಬಂದ ಮತ್ತೆ ರಸಾನ್ನವಲ್ಲದೆ ಹಿಪ್ಪೆಗೆ ಚಿತ್ತ ಒಪ್ಪಬಲ್ಲುದೆ ?
ಅರಿವನ್ನಬರ ಸ್ಥಲಕುಳಂಗಳ ಹೊಲಹೊಲದ ಹೊಲಬ ತಿಳಿದಲ್ಲಿ
ಭಕ್ತಿಜ್ಞಾನವೈರಾಗ್ಯಗಳೆಂಬ ತ್ರಿವಿಧದ ಗೊತ್ತು ನಷ್ಟವಾದ ಶರಣ
ತಥ್ಯಮಿಥ್ಯಕ್ಕೆ ಸಿಕ್ಕ ಮತ್ತಾವ ಗುಣಂಗಳಲ್ಲಿಯೂ ಹೊರದೃಷ್ಟಕ್ಕೆ ಬಾರ
ಆತ ನಿಶ್ಚಿಂತ ನೋಡಾ
ನಿಃಕಳಂಕ ಕೂಡಲಚೆನ್ನಸಂಗಮದೇವ ತಾನಾದ ಶರಣ

ಹೊರಗಿನ ಸಿಪ್ಪೆಯನ್ನು ತೆಗೆದು ಒಗೆದು ಬಾಳೆಹಣ್ಣನ್ನು ಸವಿದ ಬಳಿಕ ಸಿಪ್ಪೆ ಮತ್ತು ತಿರುಳಿನ ಸಂಬಂಧ ಮುಗಿಯುತ್ತದೆ. ಊಟದ ತಟ್ಟೆಗೆ ಬಂದ ರಸಾನ್ನದ ರುಚಿ ನೋಡುತ್ತೇವೆ; ಅನ್ನದ ಸತ್ವವನ್ನೆಲ್ಲ ಹೀರಿದ ಬಳಿಕ ತಟ್ಟೆಯನ್ನು ಬಿಟ್ಟುಬಿಡುತ್ತೇವೆ. ಹಾಗೆ ಅರಿವು ಬಂದ ಬಳಿಕ ಭಕ್ತಿ ಜ್ಞಾನ ವೈರಾಗ್ಯ ಎಂಬ ಮೌಲ್ಯಗಳನ್ನು ಅರಿತು ಅವುಗಳನ್ನು ಅಕ್ಷರಶಃ ಅನುಷ್ಠಾನಕ್ಕೆ ತಂದ ಶರಣನು ಅವುಗಳಿಂದ ಹೊರತಾದ ವ್ಯಕ್ತಿಯಾಗಿ ನಿಲ್ಲುತ್ತಾನೆ. ಇದು ಸತ್ಯ ಮಿಥ್ಯಗಳನ್ನು ಮೀರಿದ ನಿಲುವು. ಆದ್ದರಿಂದ ಲೋಕದ ಎಲ್ಲ ವ್ಯವಹಾರಗಳಿಂದ ನಿರ್ಲಿಪ್ತನಾಗಿ ನಿಶ್ಚಿಂತನಾಗಿರುವವನೇ ನಿಜವಾದ ಶರಣ ಎಂದು ರೇಚಣ್ಣ ಶರಣರು ಹೇಳುತ್ತಾರೆ.

ಸಮಾರೋಪ : ರೇಚಣ್ಣ ಶರಣರು ಬರೆದಿರುವ ಒಂಬತ್ತು ವಚನಗಳಿಗೆ ಇಲ್ಲಿಯವರೆಗೆ ಯಾರೂ ನಿರ್ವಚನ ಮಾಡಿಲ್ಲದಿರುವುದು ಆಶ್ಚರ್ಯದ ಸಂಗತಿ. ಅಧ್ಯಾತ್ಮಸಾಧನೆ ಮಾಡುವ ಶರಣ ಮತ್ತು ವಿರಕ್ತನ ಇರವನ್ನು ಕುರಿತು ಇಲ್ಲಿಯ ವಚನಗಳು ದಾರಿ ತೋರುತ್ತವೆ. ಶರಣರು ದಾಂಪತ್ಯಧರ್ಮವನ್ನು ಸ್ವೀಕರಿಸಿದವರು. ಆದರೆ ಅಧ್ಯಾತ್ಮ ಸಾಧನೆ ಮಾಡುವ ಅಕ್ಕ–ಅಲ್ಲಮ–ಚನ್ನಬಸವ–ರೇಚಣ್ಣನಂತಹ ಕೆಲವೇ ಕೆಲವು ಶರಣರು ವಿರಕ್ತಿಯ ಬದುಕನ್ನು ಸಾಗಿಸಿದರು. ಯಾವುದೇ ಒಂದು ಧರ್ಮ ಸಾಂಸ್ಥೀಕರಣಗೊಳ್ಳ ಬೇಕಾದರೆ ಈ ಉಭಯ ಮಾರ್ಗಗಳೂ ಅವಶ್ಯ ಎಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ರೇಚಣ್ಣ ಶರಣರ ವಚನಗಳನ್ನು ಪರಿಭಾವಿಸಬೇಕು.

□

ಸಾಕಾರವೆಂಬ ಸೆಟ್ಟಿ, ಜೀವವೆಂಬ ಎತ್ತಿನ ಮೇಲೆ
ಎತ್ತಿ ಹೊಡೆಯಲಾಗಿ, ಬಹುವಿಧ ಚರಿತ್ರದ ಭೇದ
ಬೆವಹಾರದ ಒಡೆಯಂಗೆ ಕೊಡಿ
ಕರಣಂಗಳೆಂಬ ಸರಕ ಹೊತ್ತುಮಾರುವ ಸೆಟ್ಟಿಗಳೆಲ್ಲರೂ
ಕೊಡಿ ಬಂಕೇಶ್ವರಲಿಂಗಕ್ಕೆ ಸುಂಕವ

ಸುಂಕದ ಬಂಕಣ್ಣ

ಶರಣ ಸಂಸ್ಕೃತಿಯ ಲಾಂಛನಗಳು

ಡಾ. ಎನ್.ಎಂ. ಗಿರಿಜಾಪತಿ

ಮಧ್ಯಕಾಲೀನ ಚಾರಿತ್ರಿಕ ಕಾಲಖಂಡದಲ್ಲಿನ ಬಸವಣ್ಣನವರ ನೇತೃತ್ವದಲ್ಲಿ ಘಟಿಸಿದ ಸಮಾಜೋ–ಧಾರ್ಮಿಕ ಕ್ರಾಂತಿ ಕನ್ನಡನಾಡಿನಲ್ಲಿ ಶರಣ ಸಂಸ್ಕೃತಿಯನ್ನು ಅನಾವರಣಗೊಳಿಸಿತು. ವಿಶ್ವದ ಯಾವುದೇ ದೇಶ, ಭಾಷೆ, ಜನಾಂಗೀಯ ಸಂಸ್ಕೃತಿಗಳಲ್ಲಿ ಇಂದಿಗೂ ಕಾಣಲಾಗದ ಈ ಶರಣ ಸಂಸ್ಕೃತಿ ಸಾರ್ವಜನಿಕ ಮತ್ತು ಸಾರ್ವಕಾಲೀನ ಮೌಲಿಕತೆಗಳಿಂದ ಕೂಡಿದ ಅಪರೂಪದ ಸಾಂಸ್ಕೃತಿಕ ಆವರಣಗಳನ್ನು ಒಳಗೊಂಡಿದೆ. ಸಂಸ್ಕೃತಿ ಎಂದರೆ ಯಾವುದೇ ಒಂದು ಪ್ರದೇಶದಲ್ಲಿ ವಾಸಿಸುವ ಜನಾಂಗದ ವೇಷ, ಭಾಷೆ, ಕುಲದೇವತೆಗಳ ಕಲ್ಪನೆಗಳು, ಕುಲಚಿಹ್ನೆಗಳು ಇವನ್ನು ಲಾಂಛನಗಳು ಎಂದು ಹೆಸರಿಸಬಹುದು. ಇದು ಆಹಾರ, ನಡೆ, ನುಡಿ, ಸಂಪ್ರದಾಯ, ಆಚರಣೆ ಇತ್ಯಾದಿ ಸಂಗತಿಗಳ ಒಟ್ಟು ಮೊತ್ತವಾಗಿರುತ್ತದೆ. ಆದರೆ ಆ ಸಂಸ್ಕೃತಿಯಲ್ಲಿ ಯಜಮಾನ ಮತ್ತು ಅಧೀನ ಸಂಸ್ಕೃತಿ ಇತ್ಯಾದಿ ತಾರತಮ್ಯಗಳು ತಲೆದೋರಿದಾಗ ಸಮುದಾಯಗಳಲ್ಲಿ ವಿಷಮ ಪರಿಸ್ಥಿತಿಗಳು ತಲೆದೋರುತ್ತವೆ, ಇದರಿಂದಾಗಿ ಸಮಾಜ ಕಲುಷಿತಗೊಳ್ಳುತ್ತದೆ. ಬಸವಣ್ಣನವರು ತಮ್ಮ ಕಣ್ಣಮುಂದಣ ಸಮಾಜದಲ್ಲಿ ಇಂಥ ಅಸಂಗತ, ಅಮಾನುಷ ಸ್ಥಿತಿಗತಿಗಳನ್ನು ಕಂಡವರು. ಅಂದಿನ ಜನಸಾಮಾನ್ಯರ ದಾರುಣ ಸ್ಥಿತಿಗೆ ಮರುಗಿದವರು. ಹಾಗಾಗಿ ಅವರು ಸಮಾಜವನ್ನು ಭಕ್ತ ಮತ್ತು ಭವಿ ಎಂದು ಎರಡು ಗುಂಪುಗಳಾಗಿ ವಿಂಗಡಿಸುತ್ತಾರೆ. ಭವಿ ಎಂದರೆ ಭೋಗದ ಬದುಕಿನಲ್ಲಿ ಮುಳುಗಿದವನು, ತನ್ನನ್ನು ತಾನು ಅರಿಯದ ಅಜ್ಞಾನಿ ಎಂದರ್ಥ. ಭಕ್ತ ಭವಿಗುಣಗಳಿಗೆ ಹೊರತಾದ ಸಂಸ್ಕಾರಗಳಿಂದ ಪಕ್ವಗೊಂಡ ಮನಸ್ಥಿತಿಯವನು. ಆ ಸಂಸ್ಕಾರದ ಪ್ರತಿಫಲವೇ ಶರಣ ಸಂಸ್ಕೃತಿ. ಈ ನಿಟ್ಟಿನಲ್ಲಿ ಸುಸಂಸ್ಕೃತ ವ್ಯಕ್ತಿತ್ವದ ಮೂಲಕ ಸಮಾಜದಲ್ಲಿ ಗೌರವ ಪಡೆದುಕೊಳ್ಳುವವವನು ಶರಣ. ಈ ಅರ್ಹತೆ ಎಲ್ಲರಿಗೂ ಲಭ್ಯವಿದೆ ಎಂಬುದನ್ನು ನಿರೂಪಿಸಲು ಬಸವಣ್ಣನವರು ಹುಟ್ಟುಹಾಕಿದ ನವಸಮಾಜವೇ ಭಕ್ತಸಮಾಜ.

ಈ ಭಕ್ತಸಮಾಜದಲ್ಲಿ ಪ್ರವೇಶ ಪಡೆಯಲು, ಶರಣರಾಗಲು ಯಾವುದೇ ಜಾತಿ, ಕುಲ, ಮೇಲು, ಕೀಳು, ಹೆಣ್ಣು ಗಂಡು ಇತ್ಯಾದಿ ತಾರತಮ್ಯಗಳ ಗೋಜಲುಗಳಿಲ್ಲ. ಇಲ್ಲಿ ಎಲ್ಲರಿಗೂ ಮುಕ್ತ ಅವಕಾಶಗಳಿವೆ. ಹಾಗೆ ಭಕ್ತನಾದವನು ಕ್ರಮವಾಗಿ ತಲುಪುವ ಮತ್ತೊಂದು ಪದವಿಯೇ ಶರಣ ಪದವಿ, ಆದರೆ ಇಲ್ಲಿನ 'ಪದವಿ' ಎನ್ನುವುದರ ವ್ಯಾಪಕ ಅರ್ಥ

ಅಧಿಕಾರವೆಂದಲ್ಲ, ಯಜಮಾನಿಕೆ ಎಂದಲ್ಲ. ಬದಲಿಗೆ, ನಿರಸನ ಪ್ರಜ್ಞೆಗಳತ್ತ ಮುಖಮಾಡುವುದು, ಅಂದರೆ ತನ್ನನ್ನು ತಾನು ತಿಳಿದುಕೊಳ್ಳುವುದು. ಹುಟ್ಟಿನಿಂದ ಯಾರೂ ಪವಿತ್ರರೂ ಅಲ್ಲ, ಅಪವಿತ್ರರೂ ಅಲ್ಲ, ಶ್ರೇಷ್ಠರೂ ಅಲ್ಲ, ಕನಿಷ್ಠರೂ ಅಲ್ಲ ಎನ್ನುವ ವಿಷಯವನ್ನು ಅರಿವಿಗೆ ತಂದುಕೊಳ್ಳುವುದು. ಶರಣರ ಪರಿಪೂರ್ಣತೆಯನ್ನು ಕುರಿತಂತೆ '.....ಶರಣ ನಡೆದುದೆ ಪಾವನ ಕಾಣಿರೋ/ ಶರಣ ನುಡಿದುದೇ ಶಿವತತ್ವ ಕಾಣಿರೋ / ಕೂಡಲಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ (ವ.ಸಂ: 873 ಪು.ಸಂ: 228)' ಎಂದಿರುವಲ್ಲಿ ಶರಣರ ಕಾಯ ಕೈಲಾಸವಾಗುತ್ತದೆ. ಇಲ್ಲಿ ಜೀವಾತ್ಮನಾದ ಮನುಷ್ಯ ಪರಮಾತ್ಮನ ಆವಾಸಸ್ಥಾನವೇ ಹೌದು. ಭಕ್ತರಾಗಿ ಬಂದವರು, ಶರಣರಾದವರು ಸಹ ಸಾಮಾನ್ಯ ಮನುಷ್ಯರೇ. ಆದರೆ ಆ ಸಾಮಾನ್ಯರ ಶರೀರ ಅಥವಾ 'ತನು' ಸ್ವತಃ ಭಗವಂತನ ನಿವಾಸವೆಂದು ಮತ್ತೆ ಮತ್ತೆ ನಿರೂಪಿಸುತ್ತ ತಾವು ಅಪವಿತ್ರರಲ್ಲವೆಂಬ ಭಾವನೆಯನ್ನು, ಶತಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಶೋಷಿತ ಸಮುದಾಯಗೆ ಮನವರಿಕೆ ಮಾಡುವಲ್ಲಿ ಬಸವಣ್ಣ ಮುಂದಾದುದರ ಪರಿಣಾಮವಾಗಿ ರೂಪುಗೊಂಡದ್ದು ಶರಣ ಸಂಸ್ಕೃತಿ. ಇದು ವೈದಿಕ ಸಂಸ್ಕೃತಿಗೆ ಹೊರತಾದ ಶಿವನನ್ನೊಳಗೊಂಡ ಶಿವಸಂಸ್ಕೃತಿ. ಸಾಕಾರದಿಂದ ನಿರಾಕಾರ, ಸಗುಣದಿಂದ ನಿರ್ಗುಣದೆಡೆಗೆ ಸಾಗುವ ಅನುಭಾವದ ಮೇರುಸಂಸ್ಕೃತಿ. ಶರಣರಾಗ ಬಂದವರ, ಬಯಸುವವರ ನಡೆ–ನುಡಿ, ಆಲೋಚನೆ ದೇವರು, ಧರ್ಮ, ಆಹಾರ, ವೇಷ ಭೂಷಣ ಇತ್ಯಾದಿಗಳೆಲ್ಲವನ್ನೂ ಒಳಗೊಂಡಂತೆ ಆದ್ಯಂತಿಕವಾಗಿ ಆತ್ಮೋದ್ಧಾರದತ್ತ ಮುಖಮಾಡುವಂತೆ ಮಾಡುವ ಸಾಂಸ್ಕೃತಿಕ ಶಿವಪದವಿ. ಈ ಸಂಸ್ಕೃತಿಯಲ್ಲಿ ಪ್ರವೇಶ ಪಡೆದ ಭಕ್ತರೆಲ್ಲ ಶರಣರು, ಶರಣರಾಗುವವರು. ಆದರೆ ಹಾಗೆ ಆಗುವುದು ಅಷ್ಟು ಸುಲಭವಲ್ಲ; ಹಾಗೆ ಆದ ಶರಣರನ್ನು ತಿಳಿಯುವುದೂ ಸಹ ಸುಲಭವಲ್ಲ. ಶರಣನೆಂದರೆ 'ಅರಿದಡೆ ಶರಣ, ಮರೆದಡೆ ಮಾನವ' ಎಂಬ ಅನುಭಾವಿ ದೃಷ್ಟಿಯ ರೂಪಕ. ಶರಣರೆಂದರೆ ಅನುಭಾವಿಗಳು, ಶಿವಾನುಭಾವಿಗಳು, ಶಿವಶರಣರು. ಆರಂಭದಲ್ಲಿ ಪ್ರಸ್ತಾಪಿಸಿದಂತೆ ಬಸವಣ್ಣನವರು ಭಕ್ತಸಮಾಜ ಅಥವಾ ಭಕ್ತಕುಲಕ್ಕೆ ಲಾಂಛನಗಳನ್ನು ಕಡ್ಡಾಯಗೊಳಿಸುತ್ತಾರೆ. ಬಹುಶಃ ಈ ಲಾಂಛನಗಳನ್ನು ಇಂಗ್ಲಿಷಿನ 'Totem' ಎಂಬ ಪರಿಕಲ್ಪನೆಗೆ ಹೋಲಿಸಬಹುದೆ, ಈ ಬಗ್ಗೆ ಚರ್ಚೆ ನಡೆಯಬೇಕಿದೆ.

ಆಧುನಿಕ ದಿನಮಾನಗಳಲ್ಲಿ ನಾವು ಬಳಸುವ ಗುರುತುಗಳಂತೆ ಭಕ್ತಸಮಾಜದವರು ಎಂಬುದನ್ನು ಕಂಡೊಡನೆ ಗ್ರಹಿಸಲು ಅವಕಾಶ ಇರುವಂಥವು ಶರಣ ಸಂಸ್ಕೃತಿಯ ಲಾಂಛನಗಳು. ಅವುಗಳಲ್ಲಿ ವಿಭೂತಿ ಮತ್ತು ರುದ್ರಾಕ್ಷಿ ಮುಖ್ಯವಾಗಿ ಹೊರನೋಟಕ್ಕೆ ಕಾಣುವಂತಿರಬೇಕು. ಲಿಂಗವನ್ನು ಭವಿಗಳ ದೃಷ್ಟಿಗೆ ಸಿಲುಕದಂತೆ ಧರಿಸಬೇಕೆಂಬ ನಿಯಮಗಳನ್ನು ಬಸವಣ್ಣನವರು ಅನುಷ್ಠಾನಕ್ಕೆ ತರಲು ಮುಂದಾದರು. ಹೊನ್ನ ಹಾವುಗೆಯ ಮೆಟ್ಟಿದವನ / ಮಿಡಿ ಮುಟ್ಟಿದವನ ಮೈಯಲ್ಲಿ ವಿಭೂತಿಯ ಹೂಸಿದವನ / ಕರದಲ್ಲಿ ಕಪಾಲವ ಪಿಡಿದವನ (ವ.ಸಂ: 502 ಪು: 121) ಎಂದೆಲ್ಲ ಶಿವನ ಲೀಲೆಯನ್ನು ವರ್ಣಿಸುವ

ಬಸವಣ್ಣನವರು, ಆ ಶಿವ ಧರಿಸಿದ್ದನೆನ್ನಲಾಗುವ ಲಾಂಛನಗಳನ್ನು ಶಿವಭಕ್ತರಿಗೆ ಕಡ್ಡಾಯಗೊಳಿಸುತ್ತಾರೆ. ಅವುಗಳಲ್ಲಿ ಮೊದಲನೆಯದು ವಿಭೂತಿ. ಎರಡನೆಯದು ರುದ್ರಾಕ್ಷಿ, ಮೂರನೆಯದು ಲಿಂಗ (ಇಷ್ಟಲಿಂಗ). ಈ ಲಾಂಛನಗಳು ಸ್ವಯಂ ಶಿವನ ಲಾಂಛನಗಳು. ಅಂದರೆ, ಶಿವನು ಭಸ್ಮ ಮತ್ತು ರುದ್ರಾಕ್ಷ ಮಾಲಾಧಾರಿ. ಲಿಂಗವು ಆ ಶಿವನ ಸ್ವಯಂಪ್ರತೀಕ. ಹಾಗಾಗಿ ಭಕ್ತರ ಮೊದಲ ಲಾಂಛನ ಹಣೆಯಲ್ಲಿ ಧರಿಸಬೇಕಾದ ವಿಭೂತಿ.

(ಅ) **ವಿಭೂತಿ :** '....ವಿಭೂತಿಯನೆ ಹೂಸಿ / ರುದ್ರಾಕ್ಷಿಯನೆ ಕಟ್ಟಿ' (ವ.ಸಂ: 270 ಪು: 67) ಎಂದು ಬಸವಣ್ಣನವರು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀವಿಭೂತಿಯ ಬಿಟ್ಟು ತಪಸ್ಸು ಮಾಡಿದಡೆ ಆ ತಪಃಸಿದ್ಧಿ ಬಯಲು / ಶ್ರೀ ವಿಭೂತಿಯ ಬಿಟ್ಟು ದೀಕ್ಷೆಯ ಕೊಂಡಡೆ ಆ ದೀಕ್ಷೆ ಬಯಲು / ಶ್ರೀ ವಿಭೂತಿಯ ಬಿಟ್ಟು ಮಂತ್ರಂಗಳ ಸಾಧಿಸಿದೆಡೆ ಆ ಯಜ್ಞಸಿದ್ಧಿ ಬಯಲು / ಶ್ರೀವಿಭೂತಿಯ ಬಿಟ್ಟು ಯಜ್ಞಂಗಳ ಸಾಧಿಸಿದಡೆ ಆ ಯಜ್ಞಸಿದ್ಧಿ ಬಯಲು / ಶ್ರೀ ವಿಭೂತಿಯ ಬಿಟ್ಟು ದೇವತಾರ್ಚನೆ ಮಾಡಿದಡೆ ಆ ದೇವತಾರ್ಚನೆ ಬಯಲು / ಶ್ರೀ ವಿಭೂತಿಯ ಬಿಟ್ಟು ವಿದ್ಯವ ಸಾಧಿಸಿದಡೆ ಆ ವಿದ್ಯ ಸಿದ್ಧಿ ಬಯಲು.... ಲಲಾಟದಲಿ ವಿಭೂತಿ ಧರಿಸಲ್ಕೆ ಪಾಪಂಗಳು ಬೆಂದುಹೋಗಲ್ಕೆ (ವ.ಸಂ: 1369 ಪು.ಸಂ: 378) ಶ್ರೀ ವಿಭೂತಿ ರುದ್ರಾಕ್ಷಿ ಇದ್ದವರ ಲಿಂಗವೆಂಬೆ / ಇಲ್ಲದವರ ಭವಿಯೆಂಬೆ (ವ.ಸಂ: 452 ಪು: 109) ಎಂದು ಬಸವಣ್ಣ ಕಠಿಣವಾಗಿ ಹೇಳಿದ್ದಾರೆ. ಶ್ರೀವಿಭೂತಿಯ ಹೂಸದವರ / ಶ್ರೀರುದ್ರಾಕ್ಷಿಯ ಧರಿಸದವರ / ನಿತ್ಯಲಿಂಗಾರ್ಚನೆಯ ಮಾಡದವರ / ಜಂಗಮವೇ ಲಿಂಗವೆಂದರಿಯದವರ ಸದ್ಭಕ್ತರ ಸಂಗದಲ್ಲಿರದೇವರ ತೋರದಿರು ಕೂಡಲಸಂಗಮದೇವಾ (ವ.ಸಂ: 455 ಪು: 110) ಎನ್ನುತ್ತಾರೆ. ಲಾಂಛನಗಳು ಇದ್ದಲ್ಲಿ ಮಾತ್ರ ಅವರು ಭಕ್ತರು. ಭಕ್ತನ ಬಹಿರಂಗ ಮತ್ತು ಅಂತರಂಗವನ್ನು ಕ್ರಮವಾಗಿ ಶೃಂಗರಿಸುವ ಪರಿಣಾಮಕಾರಿ ಗುಣಗಳನ್ನು ಒಳಗೊಂಡಿವೆ. ಭಕ್ತರಲ್ಲಿನ ಶೂದ್ರತ್ವ ಭಾವವನ್ನು ಅಳಿಸುವ ಶಕ್ತಿ ವಿಭೂತಿಗಿದೆ ಎನ್ನುವ ಬಸವಣ್ಣನವರು ಹಾರುವರೆಲ್ಲರೂ ಶೂದ್ರನ ಮಾಡುವಲ್ಲಿ ವಿಭೂತಿಯಿಲ್ಲದೆ ಮತ್ತೇನನೂ ಮಾಡಲಾಗದು (ವ.ಸಂ: 613 ಪು: 153); ಶ್ರೀವಿಭೂತಿ ರುದ್ರಾಕ್ಷಿ ಭಕುತಿಯು ಮುಕುತಿಗೆ ಸಾಧನವೋ ಎನ್ನ ತಂದೆ (ವ.ಸಂ: 1363 ಪು: 376); ಕೂಡಲಸಂಗನ ಶರಣರಿಗೆ ನೊಸಲ ವಿಭೂತಿಯೆ ಶೃಂಗಾರ (ವ.ಸಂ: 74 ಪು: 21); ಸಕಲ ಕ್ರಿಯೆಗಳಿಗಿದು ಕವಚ / ಸಕಲ ವಶ್ಯಕ್ಕಿದು ಶುಭತಿಲಕ / ಸಕಲ ಸಂಪದಕ್ಕೆ ತಾಣವಿದು / ಅಘಟಿತಘಟಿತವೆನಿಸುವ ಅನುಪ, ತ್ರಿಪುಂಡ್ರ, ಅಣುಮಾತ್ರ, ವಿಭೂತಿಯ ಘಣಿಯೊಳಿಡೆ ಎಣಿಕೆಯಿಲ್ಲದ ಭವಪಾಶ ಪರಿವುದು / ತ್ರಿಣಯ ನೀನೊಲಿದು ಧರಿಸಿದೆಯೆಂದೆನೆ.... (ವ.ಸಂ: 1374 ಪು: 380); ಲಲಾಟದಲ್ಲಿ ವಿಭೂತಿ ಬರೆಯಲಿಕೆ ಪಾಪಪಲ್ಲಟವಾಗದೆ ಎಂದ ಬಸವಣ್ಣನವರು ಭಸ್ಮಧಾರಣೆಯಿಂದ ಭಕ್ತರ ಪಾಪ ಕರ್ಮಗಳು ಅಳಿಯುತ್ತವೆ ಎಂಬ ಭರವಸೆಯನ್ನು ಸ್ವತಃ ನೀಡುತ್ತಾರೆ.

(ಆ) ರುದ್ರಾಕ್ಷಿ : ರುದ್ರ ಅಕ್ಷಿ. ಶಿವನ ಕಣ್ಣಿನಿಂದ ಉದುರಿದ ನೀರಿನ ಹನಿಗಳಿಂದ ರೂಪಗೊಂಡ ವೃಕ್ಷವೇ ರುದ್ರಾಕ್ಷಿ ವೃಕ್ಷ. ಆ ವೃಕ್ಷದಲ್ಲಿ ಪ್ರಕೃತಿರೂಪದಲ್ಲಿ ದೊರೆಯುವಂಥವು ರುದ್ರಾಕ್ಷಿಗಳು. ಈ ರುದ್ರಾಕ್ಷಿಗಳ ಧಾರಣೆಯು ಶರಣ ಸಂಸ್ಕೃತಿಯ ಎರಡನೆಯ ಮಹತ್ವದ ಲಾಂಛನ. ಶ್ರೀರುದ್ರಾಕ್ಷಿಯ ಧರಿಸದ ಅಧಮರು ಭವಿಗಳೆಂಬೆ / ಶ್ರೀರುದ್ರಾಕ್ಷಿಯ ಧರಿಸುವ ಭಕ್ತರು ನೀನೆಂಬೆ (ವ.ಸಂ: 1368 ಪು: 378) ಎನ್ನುವ ಬಸವಣ್ಣನವರು 'ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾವನವು / ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಕಾರಣವು / ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಸಾಧನವು / ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಸಿದ್ಧಿ / ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾಪ ಕ್ಷಯವು' ಎಂದು ವಿವರಿಸಿದ್ದಾರೆ. ಜೊತೆಗೆ ಈ ರುದ್ರಾಕ್ಷಿಯು ರೂಪಗೊಂಡ ಬಗ್ಗೆ ಬಸವಣ್ಣನವರು 'ಅಯ್ಯಾ ನಿಮ್ಮ ಪಂಚವಕ್ತ್ರಂಗಳೇ ಪಂಚಮುಖದ ರುದ್ರಾಕ್ಷಿಗಳಾದವಾಗಿ ಅಯ್ಯಾ ಕೂಡಲ ಸಂಗಮದೇವಯ್ಯಾ ಎನ್ನ ಮುಕ್ತಿಪಥಕ್ಕೆ ಶ್ರೀ ರುದ್ರಾಕ್ಷಿಯೆ ಸಾಧನವಯ್ಯಾ' (ವ.ಸಂ: 983 ಪು: 264) ಎಂದು ಹೇಳಿದ್ದಾರೆ. ಈ ರುದ್ರಾಕ್ಷಿಗಳು ಶಿವನ ಪಂಚಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಮುಖಗಳಿಂದ ರೂಪುಗೊಂಡವೆಂದು ಹೇಳಿದ್ದಾರೆ. ರುದ್ರಾಕ್ಷಿಗಳನ್ನು ದೇಹದ ಯಾವ ಭಾಗಗಳಲ್ಲಿ ಧರಿಸಬೇಕೆಂಬುದನ್ನು ಕುರಿತಂತೆ 'ಹಸ್ತ, ತೋಳು, ಉರ, ಕಂಠ, ಕರ್ಣ, ಮಸ್ತಕದಲ್ಲಿ ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನೇ ರುದ್ರನು ನೋಡಾ' ಎಂದು ಸೂಚಿಸಿದ್ದಾರೆ (ವ.ಸಂ: 1403 ಪು: 388). ಅಯ್ಯಾ ರುದ್ರಾಕ್ಷಿಯಿಂದ ಹರಿದೆನು ಭವಪಾಶಂಗಳ / ಅಯ್ಯಾ ರುದ್ರಾಕ್ಷಿಯಿಂದ ಮುರಿದೆನು ತನುಗುಣಾದಿಗಳ / ಅಯ್ಯಾ ರುದ್ರಾಕ್ಷಿಯಿಂದ ಒರೆಸಿದೆನು ಮಹಾಮಾಯೆಯ / ಅಯ್ಯಾ ರುದ್ರಾಕ್ಷಿಯಿಂದ ಕಳೆದೆನು ಪಂಚಮಹಪಾತಕವ / ಅಯ್ಯಾ ಕೂಡಲಸಂಗಮದೇವಾ ಶ್ರೀ ಮಹಾರುದ್ರಾಕ್ಷಿಯಿಂದ ಗೆಲಿದೆನಯ್ಯಾ ಸಕಲ ದುರಿತಂಗಳನು (ವ.ಸಂ: 1005 ಪು: 270) ಎನ್ನುತ್ತಾರೆ. ಹಾಗಾಗಿ ಆ ಲಾಂಛನಗಳು ಕೇವಲ ತೋರಿಕೆಯ ಸಂಕೇತಗಳಲ್ಲ, ಅವುಗಳಿಗೆ ನಿರ್ದಿಷ್ಟ ತತ್ವಗಳಿವೆ, ತಾತ್ವಿಕ ಚಿಂತನೆಗಳಿವೆ, ಕಟ್ಟುಪಾಡುಗಳಿವೆ. ಹೀಗೆಂದ ಮಾತ್ರಕ್ಕೆ ಈ ಲಾಂಛನಗಳ ತಾತ್ವಿಕ ಬದ್ಧತೆಗಳನ್ನು ಕುರಿತಂತೆ ನಿಖರವಾಗಿ ಗ್ರಹಿಸುವ ಮಾನದಂಡಗಳೇನು ಎನ್ನುವ ಪ್ರಶ್ನೆ ಎದುರಾಗುತ್ತದೆ. ಅದಕ್ಕೆ ಬಸವಣ್ಣನವರು ಹೇಳುವ ಉತ್ತರ 'ಅವರಿಗೆ ಅವರೇ ಉತ್ತರ, ಅವರಿಗೆ ಅವರೇ ಮಾನದಂಡ, ಅವರ ಅಂತರಾತ್ಮವೇ ಅವರವರ ನಿಜವಾದ ಪರೀಕ್ಷಕ'. ಮಾತ್ರ ಲಾಂಛನಗಳನ್ನು ಕಂಡು ಶರಣು ಸಮರ್ಪಣೆ ಮಾಡುತ್ತೇನೆ 'ಲಾಂಛನವ ಕಂಡು ನಂಬುವೆ. ಅವರಂತರಂಗವ ನೀನೇ ಬಲ್ಲೆ' (ವಸಂ: 402 ಪು: 97) 'ಅಡ್ಡ ತ್ರಿಪುಂಡ್ರದ, ಮಣಿಮಕುಟ ವೇಷದ ಶರಣರ ಕಂಡಡೆ ನಂಬುವುದೆನ್ನ ಮನವು' (ವ.ಸಂ: 88 ಪು: 25), 'ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು' (ವ.ಸಂ: 88 ಪು: 25) ಎಂದು ಬಸವಣ್ಣನವರು ಲಾಂಛನಗಳನ್ನು ಕಡ್ಡಾಯಗೊಳಿಸುತ್ತಾರೆ.

(ಇ) **ಲಿಂಗ–ಇಷ್ಟಲಿಂಗ–ಪ್ರಾಣಲಿಂಗ :** ಪ್ರಾಕೃತಿಕವಾಗಿ ಎಲ್ಲ ಮನುಷ್ಯರೂ ಲಿಂಗಾಂಗಿಗಳೇ. ಆದರೆ ಇಲ್ಲಿನ ಲಿಂಗ ಪರಿಕಲ್ಪನೆ ಇಂದ್ರಿಯಗಳಿಗೆ ಸಂಬಂಧಿಸಿದ್ದಲ್ಲ, ಆತ್ಮಚೇತನದ ಚಿತ್ಕಳೆಯ ಪ್ರತೀಕವಾಗಿರುವಂತಹುದು. ಭಕ್ತಸಮಾಜದಲ್ಲಿ ಸಾಮೂಹಿಕವಾದ, ಸಾರ್ವಕಾಲೀನವಾಗಿ ಧರಿಸಲು ಅವಕಾಶವಿರುವ ಲಾಂಛನಗಳಲ್ಲಿ ಲಿಂಗ ಮತ್ತೊಂದು ಮಹತ್ವದ ಲಾಂಛನ. ಅಂದರೆ ಲಿಂಗವನ್ನು ಧರಿಸುವಲ್ಲಿ ಹೆಣ್ಣು, ಗಂಡೆಂಬ ಭೇದವಿಲ್ಲ, ಯಾವುದೇ ರೀತಿಯ ಸೂತಕ, ಮೈಲಿಗೆಗಳ ದಿನಗಳಲ್ಲಿ ಧರಿಸಬಾರದೆಂಬ ನಿಷೇಧದ ಪರಿಕಲ್ಪನೆಯಿಲ್ಲ. ಸದಾ ತಮ್ಮ ಶರೀರದ ಮೇಲೆ ಎಲ್ಲರೂ ಎಲ್ಲ ಕಾಲದಲ್ಲಿಯೂ ಧರಿಸಲು ಮುಕ್ತವಾದ ಅವಕಾಶಗಳಿವೆ. ಲಿಂಗವನ್ನು ಧರಿಸದೆ ಇರುವುದು ಒಪ್ಪದ ವಿಚಾರ, ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ (ಇಲ್ಲಿ ಲೌಕಿಕವೆಂದರೆ ಭವಿಗಳು ಎಂದರ್ಥ), ಹಾಗಾಗಿ ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ (ವ.ಸಂ: 608) ಎನ್ನುವ ಬಸವಣ್ಣನವರ ದೃಷ್ಟಿಯಲ್ಲಿ ಲಾಂಛನಗಳನ್ನು ಧರಿಸುವುದೆಂದರೆ ನಿಯಮಬದ್ಧ ವ್ರತಗಳನ್ನಾಚರಿಸುವಲ್ಲಿ ಮುಂದಾದ ವ್ರತಿಗಳಂತೆ ಇರಬೇಕು. ಹಾಗೆ ವ್ರತಿಗಳಾದವರನ್ನು ಲಿಂಗವಿಕಾರಿಗಳು ಎನ್ನಲಾಗಿದ್ದು, ಅಂಥವರಿಗೆ ಅಂಗವಿಕಾರಗಳು ಇರಲಾರವು, ಅಂದರೆ ಶರೀರದ ಮೇಲಿನ ಮೋಹ, ವ್ಯಾಮೋಹಗಳು ಅಳಿದುಹೋಗುತ್ತವೆ ಎಂದರ್ಥ. ಹಾಗಾಗಿ ಲಿಂಗಧಾರಣೆ, ಲಿಂಗಾನುಸಂಧಾನದ ಮಹತ್ವದ ಹೆಜ್ಜೆ. ಆದರೆ ಇಲ್ಲಿನ ಇಷ್ಟಲಿಂಗ ಶಿವ ಹಾಗೂ ಶಿವನ ಲಿಂಗಾಕಾರ ಅದು ವೈದಿಕರ ಶಿವನಿಗೆ ಸೇರಿದ್ದಲ್ಲ; ಆ ಶಿವನ ಆಕಾರದ್ದೂ ಅಲ್ಲ. ಆತ ಪ್ರತಿಯೊಬ್ಬರ ಶರೀರದೊಳಗಿನ ಆತ್ಮಪ್ರಕಾಶದ ಪ್ರತಿರೂಪ, ಹಾಗಾಗಿ ಇಲ್ಲಿನ ಲಿಂಗ, ಇಷ್ಟಲಿಂಗ, ಲಿಂಗಯ್ಯ, ಲಿಂಗದೇವರ ಪರಿಕಲ್ಪನೆಗಳು ಹಲವು ವಿಶಿಷ್ಟತೆಗಳಿಂದ ಕೂಡಿವೆ. ಜೀವನಾದ ಮನುಷ್ಯನು ಅಂಗರೂಪಿ (ಅಂಗ ಎಂದರೆ ಶರೀರ ಎಂದರ್ಥ); ಈ ಅಂಗದ ಮೇಲೆ ತನ್ನ ಶರೀರದೊಳಗೆ ಆತ್ಮಪ್ರಭೆಯಂತೆ ಭಾಸವಾಗುವ ಸಾಕಾರ ರೂಪವೇ ಲಿಂಗ. ಇದನ್ನು ನಿರಾಕಾರಕ್ಕೆ ನೀಡಿದ ಸಾಕಾರ, ನಿರ್ಗುಣಕ್ಕೆ ಸಗುಣದ ಸ್ಪರ್ಶ ನೀಡಿದ ಹಿನ್ನೆಲೆ ಅತ್ಯಂತ ಸೂಕ್ಷ್ಮವಾದುದು, ಕಾರಣಲಿಂಗ ಎಂಬುದು ಅರಿವಿನ ಕುರುಹು ಮಾತ್ರ. ಹಾಗಾಗಿ ಬಸವಣ್ಣನವರು ಕುರುಹಿನ ರೂಪವಾದ ಲಿಂಗಯ್ಯ ಅಥವಾ ಶಿವನನ್ನು ಲಿಂಗರೂಪಿಯಾಗಿ ದೇಗುಲಗಳಲ್ಲಿ ಸ್ಥಾಪಿಸಲಾಗಿರುವ ಶಿವಲಿಂಗಗಳಲ್ಲಿ ಈ ಲಿಂಗದ ಬಾಣಾಕಾರವನ್ನು ಮಾತ್ರ (ಪಾಣಿಪೀಠ ಹೊರತು ಪಡಿಸಿದ ಗೋಳಾಕೃತಿ) ಹೊಂದಿರುವ ಆಕಾರದಲ್ಲಿ ಸಿದ್ಧಪಡಿಸಿಕೊಂಡಿರುವ ಲಿಂಗವನ್ನು ಕುರಿತು ಹೇಳುತ್ತಾರೆ. ಭಕ್ತನಾದವನು ತನ್ನ ಶರೀರದ ಮೇಲೆ ತಾನು ಇಷ್ಟಪಟ್ಟು ಧರಿಸಿಕೊಳ್ಳುವುದು ಮಹತ್ವದ ಲಾಂಛನ. ಈ ಲಿಂಗವು ಭಕ್ತ ಅಥವಾ ಶರಣರಿಗೆ ಸ್ವಯಂ ಪರಮಾತ್ಮ. 'ಪರಮಾತ್ಮನ ಲಿಂಗವು ತಾನೆಂದರಿದ ಶರಣಂಗೆ' (ವ.ಸಂ: 1036 ಪು: 279).

ಲಾಂಛನಗಳನ್ನು ಒಳಗೊಂಡವರು ಭಕ್ತನಾಗಿ, ಮಹೇಶ್ವರನಾಗಿ, ಪ್ರಸಾದಿಯಾಗಿ, ಪ್ರಾಣಲಿಂಗಿಯಾಗಿ, ಶರಣನಾಗಿ ಕೊನೆಗೆ ಶಿವನಲ್ಲಿ ಒಂದಾಗುವ ಐಕ್ಯಸ್ಥಲವನ್ನು ಸಾಧಿಸುವುದು ಈ ಸಮಾಜದ ಆಧ್ಯಂತಿಕ ಶಕ್ತಿಯೆಂಬಂತೆ ಬಿಂಬಿತವಾಗಿದೆ. ಹಾಗಾಗಿ ಈ ಆವರಣಗಳಲ್ಲಿ ಭಕ್ತನಾಗಲು ಬಂದವರಿಗೆ ಲಾಂಛನಗಳಿವೆ, ಲಾಂಛನಗಳನ್ನು ಪಡೆದುಕೊಳ್ಳುವಲ್ಲಿ ಗುರುವಿನ ಸಾಂಗತ್ಯಕ್ಕೆ ಬರಬೇಕಾದ ಅಗತ್ಯಗಳಿವೆ. ಅಂದರೆ ಭಕ್ತನು ಮೊದಲಿಗೆ ಶಿಷ್ಯನಾಗಿ ಯೋಗ್ಯನಾದ ಗುರುವಿನ ಬಳಿ ಶರಣ ಸಂಸ್ಕೃತಿ ಮತ್ತು ಶರಣ ಧರ್ಮದ ಬಗೆಗೆ ಅರಿವು ಪಡೆದುಕೊಳ್ಳುವುದು. ಅಂದರೆ ದೀಕ್ಷೆಯಂತಹ ಸಂಸ್ಕಾರಕ್ಕೆ ಒಳಗಾಗುವುದು ಅಗತ್ಯ. ಸಂಸ್ಕಾರಕ್ಕೆ ಒಳಗಾದ ನಂತರ ಈ ಆವರಣದಲ್ಲಿನ ಲಾಂಛನಗಳನ್ನು ಧರಿಸುವುದು, ನಿಯಮಾದಿಗಳನ್ನು ಅನುಸರಿಸುವುದು ಕಡ್ಡಾಯ.

□

ಇಂದೆನ್ನ ಮನೆಗೆ ಒಡೆಯರು ಬಂದಡೆ
ತನುವೆಂಬ ಕಳಶದಲುದಕವ ತುಂಬಿ
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ
ನಿತ್ಯ ಶಾಂತಿಯೆಂಬ ಶೈತ್ಯದೊಡನೆ ಸುಗಂಧವ ಪೂಸುವೆ
ಅಕ್ಷಯ ಸಂಪದವೆಂದರಿದು ಅಕ್ಷತೆಯನೇರಿಸುವೆ
ಹೃದಯಕಮಲ ಪುಷ್ಪದೊಡನೆ ಪೂಜೆಯ ಮಾಡುವೆ
ಸದ್ಭಾವನೆಯೊಡನೆ ಧೂಪವ ಬೀಸುವೆ
ಶಿವಜ್ಞಾನ ಪ್ರಕಾಶದೊಡನೆ ಮಂಗಳಾರತಿಯನೆತ್ತುವೆ
ನಿತ್ಯತೃಪ್ತಿಯೊಡನೆ ನೈವೇದ್ಯವ ಕೈಕೊಳಿಸುವೆ
ಪರಿಣಾಮದೊಡನೆ ಕರ್ಪೂರ ವೀಳೆಯವ ಕೊಡುವೆ
ಪಂಚಬ್ರಹ್ಮದೊಡನೆ ಪಂಚಮಹಾವಾದ್ಯವ ಕೇಳಿಸುವೆ
ಹರುಷದೊಡನೆ ನೋಡುವೆ
ಆನಂದದೊಡನೆ ಕುಣಿಕುಣಿದಾಡುವೆ
ಪರವಶದೊಡನೆ ಹಾಡುವೆ, ಭಕ್ತಿಯೊಡನೆ ಎರಗುವೆ
ನಿತ್ಯದೊಡನೆ ಕೂಡಿ ಆಡುವೆ
ಚೆನ್ನಮಲ್ಲಿಕಾರ್ಜುನಾ, ನಿಮ್ಮ ನಿಲವ ತೋರಿದ
ಗುರುವಿನಡಿಯಲ್ಲಿ ಅರನಾಗಿ ಕರಗುವೆ

ಅಕ್ಕಮಹಾದೇವಿ

ಸೀಮಾತೀತ ವ್ಯಕ್ತಿತ್ವದ ಅಕ್ಕ

ಸಿ.ಎಸ್. ರಾಘವೇಂದ್ರ

ಅಕ್ಕಮಹಾದೇವಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮರೆಯಲಾಗದ ಮಾಣಿಕ್ಯದೀಪ್ತಿ. ಕನ್ನಡ ಸಾಹಿತ್ಯದ ಮೊಟ್ಟಮೊದಲ ಕವಯತ್ರಿಯಾಗಿ ಮಾತ್ರವಲ್ಲದೆ ಆದರ್ಶವನ್ನೊಳಗೊಂಡ ವಚನಗಳ ಮೂಲಕ ಅಂದಿನಿಂದ ಇಂದಿನವರೆಗೂ ಅನೇಕರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾಳೆ.

ಹರಿಹರನ ಪ್ರಕಾರ ಅಕ್ಕಮಹಾದೇವಿ ಅಪ್ರತಿಮ ಸುಂದರಿ. ಬಾಲ್ಯದಿಂದಲೇ ಶಿವನ ಮೇಲೆ ಅಪಾರವಾದ ಪ್ರೇಮವನ್ನು ಹೊಂದಿದ್ದವಳು. ಯೌವನಾವಸ್ಥೆಗೆ ಬಂದಾಗ ಶಿವನನ್ನೇ ಪತಿಯೆಂದು, ಇಷ್ಟದೈವವೆಂದು ಸ್ವೀಕರಿಸಿದವಳು. ಇಂತಹ ಮಹಾದೇವಿಯು ಕೌಶಿಕ ಮಹಾರಾಜನ ಕಣ್ಣಿಗೆ ಬಿದ್ದಳು. ಕೌಶಿಕ ಮಹಾರಾಜ ಅಕ್ಕಮಹಾದೇವಿಯ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಮದುವೆಯಾಗಬೇಕು ಎಂದು ಬಯಸಿದ. ಮಹಾದೇವಿ ಇದಕ್ಕೆ ಒಪ್ಪದಿದ್ದರೂ ರಾಜನ ಮಾತನ್ನು ವಿರೋಧಿಸಿದರೆ ತನ್ನ ಪೋಷಕರಿಗೆ ಒದಗಬಹುದಾದ ಅಪಾಯವನ್ನು ಅರಿತು ವಿಧಿಯಿಲ್ಲದೆ, ಆದರೆ ಷರತ್ತಿನೊಂದಿಗೆ, ಆತನನ್ನು ಮದುವೆಯಾಗುತ್ತಾಳೆ. ಮುಂದೆ ಕೌಶಿಕ ಮಹಾರಾಜ ಮೂರು ತಪ್ಪುಗಳನ್ನು ಮಾಡಿದ ನಂತರ ಅವನನ್ನೂ, ಅರಮನೆಯನ್ನೂ ತ್ಯಜಿಸಿ, ಹುಟ್ಟುಡುಗೆಯಲ್ಲಿಯೇ ತನ್ನ ಕೇಶರಾಶಿಯನ್ನೇ ಸೀರೆಯನ್ನಾಗಿಸಿಕೊಂಡು ಕಲ್ಯಾಣಕ್ಕೆ ಹೊರಟವಳು. ಕಲ್ಯಾಣದಲ್ಲಿ ಬಸವಣ್ಣನ ಆಶ್ರಯದ ಅನುಭವಮಂಟಪದಲ್ಲಿ ತನ್ನ ವಚನಗಳ ಮೂಲಕ ಸಮಾಜವನ್ನು ತಿದ್ದುವ, ಜೊತೆಗೆ, ಆತ್ಮವಿಮರ್ಶೆ ಮಾಡಿಕೊಳ್ಳುವ ಮೂಲಕ ಮಹಾದೇವಿ ಎಲ್ಲರಿಗೂ ಅಕ್ಕಮಹಾದೇವಿಯಾಗಿ ಪ್ರಖ್ಯಾತಿ ಹೊಂದಿದಳು.

ಅಕ್ಕಮಹಾದೇವಿಯ ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಸಮಾಜಕ್ಕೆ ನೀತಿಯನ್ನು ಬೋಧಿಸುವ ಜೊತೆಗೆ ತನ್ನ ಮನಸ್ಸಿನ ಹೊಯ್ದಾಟಗಳನ್ನು ವ್ಯಕ್ತಪಡಿಸುವ ವಚನಗಳನ್ನು ಗುರುತಿಸಬಹುದು.

> ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ
> ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ
> ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ
> ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

ಈ ವಚನದಲ್ಲಿ ಅಕ್ಕಮಹಾದೇವಿಯು ಈ ಭೂಮಿಯಲ್ಲಿ ಜನ್ಮ ತಾಳಿದ ನಂತರ ಕಷ್ಟ–ನಷ್ಟಗಳು, ನೋವು–ಅವಮಾನಗಳನ್ನು ಎದುರಿಸಲೇಬೇಕು, ಅವುಗಳಿಗೆ ಹೆದರಿ ಹಿಮ್ಮೆಟ್ಟುವುದು ಸರಿಯಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾಳೆ.

ಪ್ರಸ್ತುತ ದಿನಗಳಲ್ಲಿ ಒಂದು ಸಣ್ಣ ಮಾತನ್ನು ಬೇರೆಯವರಿಂದ ಕೇಳಲು ಇಷ್ಟಪಡದ ನಮ್ಮ ಯುವಜನಾಂಗವನ್ನು ಉದ್ದೇಶಿಸಿ ಹೇಳಿದಂತಿದೆ ಈ ವಚನ, ಅಲ್ಲವೇ. ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಏನೇ ಅವಮಾನಗಳು ಬಂದರೂ, ಅಥವಾ ಹೊಗಳಿಕೆಗಳು ಬಂದರೂ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗ ಬೇಕೆಂಬ ನೀತಿ ಈ ವಚನದಲ್ಲಿದೆ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಎರಡನ್ನೂ ಸಮಾನವಾಗಿ ಸ್ವೀಕರಿಸಿದರೆ ಬದುಕು ಸುಂದರವಾಗಿರುತ್ತದೆ.

ತಮ್ಮ ಮುಂದಿನ ಭವಿಷ್ಯವನ್ನು ನೆನೆದು ಆತಂಕ ಪಡುವ ಅಥವಾ ಸಣ್ಣಪುಟ್ಟ ನಕಾರಾತ್ಮಕ ಚಿಂತನೆಗಳಿಂದ ಹತಾಶೆಗೆ ಒಳಗಾಗುವ ಜನರಿಗೆ ಧೈರ್ಯವನ್ನು ನೀಡಬಲ್ಲ ವಚನ ಇದಾಗಿದೆ ಎಂದು ಹೇಳಬಹುದು.

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳುದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು

ಒಬ್ಬ ವ್ಯಕ್ತಿಯಾಗಿ ಶಕ್ತಿಯಾಗಿ ರೂಪಿತವಾಗಿ ಅದರಿಂದ ದೊರೆಯಬಹುದಾದ ಕಾಣ್ಕೆಯ ಬದುಕನ್ನು ಹೀಗೂ ಬದುಕಬಹುದು ಎಂಬ ಸಂದೇಶ. ಅಕ್ಕನದು ಮಹಿಳೆಯಾಗಿ ಪುರುಷರ ಸಹಾಯವಿಲ್ಲದೆ ಹೇಗೆ ಬದುಕಬಹುದು ಎಂಬುದಕ್ಕೆ ಅಕ್ಕಮಹಾದೇವಿಯ ಜೀವನವೇ ಒಂದು ಉದಾಹರಣೆಯಂತಿದೆ. ನಿಂದಕರ ನಡುವೆಯೂ ಯಾರ ಸಹಾಯವು ಇಲ್ಲದೆ ತಾನು ಬಾಳಬಲ್ಲೆ ಎಂಬುದನ್ನು ಈ ವಚನ ತಿಳಿಸುವಂತಿದೆ.

ಹಸಿವಾದರೆ ಹಸಿವನ್ನು ನೀಗಿಸಲು ಭಿಕ್ಷಾನ್ನಗಳುಂಟು, ತೃಷೆಯಾದರೆ (ಬಾಯಾರಿಕೆ) ದಾಹವನ್ನು ನೀಗಿಸಲು ಕೆರೆ ಹಳ್ಳ ಬಾವಿಗಳು ಇರುವುವು, ಶಯನಕ್ಕೆ (ಮಲಗಲು) ಪಾಳುಬಿದ್ದ ದೇವಾಲಯಗಳು ಉಂಟು, ನನ್ನ ಆತ್ಮಸಂಗಾತಕ್ಕೆ ಚನ್ನಮಲ್ಲಿಕಾರ್ಜುನನೇ ಉಂಟು. ಹೀಗಿರುವಾಗ ತನಗೆ ಯಾವುದೇ ಭಯವಿಲ್ಲವೆಂದು ಏಕಾಂಗಿಯಾಗಿ ಶಿವನ ಧ್ಯಾನದಲ್ಲಿ ತಾನಿರಬಲ್ಲೆ ಎಂಬುದನ್ನು ಈ ವಚನ ಸೂಚಿಸುವಂತಿದೆ.

ಮಹಿಳೆಯು ಮನಸ್ಸು ಮಾಡಿದರೆ ಎಂಥ ಅಸಾಧ್ಯವಾದ ಕಾರ್ಯವನ್ನೂ ಸಾಧಿಸಬಲ್ಲಳು ಎಂಬುದಕ್ಕೆ ಅಕ್ಕಮಹಾದೇವಿಯ ಈ ವಚನದ ಉದಾಹರಣೆ. ಯಾವುದಕ್ಕೂ ಭಯಪಡದೆ

ಬದುಕು ಬಂದಂತೆ ಸ್ವೀಕರಿಸುವ ಗುಣ ಛಲ ಇದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಈ ವಚನವು ಇಂದಿನ ಯುವಜನಾಂಗಕ್ಕೆ ಹೇಳಿದಂತಿದೆ.

ಬಿಟ್ಟೆನೆಂದಡೆ ಬಿಡದೀ ಮಾಯೆ
ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ
ಸವಣಂಗೆ ಸವಣಿಯಾಯಿತ್ತು ಮಾಯೆ
ಯತಿಗೆ ಪರಾಕಿಯಾಯಿತ್ತು ಮಾಯೆ
ನಿನ್ನ ಮಾಯೆಗೆ ನಾನಂಜುವಳಲ್ಲ
ಚೆನ್ನಮಲ್ಲಿಕಾರ್ಜುನದೇವಾ ನಿಮ್ಮಾಣೆ

ಇದ್ದಂತೆ ಭಾಸವಾಗಿ ಇಲ್ಲದೆ ಇರುವುದನ್ನು ಸಾಮಾನ್ಯವಾಗಿ 'ಮಾಯೆ' ಎಂದು ಕರೆಯಬಹುದು. ಇದೊಂದು ರೀತಿಯ ಬಿಸಿಲುಗುದುರೆ ಇದ್ದ ಹಾಗೆ. ಈ ವಚನದಲ್ಲೂ ಕೂಡ ಅಕ್ಕಮಹಾದೇವಿ 'ಮಾಯೆ' ಎಂಬುದು ಎಲ್ಲರನ್ನೂ ಹೇಗೆ ಕಾಡಬಲ್ಲದು ಎಂಬುದನ್ನು ತಿಳಿಸಿದ್ದಾರೆ. ಆದರೆ ತಾನು ಈ ಮಾಯೆಯ ಬಲೆಗೆ ಸಿಲುಕುವು ದಿಲ್ಲ, ಈ ಮಾಯೆಗೆ ಅಂಜುವವಳಲ್ಲ ಎಂಬ ದೃಢ ನಿರ್ಧಾರವನ್ನು ವ್ಯಕ್ತಪಡಿಸಿದ್ದಾಳೆ.

ನಿರ್ದಿಷ್ಟವಾದ ಗುರಿಯನ್ನು ಹೊಂದಿರುವವರಿಗೆ ಆ ನಿಟ್ಟಿನಲ್ಲಿ ಸಾಗುವಾಗ ಬರುವ ಅಡೆತಡೆಗಳು ಯಾವುದೇ ರೀತಿಯ ಸಮಸ್ಯೆಯನ್ನು ಉಂಟುಮಾಡಲಾರದು, ಹಾಗೆಯೇ ದೃಢವಾದ ಚಿತ್ತವನ್ನು ಹೊಂದಿದವರಿಗೆ ಈ ಮಾಯೆಯೆಂಬ ಅಗೋಚರ ಶಕ್ತಿ ಯಾವುದೇ ತೊಂದರೆಯನ್ನು ನೀಡಲಾರದು ಎಂಬುದನ್ನು ಅಕ್ಕಮಹಾದೇವಿಯ ಈ ವಚನದ ಮೂಲಕ ತಿಳಿಯಬಹುದು. ನಮ್ಮ ಮನಸ್ಸು ದೃಢವಾಗಿದ್ದರೆ ಮಾಯೆ ಯಾವುದೇ ರೂಪದಲ್ಲೂ ಬಂದರೂ ಅದರ ಬಲೆಗೆ ಬೀಳುವ ಸಂಭವ ಬರಲಾರದು ಎಂಬುದನ್ನು ಈ ವಚನ ಪರೋಕ್ಷವಾಗಿ ತಿಳಿಸಿದಂತಿದೆ. ಈ ರಚನೆಯು 12ನೇ ಶತಮಾನದ್ದಾದರೂ ಅದರಲ್ಲಿನ ಸತ್ವ ಇಂದಿಗೂ ಪ್ರಸ್ತುತ.

ಸಂಗದಿಂದಲ್ಲದೆ ಅಗ್ನಿ ಹುಟ್ಟದು
ಸಂಗದಿಂದಲ್ಲದೆ ಬೀಜ ಮೊಳೆದೋರದು
ಸಂಗದಿಂದಲ್ಲದೆ ಹೂವಾಗದು
ಸಂಗದಿಂದಲ್ಲದೆ ಸರ್ವಸುಖದೋರದು
ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಮಹಾನುಭಾವಿಗಳ
ಸಂಗದಿಂದಲಾನು ಪರಮಸುಖಿಯಾದೆನಯ್ಯಾ

ಬದುಕಿನಲ್ಲಿ ಪರಸ್ಪರ ಸಂಗವಿಲ್ಲದೇ ಯಾವುದೇ ಕೆಲಸ ನಡೆಯಲಾರದು ಎಂಬುದನ್ನು ಈ ವಚನ ತಿಳಿಸುತ್ತದೆ. ಅಗ್ನಿ ಹುಟ್ಟಬೇಕಾದರೆ ಎರಡು ಕಲ್ಲುಗಳ ಸಂಗ ಹೇಗೆ ಬೇಕೋ ಹಾಗೆಯೇ ಬೀಜವು ಮೊಳಕೆಯೊಡೆದು ಗಿಡವಾಗಿ ಮರವಾಗಿ ಬೆಳೆಯಲು ಕೂಡ ಸಂಗವು ಅಗತ್ಯವಾಗಿದೆ. ಏಕೆಂದರೆ ಕೇವಲ ಬೀಜದಿಂದ ಮರವಾಗಲು ಸಾಧ್ಯವಿಲ್ಲ. ಆ ಬೀಜಕ್ಕೆ

ಮಣ್ಣಿನ ಸಂಗ ಬೇಕು; ಅಲ್ಲಿ ಬೀಜ ಮೊಳಕೆಯೊಡೆದು, ಗಿಡವಾಗಿ ಮರವಾಗಿ ಬೆಳೆದು, ದಣಿದು ಬಂದವರಿಗೆ ನೆರಳನ್ನು ನೀಡುವ ಹಸಿದು ಬಂದವರಿಗೆ ಹಣ್ಣು, ಕಾಯನ್ನು ನೀಡುವ ಕೆಲಸ ಮಾಡಬಲ್ಲದು. ಹಾಗೆಯೇ ನಿಮ್ಮ ಶರಣರ ಸಂಘದಿಂದ ನಾನು ಪರಮಸುಖಿಗಿರುವೆ ಎಂದು ಅಕ್ಕಮಹಾದೇವಿ ಈ ವಚನದಲ್ಲಿ ಹೇಳಿದ್ದಾರೆ.

ಇದನ್ನು ಇಂದಿನ ಕಾಲಕ್ಕೂ ಅನ್ವಯಿಸಿ ನೋಡುವುದಾದರೆ, ಒಬ್ಬ ವ್ಯಕ್ತಿಯು ಎಂಥ ಸಹವಾಸವನ್ನು ಮಾಡಬೇಕೆಂಬುದನ್ನು ಈ ವಚನ ತಿಳಿಸುತ್ತದೆ ಸಜ್ಜನರೊಂದಿಗೆ ಬೆರೆತರೆ ಸಜ್ಜನರಾಗಿ ನಮ್ಮ ವ್ಯಕ್ತಿತ್ವವನ್ನು ಬದಲಿಸಿಕೊಳ್ಳಬಹುದು. ಅದೇ ದುರ್ಜನರ ಸಹವಾಸವನ್ನು ಮಾಡಿದರೆ ನಮ್ಮ ವ್ಯಕ್ತಿತ್ವವು ಕೊಳೆತು ನಾರುವ ನಾತದ ವಾಸನೆಯ ಆಗರವಾಗುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ಹೇಳುವುದಾದರೆ, ಒಂದು ಹಂಡೆ ಹಾಲಿಗೆ ಸ್ವಲ್ಪ ನಿಂಬೆಹಣ್ಣಿನ ಹುಳಿಯನ್ನು ಹಿಂಡಿದರೆ ಇಡೀ ಹಂಡೆಯ ಹಾಲು ಒಡೆದು ಹಾಳಾಗುತ್ತದೆ. ಅದೇ ರೀತಿ ಒಂದು ಹಂಡೆಯ ವಿಷಕ್ಕೆ ಒಂದು ಲೋಟ ಹಾಲನ್ನು ಸೇರಿಸಿದರೆ ಆ ಹಾಲು ಕೂಡ ವಿಷವಾಗುತ್ತದೆಯೇ ಹೊರತಾಗಿ ಹಾಲಾಗಲಾರದು. ಅಂದರೆ, ನಾವು ಮಾಡುವ ಸಹವಾಸ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ. ನಾವು ಮಾಡುವ ಸಂಗ ಅಥವಾ ಸಹವಾಸ ಉತ್ತಮವಾಗಿರುವಂತೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ ಎಂಬುದನ್ನು ಈ ವಚನ ತಿಳಿಸುತ್ತದೆ. ದುರ್ಗಸಿಂಹನ ಪಂಚತಂತ್ರದಲ್ಲಿ ಬರುವ ಎರಡು ಗಿಣಿಗಳ ಕಥೆಯೂ ಕೂಡ ವ್ಯಕ್ತಿತ್ವನಿರ್ಮಾಣದಲ್ಲಿ ಪರಿಸರದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ, ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?

ಈ ವಚನದಲ್ಲಿ ಅಕ್ಕಮಹಾದೇವಿಗೆ ಶಿವನ ಮೇಲಿರುವ ಭಕ್ತಿ, ಅದರ ಭಾವತೀವ್ರತೆ ವ್ಯಕ್ತವಾಗುತ್ತಿದೆ. ಲೋಕದ ಚಟುವಟಿಕೆಗಳಿಗೆ ಸೂರ್ಯ ಹೇಗೆ ಕಾರಣನಾಗುತ್ತಾನೋ ಹಾಗೆಯೇ ಮನಸ್ಸಿನಲ್ಲಿ ಉದ್ಭವವಾಗುವ ಚಟುವಟಿಕೆಗಳಿಗೆ ಮನಸ್ಸೇ ಕಾರಣ. ನನ್ನಲ್ಲಿಯೂ ಒಂದು ಮನಸ್ಸು ಇರುವುದು ಆದರೆ ಆ ಮನಸ್ಸು ನಿಮ್ಮಲ್ಲಿ ಸೇರಿದ ಬಳಿಕ ನನಗೆ ಈ ಕ್ಷಣಿಕವಾದ ಲೌಕಿಕ ಬಂಧನದ ಭವವುಂಟೆ ಎಂದು ಪ್ರಶ್ನಿಸುವ ಮೂಲಕ ತನ್ನ ಮನಸ್ಸು ಶಿವನಲ್ಲಿ ಬೆರೆತು ಹೋಗಿರುವುದನ್ನು ಅಕ್ಕಮಹಾದೇವಿ ತಿಳಿಸಿದ್ದಾಳೆ.

ನಿರ್ದಿಷ್ಟವಾದ ಗುರಿಯನ್ನು ಹೊಂದಿದವರಿಗೆ ಆ ದಾರಿಯಲ್ಲಿ ಸಾಗುವಾಗ ಎದುರಾಗುವ ಅಡೆತಡೆಗಳು ಸಮಸ್ಯೆಯನ್ನು ಉಂಟುಮಾಡಲಾರದು. ಗುರಿಯನ್ನು ತಲುಪುವುದೊಂದೇ ಅವರ ಉದ್ದೇಶವಾಗಿರುತ್ತದೆ. ಚಂಚಲತೆಯನ್ನು ಉಂಟುಮಾಡುವ ಮನಸನ್ನು

ನಿಯಂತ್ರಿಸುವ ಮೂಲಕ ನಮ್ಮ ಪ್ರಯಾಣವನ್ನು ತೋರಿಸುವಂತಹ ಕೆಲಸವನ್ನು ಈ ವಚನ ಮಾಡುತ್ತದೆ. ಅಕ್ಕಮಹಾದೇವಿಯ ಮನಸ್ಸು ಕ್ಷಣಿಕ ಸುಖಗಳಿಗೆ ಮಾರುಹೋಗುವಂಥದ್ದಲ್ಲ, ಅದು ಶಾಶ್ವತವಾದ ಸುಖಕ್ಕೆ ಹಂಬಲಿಸುವಂಥದು. ಅದನ್ನೇ ಅಕ್ಕಮಹಾದೇವಿ ನನ್ನ ಮನ ನಿಮ್ಮಲ್ಲಿ ಸಿಲುಕಿದ ಬಳಿಕ ನನಗೆ ಭವವಿಲ್ಲ ಎಂದು ದೃಢವಾಗಿ ತಿಳಿಸಿದ್ದಾಳೆ.

ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ

ಅಕ್ಕಮಹಾದೇವಿ ಈ ವಚನದಲ್ಲಿ ತನ್ನ ಪತಿ ಆ ಶಿವನೇ ಹೊರತು ಬೇರೆ ಯಾರೂ ಅಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾಳೆ. ನನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಉಳಿದವರಲ್ಲ ಎನ್ನುವ ಮೂಲಕ ಅಲೌಕಿಕ ಪತಿಯನ್ನೇ ತನ್ನ ನಿಜವಾದ ಪತಿಯೆಂಬುದನ್ನು ದೃಢಪಡಿಸಿದ್ದಾಳೆ. ಶಿವನನ್ನು ಹೊರತುಪಡಿಸಿ ಉಳಿದ ಯಾರೂ ಕೂಡ ತನ್ನ ಗಂಡನಾಗಲು ಸಾಧ್ಯವಾಗಲಾರದೆಂಬ ಆಕೆಯ ದೃಢ ನಿಲುವು ಯಾವುದೇ ಸಂದರ್ಭ ದಲ್ಲಿಯೂ ಬದಲಾಗದು ಎಂಬುದನ್ನು ಈ ವಚನ ಖಚಿತಪಡಿಸುತ್ತದೆ. ಅಕ್ಕಮಹಾದೇವಿಯ ಜೀವನದ ಪ್ರಮುಖ ತತ್ವವನ್ನು ತಿಳಿಸುವ ವಚನ ಇದಾಗಿದೆ ಅವಳಿಗೆ ಶಿವನ ಹೊರತಾಗಿ ಮತ್ತೊಂದು ಜೀವನವಿಲ್ಲ, ಶಿವನೇ ಸರ್ವಸ್ವ ಎಂಬುದನ್ನು ಈ ವಚನ ಮತ್ತೆ ಮತ್ತೆ ಮನಗಾಣಿಸುತ್ತದೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಕೊಳನತಡಿಯೊಳಾಡುವ ಹಂಸೆಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೆ, ನೀವು ಕಾಣಿರೆ.
ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು ಹೇಳಿರೆ

ಅಕ್ಕಮಹಾದೇವಿಯ ಈ ವಚನ ಶಿವನ ಮೇಲಿರುವ ಅವಳ ಅಗಾಧವಾದ ಪ್ರೇಮವನ್ನು ಪ್ರಕಟಿಸುವಂಥದ್ದಾಗಿದೆ. ಅವಳು ಸ್ವೀಕರಿಸಿರುವ ಪತಿ ಲೌಕಿಕದಲ್ಲಿ ಸಿಗುವವನಲ್ಲ, ಅಲೌಕಿಕದ ಪತಿಯನ್ನೇ ಹಂಬಲಿಸಿ ಹುಡುಕುವ ಅವಳ ಉತ್ಕಟ ಪ್ರೇಮ ಇಲ್ಲಿ ಅಭಿವ್ಯಕ್ತವಾಗಿದೆ.

ಗಿಳಿಗಳನ್ನು, ಕೋಗಿಲೆಗಳನ್ನು ತುಂಬಿಗಳನ್ನು, ಹಂಸಗಳನ್ನು, ನವಿಲುಗಳನ್ನು ಕುರಿತು ಮತಾಡಿಸುವ ಅಕ್ಕಮಹಾದೇವಿ ತನ್ನ ಒಡೆಯನಾದ ಚನ್ನಮಲ್ಲಿಕಾರ್ಜುನನ್ನು ಕಂಡರೆ

ತಿಳಿಸಿ ಎನ್ನುವ ಮೂಲಕ ಆ ಶಿವನನ್ನು ಸದಾ ಕಾಲ ಹುಡುಕುವ ಅವಳ ಪ್ರಯತ್ನವನ್ನು, ಜೊತೆಗೆ ಅವಳ ಹಂಬಲದ ತೀವ್ರತೆಯನ್ನು ವ್ಯಕ್ತಪಡಿಸಿದ್ದಾಳೆ.

ಹೀಗೆ ಅಕ್ಕಮಹಾದೇವಿ ತನ್ನ ಬದುಕಿನದ್ದಕ್ಕೂ ಭಕ್ತಿಯೊಂದಿಗೆ ತನ್ನ ವ್ಯಕ್ತಿತ್ವದೊಂದಿಗೆ ಸದಾ ಕುತೂಹಲವನ್ನು ಮೂಡಿಸುವಂತಹ ಆದರ್ಶಪ್ರಾಯವಾಗಿ ಕಂಡುಬರುತ್ತಾಳೆ.

ಅಕ್ಕಮಹಾದೇವಿಯನ್ನು ಕುರಿತು ಮೊದಲು ಬರೆದವನು ಚೈತನ್ಯವಾಗಿ ಮಹಾದೇವಿಯಕ್ಕನ ರಗಳೆ, ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಕವಿ ರಾಚನು ಬರೆದ ಮಹಾದೇವಿಯಕ್ಕನ ಸಾಂಗತ್ಯ, ಚಾಮರಸನ ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳಲ್ಲಿ ಚಿತ್ರಿತವಾದ ಅಕ್ಕಮಹಾದೇವಿ, ಬಾಲ ಪಾಪಾಂಬಳ ಅಕ್ಕಮಹಾದೇವಿ ಚರಿತ್ರೆ ಇವುಗಳಲ್ಲಿ ಅಕ್ಕಮಹಾದೇವಿಯ ಜೀವನಚಿತ್ರಣವನ್ನು ವಿವರಿಸಲಾಗಿದೆ. ಇವುಗಳಷ್ಟೇ ಅಲ್ಲದೆ ಆಧುನಿಕ ಕಾಲದಲ್ಲಿ ಡಾ. ಎಚ್.ತಿಪ್ಪೇರುದ್ರಸ್ವಾಮಿಯವರು ಬರೆದಿರುವ 'ಕದಳಿಯ ಕರ್ಪೂರ' ಕಾದಂಬರಿ, ಇತ್ತೀಚೆಗೆ ಡಾ. ಎಚ್.ಎಸ್. ಅನುಪಮಾ ಅವರು ಬರೆದಿರುವ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿಗಳು ಮತ್ತೆ ಮತ್ತೆ ಅಕ್ಕಮಹಾದೇವಿಯನ್ನು ನೆನಪಿಸುವಂತೆ ಮಾಡಬಲ್ಲ ಬರಹಗಳು.

ಅಕ್ಕಮಹಾದೇವಿ ಮನಸು ಮಾಡಿದ್ದರೆ ಸಾಮ್ರಾಜ್ಯಸುಖವನ್ನು ಅನುಭವಿಸುತ್ತ ನೆಮ್ಮದಿಯಾಗಿ ಹಾಗೂ ಭೌತಿಕ ವಸ್ತುಗಳಾದ ಹಣ, ಐಶ್ವರ್ಯ, ಆಸ್ತಿಗಳಿಗೆ ಅಂಟಿಕೊಂಡು ಸಂತೋಷವಾಗಿ ಬದುಕಬಹುದಿತ್ತು. ಆದರೆ ಅವಳ ವ್ಯಕ್ತಿತ್ವ ಕ್ಷಣಿಕವಾದ ಲೌಕಿಕ ಅಪೇಕ್ಷೆಗಳನ್ನು ಹೊಂದಿಲ್ಲ. ಬದಲಿಗೆ ಅಲೌಕಿಕವಾದ ಶಾಶ್ವತ ಸಂತೋಷವನ್ನು ಬಯಸಿರುರುವಂಥದ್ದು. ಅದಕ್ಕಾಗಿಯೇ ಅವಳು ಎಲ್ಲವನ್ನೂ ತ್ಯಜಿಸಿ ಅಕ್ಕನಾಗಿ, ಅವತ್ತಿಗೆ ಮಾತ್ರವಲ್ಲದೆ ಇವತ್ತಿಗೂ, ನಾಡಿನ ಜನರ ಹೃದಯಾಂತರಾಳದಲ್ಲಿ ವಿರಾಜಮಾನಳಾಗಿದ್ದಾಳೆ. ಅಂತೆಯೇ ವಿರಾಗಿಣಿಯಾಗಿ ಬದುಕಿದರೂ ತನ್ನಂತಹ ಹಲವಾರು ಜನ ಮಹಿಳೆಯರು ಸಾಹಿತ್ಯರಚನೆ ಮಾಡಲು ಸ್ಫೂರ್ತಿ ನೀಡಿ ದಾರಿದೀಪವಾದವಳು ಎಂದರೆ ಬಹುಶಃ ತಪ್ಪಾಗಲಾರದು. ಆಕೆಯ ಕಂಡಿರುವ ಮುಖಗಳು ಒಂದಷ್ಟು, ಕಾಣಬೇಕಾಗಿರುವ ಮುಖಗಳು ಲೆಕ್ಕವಿಲ್ಲದಷ್ಟು. ಹೀಗೆ ಅಕ್ಕಮಹಾದೇವಿಯ ವಿಚಾರಗಳನ್ನು ಮತ್ತಷ್ಟು ಕಾಣುವ ಭಾಗ್ಯಕ್ಕೆ ಮನಸ್ಸು ಹಾತೊರೆಯುತ್ತದೆ.

ಬಯಸದೇ ಬಂದ ಭಾಗ್ಯವನ್ನು ಬಿಗಿದಪ್ಪಿಕೊಳ್ಳದೆ ಬಂದ ಕಷ್ಟಗಳನ್ನು ಎದುರಿಸಿ ನಿಂತು, ನಿಂದೆಯ ಮಾತುಗಳಿಗೆ ಸೊಪ್ಪು ಹಾಕದೆ, ಅಂದುಕೊಂಡಂತೆ ಬಾಳಿ ಬದುಕಿ ಅಸಂಖ್ಯಾತ ಮಹಿಳೆಯರ ಪಾಲಿನ ನಂದಾದೀಪವಾಗಿ ಬೆಳಕು ನೀಡಿ ಎಂದೂ ಮರೆಯಲಾಗದ ವೀರ ಮಹಿಳೆಯಾಗಿ, ಸೀಮಾತೀತ ವ್ಯಕ್ತಿತ್ವದ ಅಕ್ಕನಾಗಿ, ಸಾಹಿತ್ಯ ಪ್ರಪಂಚದ ಅನರ್ಘ್ಯ ರತ್ನವಾಗಿ, ಪ್ರಜ್ವಲಿಸುವ ಜ್ಯೋತಿಯಾದವಳು ಅಕ್ಕಮಹಾದೇವಿ.

□

ಗ್ರಂಥ ಪರಾಮರ್ಶೆ

'ಅಂತರಂಗದ ಅನಾವರಣ' ಕೃತಿ

ನಗರ್ಲೆ ಶಿವಕುಮಾರ

ಶತಶತಮಾನಗಳು ಕಳೆದಂತೆ ಗಂಡು ಮತ್ತು ಹೆಣ್ಣು ಎಂಬ ಭೇದವಳಿದು ಇಬ್ಬರೂ ಒಂದೇ ಎನ್ನುವ ಸ್ಥಿತಿಗೆ ಬಂದು ನಿಂತಿದೆ. ಹಿಂದಿನ ರಾಜರ ಕಾಲದಲ್ಲಿದ್ದ ಸ್ಥಿತಿಗತಿಗಳು ಬದಲಾಗಿ, ದೇಶ ಸ್ವಾತಂತ್ರ್ಯ ಕಂಡ ನಂತರದ ದಿನಗಳಲ್ಲಿ ಮಹಿಳೆಯರಲ್ಲಿ ಶೈಕ್ಷಣಿಕ ಆರ್ಥಿಕ ಸಾಮಾಜಿಕವಾಗಿ ಸಾಕಷ್ಟು ಸುಧಾರಣೆಯಾಗಿದೆ. ಮಹಿಳೆಯನ್ನು ಭೂಮಿ, ನದಿ, ದೇವತೆಗಳು ಸೇರಿದಂತೆ ವಿವಿಧ ಸ್ಥಳಗಳಿಗೂ ಹೆಸರಿಸಿರುವುದರಿಂದ ಭಾರತದಲ್ಲಿ ಹೆಣ್ಣಿಗೆ ಒಂದು ವಿಶಿಷ್ಟ ಸ್ಥಾನವಿದೆ. ಭಾರತದ ಆಚಾರ–ವಿಚಾರ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಮಕ್ಕಳಿಗೆ ಸಂಸ್ಕಾರವನ್ನು ಚಿಕ್ಕಂದಿನಿಂದಲೇ ಕೊಡುತ್ತಿರಬೇಕು. ಸಂಸ್ಕಾರವುಳ್ಳ ಹೆಣ್ಣು ತನ್ನ ಗಂಡನ ಮನೆಗೆ ಹೋದಾಗ ಹೊಂದಾಣಿಕೆಯಿಂದ ಬಾಳಲು ಪ್ರಯತ್ನಿಸುತ್ತಾಳೆ. ಕುಟುಂಬವನ್ನು ಸುಸ್ಥಿತಿಗೆ ತರಲು ಪ್ರಯತ್ನಿಸುತ್ತಾಳೆ. ಪುರುಷನ ಜವಾಬ್ದಾರಿಯಷ್ಟೇ ಹೆಣ್ಣಿಗೂ ಜವಾಬ್ದಾರಿ ಇರುತ್ತದೆ. ಒಬ್ಬೊಬ್ಬರ ಜೀವನಶೈಲಿ ಒಂದೊಂದು ರೀತಿ ಇರುತ್ತದೆ. ಕೆಲವರು ವಿಶಿಷ್ಟವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಾರೆ. ಇನ್ನು ಕೆಲವರು ಎಲೆ ಮರೆಯ ಕಾಯಿಯಂತೆ ಜೀವನ ಸಾಗಿಸುತ್ತಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಚಿಕ್ಕಬಾಗಿಲು ಗ್ರಾಮದ ಡಾ. ಸಿ.ಎನ್. ಮೃತ್ಯುಂಜಯಪ್ಪನವರು ವೈದ್ಯರಾಗಿ ಹೆಚ್.ಡಿ. ಕೋಟೆ ಸರಗೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ವೈದ್ಯರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಸ್ಥಳೀಯರ ಕುಂದುಕೊರತೆಗಳನ್ನು ನೀಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. ಇವರ ಪತ್ನಿ ಶ್ರೀಮತಿ ಸುಧಾರವರು ಸಾಮಾಜಿಕ ಕಾರ್ಯಗಳಿಗೆ ನೆರವಾಗುತ್ತಿದ್ದರು. ನಂತರದ ದಿನಗಳಲ್ಲಿ ಹಲವಾರು ಸಂಘಸಂಸ್ಥೆಗಳಲ್ಲಿ ತೊಡಗಿಸಿಕೊಂಡು ಸಾಮಾಜಿಕ, ಶೈಕ್ಷಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಾ. ಮೃತ್ಯುಂಜಯಪ್ಪ ನವರು ಹಲವು ಕೃತಿಗಳನ್ನು ಪ್ರಕಟಿಸಿದ್ದರು. ಅದರಂತೆ ಶ್ರೀಮತಿ ಸುಧಾರವರು ಕೂಡ "ಅಂತರಂಗದ ಅನಾವರಣ" (ಜೀವನದ ಹೆಜ್ಜೆಗುರುತುಗಳು) ಕೃತಿಯನ್ನು ವನಸಿರಿ ಪ್ರಕಾಶನದ ಮೂಲಕ ಹೊರತಂದಿದ್ದಾರೆ.

ಮೂಲತಃ ಗೃಹಿಣಿಯಾದರೂ ಶ್ರೀಮತಿ ಸುಧಾರವರು ಸಾಹಿತ್ಯಾಸಕ್ತಿಯಿಂದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಕೆಲವು ಕೃತಿಗಳಿಗೆ ಲಿಪಿಕಾರರಾಗಿರುವ

ಮೈಸೂರಿನ ಶ್ರೀಮತಿ ಬಿ.ಆರ್. ನಾಗರತ್ನ ಚನ್ನಮಲ್ಲ ಶೆಟ್ಟಿಯವರು ಈ ಕೃತಿಗೆ ಲಿಪಿಕಾರರಾಗಿ ಉತ್ತಮ ನೆರವು ನೀಡಿದ್ದಾರೆ. ಅವರೇ ಹೇಳುವಂತೆ ಕೆಲವು ಸಾರಿ ಫೋನ್ ಸಂಭಾಷಣೆಯ ಮೂಲಕ, ಕೆಲವು ಸಾರಿ ಭೇಟಿಯಾಗಿ ಚರ್ಚಿಸುತ್ತಾ ಶ್ರೀಮತಿ ಸುಧಾರವರ ಅಂತರಂಗ ಅನುಭವದ, ಅನಿಸಿಕೆಗಳನ್ನು ಸಮಯೋಚಿತವಾಗಿ ಹಂಚಿಕೊಂಡ ಫಲವಾಗಿ ಈ ಕೃತಿ ಅನಾವರಣಗೊಂಡಿದೆ. ತುಂಬುಕುಟುಂಬದ ನಗರವಾಸದಲ್ಲಿ ಬೆಳೆದು, ವಿದ್ಯಾಭ್ಯಾಸ ಮಾಡಿ, ಡಾ. ಮೃತ್ಯುಂಜಯಪ್ಪನವರ ಕೈ ಹಿಡಿದು ಅವರ ಸಹಧರ್ಮಿಣಿಯಾಗಿ ಸಾಗಿದರು. ಡಾಕ್ಟರ್ ಅವರೊಂದಿಗಿನ 44 ವರ್ಷಗಳ ದಾಂಪತ್ಯಜೀವನದ ಸವಿಯುಂಡು, ಕಷ್ಟಸುಖಗಳನ್ನು ಹಂಚಿಕೊಂಡು ಸಂಸಾರವನ್ನು ನಿಭಾಯಿಸಿದರು. ಮನೆ, ಮಕ್ಕಳು, ಸಮಾಜಸೇವೆ ಎಲ್ಲವನ್ನೂ ಯಶಸ್ವಿಯಾಗಿ ನಿರ್ವಹಿಸಿ, ತಮ್ಮ ಕಾರ್ಯಸಾಧನೆಯ ಮೂಲಕವೇ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಸಾಮಾನ್ಯ ಮಹಿಳೆಯ ಅಸಾಮಾನ್ಯ ಸಾಧನೆಯ ಯಶೋಗಾಥೆಯನ್ನು ಕೃತಿಯಲ್ಲಿ ಅನಾವರಣಗೊಂಡಿದೆ. ತಮ್ಮ ಅಂತರಂಗದ ನೆನಪಿನಂಗಳದಿಂದ ಪ್ರಾರಂಭ ಮಾಡಿದ್ದರಿಂದ ಇಲ್ಲಿನ ಬರವಣಿಗೆ ಅಧ್ಯಾಯಗಳ ಗೊಡವೆಗೆ ಹೋಗದೆ ಶಾಂತವಾಗಿ ಹರಿಯುತ್ತಿರುವ ನದಿಯಂತೆ ಅನಾವರಣಗೊಂಡಿದೆ ಎಂದು ಲಿಪಿಕಾರರು ತಿಳಿಸಿದ್ದಾರೆ.

ಕೃತಿಗೆ ಮುನ್ನುಡಿಯನ್ನು ಜೆಎಸ್ಎಸ್ ಮಹಾವಿದ್ಯಾಪೀಠ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಬರೆದಿರುತ್ತಾರೆ. ಆತ್ಮಕಥಾನಕದ ಕಷ್ಟದ ಕೆಲಸವನ್ನು ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ತೀರಾ ಸಲೀಸು ಎನ್ನುವಂತೆಯೇ ನಿರ್ವಹಿಸಿದ್ದಾರೆ. ಅವರ ಜೀವನದ ಹೆಜ್ಜೆಗುರುತುಗಳನ್ನು "ಅಂತರಂಗದ ಅನಾವರಣ" ಎಂಬ ಶೀರ್ಷಿಕೆಯಲ್ಲಿ ತುಂಬ ಸೊಗಸಾಗಿ ದಾಖಲಿಸಿದ್ದಾರೆ. ಇದು ಅವರ ಸರಳ ಸುಂದರ ಆತ್ಮಕಥಾನಕ. ಆದರೆ ಈ ಕೃತಿ ಆತ್ಮಕಥನಕ್ಕಷ್ಟೇ ಸೀಮಿತವಾಗಿಲ್ಲ, ಐದು ತಲೆಮಾರುಗಳ \ಕೌಟುಂಬಿಕ ಚಿತ್ರಣ ಇಲ್ಲಿದೆ. ತವರು, ಗಂಡನ ಮನೆ, ತಾವೇ ರೂಪಿಸಿದ ಸುಂದರ ಸೌಧ, ಪ್ರೀತಿಯ ಪರಿಸರ ಮತ್ತು ಸಮಾಜ ಎಲ್ಲವನ್ನು ಆವರಿಸಿಕೊಳ್ಳುತ್ತಾ ಉಳಿದವರಿಗೂ ಮಾದರಿಯಾಗುವ ಮಹಿಳೆಯೊಬ್ಬರ ಜಗತ್ತಿನ ಅನಾವರಣ ಈ ಕೃತಿಯಲ್ಲಿ ಒಡಮೂಡಿದೆ ಎಂದು ತಿಳಿಸಿದ್ದಾರೆ.

ಕೃತಿಗೆ ಶುಭ ಸಂದೇಶವನ್ನು ದಯಪಾಲಿಸಿರುವ ಸುತ್ತೂರು ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು "ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರ ಬಹುಮುಖ ಸಾಧನೆಗಳು ಅನುಕರಣೀಯವಾಗಿವೆ. ಪಾದರಸದಂತಹ ಕ್ರಿಯಾಶೀಲ ವ್ಯಕ್ತಿತ್ವ. ಪತಿಯೊಡನೆ ಆಸ್ಪತ್ರೆಯ ಕೆಲಸವನ್ನು ಕೆಲಕಾಲ ನಿರ್ವಹಿಸಿದರು. ಅವರ ಮನೆಯಲ್ಲಿಯೇ ಜೆಎಸ್ಎಸ್ ಹೆಣ್ಣು ಮಕ್ಕಳ ಶಾಲೆಯನ್ನು ಪ್ರಾರಂಭಿಸಿದರು. ಹಾಗೆಯೇ ವೃತ್ತಿಶಿಕ್ಷಣವನ್ನು ಕೊಡಿಸಿದರು.

ಸರಗೂರಿನಲ್ಲಿ ಡಾ. ಮೃತ್ಯುಂಜಯಪ್ಪ ಸಹೃದಯ ಬಳಗವನ್ನು ಸ್ಥಾಪಿಸಿ ಅದರ ನಿರ್ದೇಶಕರಾಗಿದ್ದಾರೆ. ಸ್ಥಳೀಯ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾಗಿದ್ದಾರೆ. ಸ್ನೇಹಶ್ರೀ ಸಮಾಜ ಟ್ರಸ್ಟ್, ಬೆಂಗಳೂರಿನ ಜನಶಿಕ್ಷಣ ಸಂಸ್ಥಾನ, ಸತ್ಯ ಸಾಯಿಬಾಬಾ ಶಾಲೆ, ಜೆಎಸ್ಎಸ್ ಆಸ್ಪತ್ರೆ, ಹಿರಿಯರ ಮನೆ, ಆಯುರ್ವೇದ ಕಾಲೇಜು, ವೀರಶೈವ – ಲಿಂಗಾಯತ ಮಹಿಳಾ ಘಟಕ, ಕದಳಿ ಮಹಿಳಾ ವೇದಿಕೆ ಇನ್ನೂ ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದತ್ತಿ ಸ್ಥಾಪನೆ, ಕೋವಿಡ್ ಸಂದರ್ಭದಲ್ಲಿ ನೆರವು – ಹೀಗೆ ಅವರದು ದೀರ್ಘವಾದ ಸೇವಾಗಾಥೆ. ತೋಟಗಾರಿಕೆ, ಓದು, ಸಂಗೀತ, ಪ್ರವಾಸ ಅವರ ಇತರ ಆಸಕ್ತಿಗಳು. ಶ್ರೀರಾಂಪುರದಲ್ಲಿರುವ ಅವರ ಮನೆಯ ವನಸಿರಿ ಕೈತೋಟಕ್ಕೆ 'ಪ್ಲ್ಯಾಂಟ್ ಜಿನೋಮ್ ಸೇವಿಯರ್ ರಿವಾರ್ಡ್' ಲಭಿಸಿರುವುದು ಉಲ್ಲೇಖಾರ್ಹ" ಎಂದು ಹೇಳಿ ಆಶೀರ್ವದಿಸಿದ್ದಾರೆ.

ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ತಮ್ಮ ಬಿನ್ನಹದಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ: 44 ವರ್ಷಗಳ ದಾಂಪತ್ಯ ಜೀವನ ನಡೆಸಿದ ನಂತರ ನನ್ನ ಬಾಳ ಸಂಗಾತಿ ಮತ್ತು ಮಾರ್ಗದರ್ಶಿಯಾದ ಮೃತ್ಯುಂಜಯಪ್ಪನವರು ಈ ಲೋಕದಿಂದ ಸರಿದುಹೋದರು. ಅವರಿಲ್ಲದ ಮನೆಯಲ್ಲಿ ಒಂಟಿತನ ಕಾಡದಿರಲೆಂದು ನನ್ನ ಪ್ರೀತಿಯ ಮೂರೂ ಮಕ್ಕಳ ಇಚ್ಛೆಯಂತೆ ಅವರ ಕುಟುಂಬಗಳೊಂದಿಗೆ ಒಡನಾಡುತ್ತಾ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ಆದರೂ ಸರಗೂರಿನಲ್ಲಿ ಮತ್ತು ಮೈಸೂರಿನಲ್ಲಿ ನಾನು ಸ್ಥಾಪಿಸಿದ, ಒಡನಾಟವಿಟ್ಟುಕೊಂಡಿದ್ದ ಹಲವಾರು ಸೇವಾಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡಿದ್ದು ಅವರು ಕರೆದಾಗಲೆಲ್ಲ ಬಂದು ಹೋಗುತ್ತೇನೆ. ಪ್ರತಿ ತಿಂಗಳೂ ಇಡೀ ಕುಟುಂಬದವರೆಲ್ಲರೂ ಒಂದೆಡೆ ಕಲೆತು ಪರಸ್ಪರ ಸುಖ–ದುಃಖಗಳ ವಿನಿಮಯ ಮಾಡಿಕೊಳ್ಳುವುದು ನಾವು ಬೆಳೆಸಿಕೊಂಡು ಬಂದಿರುವ ಪದ್ಧತಿಯಾಗಿದೆ. ಅಂತಹ ಒಂದು ಮಾತುಕತೆಯ ಸಂದರ್ಭದಲ್ಲಿ ನನ್ನ ಮಕ್ಕಳು 'ನೀವು ಇಷ್ಟೊಂದೆಲ್ಲಾ ಸಂಸ್ಥೆಗಳ ಒಡನಾಟ ಹೊಂದಿದ್ದೀರಿ ಸೇವಾ ಕಾರ್ಯಗಳನ್ನು ನಡೆಸಿದ್ದೀರಿ ನೀವೇಕೆ ನಿಮ್ಮ ಜೀವನಗಾಥೆಯನ್ನು ದಾಖಲಿಸಿ ಒಂದು ಕೃತಿ ಪ್ರಕಟಿಸಬಾರದು' ಎಂಬ ಪ್ರೀತಿಪೂರ್ವಕ ಒತ್ತಾಯವೇ ಈ ಕೃತಿ ಹೊರಬರಲು ಕಾರಣವಾಯಿತು.

"ಅಂತರಂಗದ ಅನಾವರಣ" ಕೃತಿಯು ಆರಂಭಿಕ ಪುಟಗಳು ಭಾವಚಿತ್ರಗಳನ್ನು ಒಳಗೊಂಡಂತೆ ಒಟ್ಟು 212 ಪುಟಗಳನ್ನು ಹೊಂದಿದೆ. ಇಲ್ಲಿ ಯಾವುದೇ ಅಧ್ಯಾಯಗಳನ್ನು ವಿಂಗಡಿಸಿಲ್ಲ ಹಾಗೂ ಅಲ್ಲಲ್ಲಿ ವಿಷಯಕ್ಕೆ ಸಂಬಂಧಿಸಿದ ಶೀರ್ಷಿಕೆಗಳನ್ನು ಕೊಡದೆ ಹಾಗೆ ಐದು ತಲೆಮಾರಿನ ಕುಟುಂಬದ ವಿವರಗಳು ಏಕಪ್ರಕಾರವಾಗಿ ಮುಂದುವರೆಯುತ್ತಾ ಹೋಗುತ್ತದೆ. ಸುಖದುಃಖ, ಬೆಳವಣಿಗೆ, ಸೇವೆ, ಸಹಕಾರ, ಕುಟುಂಬ ಹಾಗೂ ಸಮಾಜವನ್ನು ನಿಭಾಯಿಸುವ ಸನ್ನಿವೇಶಗಳನ್ನು ಒಳಗೊಂಡಂತೆ, ಒಬ್ಬ ಹೆಣ್ಣು "ಲೋಕದಲ್ಲಿ

ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" ಎಂಬ ಅಕ್ಕಮಹಾದೇವಿಯ ಶ್ರೀವಾಣಿಯಂತೆ ಎಲ್ಲವನ್ನೂ ಸಮಚಿತ್ತದಿಂದ ಶ್ರೀಮತಿ ಸುಧಾರವರು ಜೀವನವನ್ನು ಕಂಡಿದ್ದಾರೆ ಎಂಬುದನ್ನು ಈ ಕೃತಿಯು ಓದುಗರಿಗೆ ತಿಳಿಸುತ್ತದೆ. ತಮ್ಮ ಅಂತರಂಗ–ಬಹಿರಂಗದ ವಿಷಯಗಳನ್ನು ಸಮಾಜಕ್ಕೆ ತಿಳಿಸುವುದರ ಮೂಲಕ ಹೆಣ್ಣು ಅಬಲೆಯಲ್ಲ ಸಬಲೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ. ಹೆಣ್ಣುಮಕ್ಕಳು ತಮ್ಮ ವಿಚಾರಗಳನ್ನು ಹೇಳಿಕೊಳ್ಳುವುದು ನಮ್ಮ ಸಮಾಜದಲ್ಲಿ ಕಷ್ಟ . ಯಾವುದೇ ಸಂಕೋಚವಿಲ್ಲದೆ ಹೆಣ್ಣುಮಕ್ಕಳು ಸಮಾಜದಲ್ಲಿ ಬರುವ ಕಷ್ಟನಷ್ಟಗಳನ್ನು ಎದುರಿಸಿ ಉತ್ತಮ ಸ್ಥಿತಿಯನ್ನು ತಲುಪಬಹುದೆಂಬ ಆತ್ಮವಿಶ್ವಾಸವನ್ನು ಹಾಗೂ ಕುಟುಂಬ ಜೀವನದ ಬಗ್ಗೆ ಪ್ರೀತಿವಿಶ್ವಾಸವನ್ನು ಈ ಕೃತಿ ಓದುಗರಲ್ಲಿ ಮೂಡಿಸುತ್ತದೆ.

ದಿನಾಂಕ 21.2.2026ರಂದು ಸುತ್ತೂರು ಜಗದ್ಗುರುಗಳವರು ದಿವ್ಯಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಈ ಕೃತಿಯ ಬಿಡುಗಡೆಯಾಗಿರುತ್ತದೆ. ಶಿವಮೊಗ್ಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್. ಇಂದುಮತಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ಕೃತಿ ಪರಿಚಯವನ್ನು ಮಾಡಿಕೊಟ್ಟರು. ಶ್ರೀಮತಿ ಸುಧಾರವರು ಮೈಸೂರು ಶ್ರೀರಾಂಪುರದಲ್ಲಿರುವ ತಮ್ಮ ಮನೆಯ ಆವರಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಪಾರ ಸಂಖ್ಯೆಯ ಬಂಧುಬಳಗದವರು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಈ ಕೃತಿಯಿಂದ ಪ್ರೇರಣೆ ಪಡೆದು ಮತ್ತಷ್ಟು ವ್ಯಕ್ತಿಗಳ ಆತ್ಮಕಥನವನ್ನು ಬರೆಯುವಂತಾಗಬೇಕು.

□

ಇಷ್ಟಲಿಂಗಕ್ಕವಿರ್ತದ ಭಾಜನದೆಂದು
ತುತ್ತ ನುಂಗವುದಕ್ಕೊಂದು ಮಿಥ್ಯದ ಭಾಜನದೆಂದು
ಈ ಅಚ್ಚುಗದಲ್ಲಿ ಬಿದ್ದು ಸಾವರಿಗೆತ್ತಣ ಲಿಂಗಾರ್ಪಿತ?
ಮಜ್ಜನ ಮಲಿನ ಹೊದ್ದಿಹ ಸುಖ ಶೃಂಗಾರ
ಇವರೊಳಗೆ ವರ್ಜಿತವೆಂದ
ಲಿಂಗಕ್ಕೊಂದು ಹಂಗು, ತಾನುಂಬದಕ್ಕೆ ಒಂದು ಹಂಗು
ಇದರಂದವನರಿಯದೆ ಬೆಳದಿಂಗಳಲ್ಲಿ ನಿಂದು
ಹೆಂಡವ ಕೊಂಡವನಂತೆ
ಲಿಂಗದ ಸಂದನೇನ ಬಲ್ಲ, ನಿಃಕಳಂಕ ಮಲ್ಲಿಕಾರ್ಜುನಾ

ಮೋಳಿಗೆ ಮಾರಯ್ಯ

ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

ಮಠಗಳ ಸಾಮಾಜಿಕ ಸೇವೆ ಅಪಾರ

ರಾಜ್ಯದಲ್ಲಿ ಮಠಮಾನ್ಯಗಳು ಸಮಾಜಕ್ಕೆ ಸಲ್ಲಿಸುವ ಸೇವೆ ಅಪಾರ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 28ರಂದು ಗುಂಡ್ಲುಪೇಟೆ ತಾಲ್ಲೂಕು ಚಿಕ್ಕತುಪ್ಪೂರು ಶ್ರೀ ಶಿವಪೂಜಾ ಮಠದ ಶತಮಾನೋತ್ಸವ, ಪಟ್ಟದ ಶ್ರೀ ದಯಾನಂದ ಸ್ವಾಮಿಗಳ 22ನೇ ವರ್ಷದ ಸಂಸ್ಮರಣೋತ್ಸವ ಹಾಗೂ ಶ್ರೀಮಠದ ನೂತನ ಕಟ್ಟಡ ಉದ್ಘಾಟನೆಯ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಾಜ್ಯದಲ್ಲಿ ಅನ್ನ, ಜ್ಞಾನ, ಆರೋಗ್ಯ ದಾಸೋಹಕ್ಕೆ ರಾಜ್ಯದ ಪ್ರತಿಯೊಂದು ಮಠವೂ ತನ್ನದೇ ಆದ ಕೊಡುಗೆ ನೀಡುತ್ತಿದೆ. ಎಲ್ಲಾ ಕ್ಷೇತ್ರದ ಅಭಿವೃದ್ಧಿಗೂ ಕೈ ಜೋಡಿಸಿವೆ. ಎಲ್ಲ ಮಠಮಾನ್ಯಗಳು ರಾಜ್ಯ ಹಾಗೂ ಜನರ ಕಲ್ಯಾಣ ಬಯಸಿವೆ. ಚಿಕ್ಕತುಪ್ಪೂರು ಪಟ್ಟದ ಶ್ರೀ ದಯಾನಂದ ಸ್ವಾಮಿಗಳು ಶಿವಪೂಜಾನಿಷ್ಠರಾಗಿದ್ದರು. ಈಗಿನ ಶ್ರೀ ಚನ್ನವೀರ ಸ್ವಾಮಿಗಳ ಸಾರಥ್ಯದಲ್ಲಿ ಮಠ ಪ್ರಗತಿಯನ್ನು ಕಂಡಿದೆ ಎಂದರು.

ಸಿದ್ಧಗಂಗಾ, ಕನಕಪುರ, ಪಡುಗೂರು, ಕುಂದೂರು, ದೇವನೂರು, ಹರವೆ, ಸಾಲೂರು, ವಾಟಾಳು ಮಠಗಳ ಶ್ರೀಗಳು, ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎಚ್.ಎಸ್. ನಂಜಪ್ಪ, ಶ್ರೀ ಹೆಚ್.ಎಸ್. ನಂಜುಂಡ ಪ್ರಸಾದ್, ಶ್ರೀ ಹೆಚ್.ಎಸ್. ಪ್ರಭುಸ್ವಾಮಿ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಕೆ.ಎಸ್. ರವಿ ಮೊದಲಾದವರು ಉಪಸ್ಥಿತರಿದ್ದರು.

ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು

ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 2ರಂದು ಮೈಸೂರು ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಏರ್ಪಡಿಸಿದ್ದ ಕೃತಿಗಳ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪುಸ್ತಕ ಓದುವ ಹವ್ಯಾಸ ಅನೇಕರಿಗಿರುತ್ತದೆ. ಆದರೆ ಓದಿದ್ದನ್ನು ಎಷ್ಟರಮಟ್ಟಿಗೆ ಆರ್ಜನೆ ಮಾಡಿಕೊಳ್ಳುತ್ತಾರೆ ಎಂಬುದು ಮುಖ್ಯವಾಗುತ್ತದೆ. ಅತ್ಯಂತ ಮೌಲಿಕವಾದ ಕೃತಿಗಳು ಇಂದು ಬಿಡುಗಡೆಗೊಂಡಿವೆ. ಕಲ್ಪನೆಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಪುಸ್ತಕಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನಸ್ಸಿನ ವಿಕಾಸಕ್ಕೂ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ನಿವೃತ್ತ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್‌ರವರು ಬಾಹ್ಯಾಕಾಶ ತಂತ್ರಜ್ಞಾನದಿಂದ ಸಮಾಜಕ್ಕೆ ತುಂಬಾ ಉಪಯೋಗವಾಗುತ್ತಿದೆ. ಪುಸ್ತಕಗಳನ್ನು ಓದುವುದರಿಂದ ಕಲ್ಪನಾಶಕ್ತಿ ವೃದ್ಧಿಯಾಗುತ್ತದೆ. ನಮ್ಮಲ್ಲಿರುವ ಅಸಲಿ ಬುದ್ಧಿವಂತಿಕೆಯು ಹೆಚ್ಚುತ್ತದೆ. ನಮ್ಮ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಪುಸ್ತಕಗಳನ್ನು ಓದಬೇಕು ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರೂ ಆದ ಶ್ರೀ ಜಿ. ಜಗದೀಶ್‌ರವರು ಇಂದು ಪುಸ್ತಕ ಓದುವ ಸಂಸ್ಕೃತಿ ಕಡಿಮೆಯಾಗಿದೆ. ಗ್ರಂಥಾಲಯಗಳಲ್ಲಿ ಒಂದೂ ಪುಟವನ್ನೂ ತೆರೆಯದ ಎಷ್ಟೋ ಪುಸ್ತಕಗಳಿವೆ. ಗ್ರಂಥಾಲಯಗಳಿಗೆ ಬರೀ ಪುಸ್ತಕಗಳನ್ನು ತುಂಬಿಸುತ್ತಿದ್ದೇವೆ. ಆದರೆ ಓದುಗರಿಗೆ ಏನು ಬೇಕೋ ಅದನ್ನು ನಾವು ಕೊಡಬೇಕು. ಜನರು ಬಳಸುವಂತಹ ಗ್ರಂಥಾಲಯಗಳನ್ನು ನಾವು ತೆರೆಯಬೇಕಿದೆ. ಪುಸ್ತಕಗಳನ್ನು ಓದುವುದರಿಂದ ಅದ್ಭುತ ಅನುಭವಗಳು ಸಿಗುತ್ತವೆ. ಆದ್ದರಿಂದ ಜನಸಾಮಾನ್ಯರಿಗೆ ಜ್ಞಾನವು ಲಭ್ಯವಾಗುವಂತೆ ಮಾಡಬೇಕು, ಈ ನಿಟ್ಟಿನಲ್ಲಿ ಜೆಎಸ್‌ಎಸ್ ಗ್ರಂಥಮಾಲೆಯು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜನರು ಮೊಬೈಲ್ ಬಳಸುವುದರಿಂದ ಬೇಸತ್ತಿದ್ದು ರೈಲು, ಬಸ್ಸು, ವಿಮಾನ ನಿಲ್ದಾಣಗಳಲ್ಲಿ ಓದುವ ಜನ ಕಾಣುತ್ತಾರೆ. ಪ್ರಯಾಣದ ಸಂದರ್ಭದಲ್ಲಿ ಓದುವ ಹವ್ಯಾಸವನ್ನು ರೂಢಿಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಫ್ರೆಂಚ್ ಭಾಷಾ ಉಪನ್ಯಾಸಕರಾದ ಡಾ. ಸುಜಾತ ಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ. ನಾಗಣ್ಣರವರುಗಳು ಕೃತಿಗಳನ್ನು ಪರಿಚಯಿಸಿದರು.

ಶ್ರೀಮತಿ ರೂಪಾ ಗುರುಪ್ರಸಾದ್ ಮತ್ತು ಶ್ರೀಮತಿ ವಿನುತರವರುಗಳು ಪ್ರಾರ್ಥನೆ ಸಲ್ಲಿಸಿದರು. ಡಾ. ಎಂ.ಎನ್. ನಂದೀಶ್ ಹಂಚೆ ಸ್ವಾಗತಿಸಿದರು. ಶ್ರೀ ನಗರ್ಲೆ ಶಿವಕುಮಾರ ವಂದಿಸಿದರು. ಡಾ. ಪ್ರಭುಸ್ವಾಮಿ ಕಟ್ನವಾಡಿ ನಿರೂಪಿಸಿದರು.

ದೇಶದ ಸ್ವಾತಂತ್ರ್ಯ ಕಾಪಾಡಲು ಭ್ರಾತೃತ್ವ ಭಾವನೆ ಮುಖ್ಯ

ದೇಶದ ಸ್ವಾತಂತ್ರ್ಯ ಕಾಪಾಡಲು ಭ್ರಾತೃತ್ವ ಭಾವನೆ ಮುಖ್ಯ ಎಂದು ಆರ್‌ಎಸ್‌ಎಸ್ ಸರ ಸಂಘಚಾಲಕರಾದ ಡಾ. ಮೋಹನ್ ಭಾಗವತ್‌ರವರು ಮೇ 7ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ–15 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ವಿಷಯ ಕುರಿತು ಮಾತನಾಡುತ್ತಾ ತಿಳಿಸಿದರು. ಡಾ. ಅಂಬೇಡ್ಕರ್‌ರವರ ಸಂವಿಧಾನ ಸಭೆಯ ಭಾಷಣಗಳನ್ನು ಮತ್ತೊಮ್ಮೆ ಓದಬೇಕು. ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯೇ ದೇಶದ ಸರ್ವಾಂಗೀಣ ಅಭಿವೃದ್ಧಿ. ರಾಜಕೀಯ ಮತ್ತು ಆರ್ಥಿಕ ಸಮಾನತೆಗಿಂತ

ಸಾಮಾಜಿಕ ಸಮಾನತೆ ಮುಖ್ಯ ಎಂದು ಅವರು ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೆಸೆಯುವ ಕೊಂಡಿಯೇ ಬಂಧುಭಾವ. ಈ ಬಂಧುಭಾವ ಇಲ್ಲದಿದ್ದರೆ ದೇಶದ ಸ್ವಾತಂತ್ರ್ಯ ಕಾಪಾಡಿಕೊಳ್ಳುವುದು ಕಷ್ಟ. ಸಹೋದರರನ್ನು ಅಸ್ಪೃಶ್ಯರಾಗಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು–ಕೀಳು ಎಂಬ ಮನೋಭಾವ ಕಳೆದು ಸರ್ವರೂ ಒಂದೇ ಎಂಬ ಏಕಭಾವ ಭಾರತೀಯರಲ್ಲಿ ಮೂಡಬೇಕು. ದೇಶದ ಕೆಲವೇ ಕೆಲವು ಶ್ರೀಮಂತ ವ್ಯಕ್ತಿಗಳ ಏಳಿಗೆಯಿಂದ ದೇಶ ಅಭಿವೃದ್ಧಿಯಾಗಿದೆ ಎಂದು ಹೇಳಲಾಗುತ್ತಿದೆ. ದೇಹದ ಒಂದು ಭಾಗ ಪಾರ್ಶ್ವವಾಯುವಿಗೆ ಒಳಗಾಗಿದ್ದರೆ, ಇಡೀ ದೇಹ ಆರೋಗ್ಯವಾಗಿದೆ ಎಂದು ಹೇಳಲು ಹೇಗೆ ಆಗುವುದಿಲ್ಲವೋ ಹಾಗೆಯೇ ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿ ಆಗದಿದ್ದರೆ ಅದು ನಿಜವಾದ ಅಭಿವೃದ್ಧಿಯಲ್ಲ. ಹೀಗಾಗಿ ಕಟ್ಟಕಡೆಯ ವ್ಯಕ್ತಿಯೂ ಸಾಮರಸ್ಯ, ಸೌಹಾರ್ದತೆಯಿಂದ ನಾವೆಲ್ಲರೂ ಒಂದು ಎಂದು ಸಂತೋಷದಿಂದ ಇದ್ದಾಗ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಆಗುತ್ತದೆ.

ಸಮಾಜದಲ್ಲಿ ಸಾಮರಸ್ಯ ಮೂಡಿಸಲು ವಿವಿಧ ಜಾತಿ, ಧರ್ಮ ಮತ್ತು ಭಾಷೆಯ ಜನರ ಮನೆಗಳಿಗೆ ಭೇಟಿ ನೀಡಿ ಸ್ನೇಹ ಬೆಳೆಸಬೇಕು. ದುರ್ಬಲ ವರ್ಗದವರ ಉದ್ಧಾರಕ್ಕೆ ಎಲ್ಲರೂ ಒಗ್ಗೂಡಿ ಶ್ರಮಿಸಬೇಕು. ಕಟುವಾದ ನುಡಿಗಳನ್ನು ಬಿಟ್ಟು, ಸತ್ಯ ಮತ್ತು ಪ್ರೀತಿಯಿಂದ ಸಂವಹನ ನಡೆಸುವ ಮೂಲಕ ಮನಸ್ಸಿನ ವಿಕಾರಗಳನ್ನು ದೂರ ಮಾಡಬೇಕು ಎಂದು ಅವರು ಹೇಳಿದರು. ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ. ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು. ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಕಲ್ಪನೆ. ಕೆಟ್ಟ ಸಂಪಾದನೆ ಬೇಡವೆಂಬ ಅಚಲ ನಿರ್ಧಾರ ಕೈಗೊಳ್ಳಬೇಕು. ನಮ್ಮ ಬೆಳವಣಿಗೆಯಲ್ಲಿ ಸ್ವಾರ್ಥ ಬಿಟ್ಟು ಸದ್ಭಾವನೆ ಇರಬೇಕು. ನಮ್ಮ ದೇಶದಲ್ಲಿ ಆದಾಯ ಕಡಿಮೆ, ಜನರ ಬೇಡಿಕೆ ಹಾಗೂ ಅವಶ್ಯಕತೆ ಹೆಚ್ಚು ಎಂಬುವುದು ಸತ್ಯ. ಆದರೆ ಶ್ರೀಮಂತಿಕೆ ಹಾಗೂ ಅಭಿವೃದ್ಧಿ ಏಕವ್ಯಕ್ತಿಗೆ ಸೀಮಿತವಾಗದೆ ಸಾಮೂಹಿಕವಾಗಬೇಕು. ಆಗ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಕಾಣಲು ಸಾಧ್ಯವಾಗುತ್ತದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಹಿಂದೂ ಧರ್ಮ ಮತ್ತು ಸಂಸ್ಕೃತಿ ಇಡೀ ಜಗತ್ತಿಗೇ ಮಾರ್ಗದರ್ಶನ ನೀಡುವ ಸ್ಥಾನದಲ್ಲಿದೆ. ಪರೋಪಕಾರ ಮಾಡುವ ಮಾನವೀಯ ಅನುಕಂಪ ಭಾರತೀಯರಲ್ಲಿ ಮಾತ್ರ ಇದೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಗಟ್ಟಿತನ ವಿಶ್ವಕ್ಕೆ ಮಾದರಿಯಾಗಿದೆ. ಕೆಲವರು ದೇಶ ಕೆಟ್ಟಿದೆ, ಜಗತ್ತು ಕೆಟ್ಟಿದೆ ಎಂಬ ಅಂಕುಡೊಂಕಿನ ಮಾತುಗಳನ್ನಾಡುತ್ತಾರೆ. ಆದರೆ, ತಾನು ಸರಿ ಇದ್ದೇನೆಯೇ ಎಂಬುದನ್ನು ಮೊದಲು ಮನನ ಮಾಡಿಕೊಳ್ಳಬೇಕು. ತಾನು ಸರಿ ಹೋದರೆ ದೇಶ ಸರಿ ಹೋಗುತ್ತದೆ, ವಿಶ್ವ

ಸರಿಹೋಗುತ್ತದೆ ಎಂಬ ಸತ್ಯವನ್ನು ಅರಿಯಬೇಕು. ಕನ್ನಡಿಯ ಧೂಳನ್ನು ಸ್ವಚ್ಛಗೊಳಿಸು ವುದಕ್ಕಿಂತ ತನ್ನ ಮುಖ ಮತ್ತು ಮನಸ್ಸಿನಲ್ಲಿರುವ ಧೂಳನ್ನು ತೆಗೆಯಬೇಕು. ದ್ವೇಷಮುಕ್ತವಾದ ಮನಸ್ಸು ಹೊಂದಿದ್ದರೆ ಶಾಂತಿ, ಸಂತೋಷ ತನಗೆ ತಾನೆ ಬರುತ್ತದೆ. ಮೊದಲು ಅಂತ ರಂಗದ ಶುದ್ಧಿ ಹೊಂದಬೇಕು. ಮನಸ್ಸು ಪರಿಶುದ್ಧವಾದರೆ ಮನುಷ್ಯ ಕೂಡ ಪರಿಶುದ್ಧನಾಗುತ್ತಾನೆ. ಐಷಾರಾಮಿ ಬದುಕು ಇದ್ದರೆ ಮಾತ್ರ ಸಂತೋಷ ಸಿದ್ಧಿಸುವುದಿಲ್ಲ, ಕಷ್ಟದಲ್ಲಿ ಇರುವವರಿಗೆ ಉಪಕಾರ ಮಾಡುವುದು ಆತ್ಮ ಸಂತೋಷವನ್ನು ಉಂಟು ಮಾಡುತ್ತದೆ. ಪರೋಪಕಾರ ಪುಣ್ಯವಾಗಿದ್ದು, ಮತ್ತೊಬ್ಬರಿಗೆ ತೊಂದರೆ ಕೊಡುವುದು ಪಾಪದ ಕೆಲಸ ಎಂಬ ಸತ್ಯವನ್ನು ಅರಿಯಬೇಕು ಎಂದು ಕಿವಿಮಾತು ಹೇಳಿದರು. ಜೆಎಸ್ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ 2007ರಿಂದ ವಿಶೇಷ ಉಪನ್ಯಾಸಗಳನ್ನು ಆಯೋಜನೆ ಮಾಡಲಾಗುತ್ತಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ತ್ರಿವಿಧ ದಾಸೋಹದ ಪರಿಕಲ್ಪನೆಯಲ್ಲಿ ಶ್ರೀಮಠ ಸಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಮಧುಸೂದನ ಸಾಯಿಯವರ 14ನೇ ಉಪನ್ಯಾಸದ 'ಆತ್ಮಾನೊ ಮೋಕ್ಷಾರ್ಥಂ ಜಗತ್ ಹಿತಾಯ ಚ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಡಾ. ಬಿ. ಸುರೇಶ್ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತ ಮತ್ತು ಕು. ಎಂ. ಅಮೂಲ್ಯ ಪ್ರಾರ್ಥಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

ಆರೋಗ್ಯ, ಸಂಸ್ಕೃತಿ ಕಾಪಾಡುವ ಪ್ರಯತ್ನ ಅನನ್ಯ

ಭಾರತೀಯ ಸಂಸ್ಕೃತಿಯಲ್ಲಿ ಹಲವಾರು ಆಚರಣೆಗಳಿವೆ. ಅವುಗಳಲ್ಲಿ ಮೌಢ್ಯತೆ ಮತ್ತು ವೈಚಾರಿಕತೆಯನ್ನು ಅವಲೋಕಿಸಿ ಅರಿತು ಆಚರಿಸುವುದರಿಂದ ಆರೋಗ್ಯ ಮತ್ತು ಸಂಸ್ಕೃತಿ ಎರಡನ್ನೂ ಕಾಪಾಡಿಕೊಳ್ಳಲು ಸಾಧ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 8ರಂದು ಮೈಸೂರು ಜಗನ್ನಾಥ ಸೆಂಟರ್ ಫಾರ್ ಆರ್ಟ್ಸ್ ಅಂಡ್ ಕಲ್ಚರ್‌ನಲ್ಲಿ ಸಾಗರ ತಾಲ್ಲೂಕು ಹೆಗ್ಗೋಡು ಭೀಮನಕೋಣೆಯ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘವು ಹಮ್ಮಿಕೊಂಡಿದ್ದ ನೈಸರ್ಗಿಕ ಬಣ್ಣದ ಅಪ್ಪಟ ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಮತ್ತು ಕೊಡು–ಕೊಳ್ಳುವವರ ಸಮಾವೇಶದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಈ ಆಧುನಿಕ ಯುಗದಲ್ಲಿ ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಅದೇ ವೇಳೆ ಆತ ಪರಂಪರೆಯ, ಸಂಸ್ಕೃತಿಯ ಮೌಲ್ಯಗಳನ್ನು ಹೊಂದುವುದೂ ಕೂಡ ಅಗತ್ಯ. ಈ ನಿಟ್ಟಿನಲ್ಲಿ ಹೆಗ್ಗೋಡಿನ ಚರಕ ಸಂಸ್ಥೆ ಹಲವು ದಶಕಗಳಿಂದ ಕೆಲಸ ಮಾಡುತ್ತಾ ಬಂದಿದೆ. ಇದನ್ನು ಪ್ರೋತ್ಸಾಹಿಸುವ ಕೆಲಸವನ್ನು ಸಮಾಜ–ಸರ್ಕಾರಗಳು ಮಾಡಬೇಕಿದೆ. ಬದನವಾಳುವಿನಲ್ಲಿ ಗುಡಿ ಕೈಗಾರಿಕೆ ಸಂಸ್ಕೃತಿ ಉಳಿಯಬೇಕು ಎಂದು ಅವನ್ನು ಉಳಿಸುವ ನಿಟ್ಟಿನಲ್ಲಿ

ಶ್ರೀ ಪ್ರಸನ್ನರವರ ನೇತೃತ್ವದಲ್ಲಿ ಕೈಗೊಂಡ ಸತ್ಯಾಗ್ರಹದ ಕಾರಣದಿಂದ ಸರ್ಕಾರ ಈಚೆಗೆ ಅನುದಾನ ಬಿಡುಗಡೆ ಮಾಡಿದೆ ಎಂದು ಹೇಳಿದರು.

ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕರಾದ ಶ್ರೀಮತಿ ಶುಭಾ ಸಂಜಯ್ ಅರಸ್‌ರವರು ಚರಕ ಎಂದಾಕ್ಷಣ ಗಾಂಧೀಜಿ ನೆನಪಾಗುತ್ತಾರೆ. ಸ್ವಾತಂತ್ರ್ಯ ಚಳವಳಿ ಕಣ್ಮುಂದೆ ಬರುತ್ತದೆ. ಇದೇ ಚರಕ ಇವತ್ತು ಸುಸ್ಥಿರತೆಯ ಸಂಕೇತವಾಗಿ, ಕೌಶಲದ ಪ್ರತೀಕವಾಗಿ ನೂರಾರು ಮಹಿಳೆಯರ ಬದುಕನ್ನು ರೂಪಿಸುತ್ತಿರುವುದು ಹೆಮ್ಮೆ ತಂದಿದೆ ಎಂದರು.

ರಂಗಕರ್ಮಿಗಳಾದ ಶ್ರೀ ಪ್ರಸನ್ನರವರು ಚರಕ ಹಲವು ಬಗೆಯ ಆವಿಷ್ಕಾರದಲ್ಲಿ ತೊಡಗಿದೆ. ಆರೋಗ್ಯಕ್ಕೆ ಪೂರಕವಾದ ಅರಿಶಿಣ ಮತ್ತು ಬೇವಿನ ಬಣ್ಣದಲ್ಲಿ ಮಕ್ಕಳ ಒಳಬಟ್ಟೆ, ಮಠಾಧೀಶರು ತೊಡುವ ಕಾಷಾಯ ಬಟ್ಟೆಗಳನ್ನು ಅನಾವರಣಗೊಳಿಸಲಾಗಿದೆ ಎಂದರು.

ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರಾದ ಶ್ರೀ ಬಿ.ಎಸ್. ಸೋಮಶೇಖರ್, ಚರಕ ಸಂಘದ ಅಧ್ಯಕ್ಷರಾದ ಶ್ರೀಮತಿ ಮಹಾಲಕ್ಷ್ಮೀ ಉಪಸ್ಥಿತರಿದ್ದರು.

ಯಡಿಯೂರಪ್ಪನವರು ಜನರ ನಾಡಿಮಿಡಿತವನ್ನು ಅರಿತ ನಾಯಕರು

ಶ್ರೀ ಬಿ.ಎಸ್. ಯಡಿಯೂರಪ್ಪನವರು ಜನರ ನಾಡಿಮಿಡಿತವನ್ನು ಅರಿತ ನಾಯಕರು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 9ರಂದು ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪುರಸಭೆ ಸದಸ್ಯರಾಗಿ ಸೇವೆ ಆರಂಭಿಸಿ ರಾಜ್ಯದ ಮುಖ್ಯಮಂತ್ರಿಗಳಾಗಿ ಬೆಳೆದರು. ಶ್ರೀ ಯಡಿಯೂರಪ್ಪನವರು ಕರ್ನಾಟಕದ ಜನರು ಅತ್ಯಂತ ಪ್ರೀತಿಯಿಂದ ಬೆಳೆಸಿದ ಅಪರೂಪದ ವ್ಯಕ್ತಿಗಳಲ್ಲಿ ಸಹ ಒಬ್ಬರು. ಈ ಕಾರ್ಯಕ್ರಮಕ್ಕೆ ಹರಿದು ಬಂದಿರುವ ಜನಸಾಗರವನ್ನು ಗಮನಿಸಿದರೆ ಇವರೊಬ್ಬ ನಾಡಿನ ಧೀಮಂತ ನಾಯಕರು ಎಂಬುದಕ್ಕೆ ಸಾಕ್ಷಿಯಾಗಿದೆ. ಮುಖ್ಯಮಂತ್ರಿಗಳಾಗಿದ್ದಾಗ ರೈತಪರವಾಗಿ ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಉತ್ತಮ ಯೋಜನೆಗಳನ್ನು ತಲುಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಷಾರವರು ಯಡಿಯೂರಪ್ಪನವರ ಐವತ್ತು ವರ್ಷಗಳ ಸಾರ್ವಜನಿಕ ಜೀವನದಲ್ಲಿ ಮಾಡಿದ ಜನಸೇವೆಯ ಪರಿ ಮತ್ತು ಹೋರಾಟ ಯುವ ರಾಜಕಾರಣಿಗಳಿಗೆ ಮಾದರಿಯಾಗಿದೆ. ದಕ್ಷಿಣ ಭಾರತದಲ್ಲಿ ಅವರಂತೆ ಹೋರಾಟದ ಮೂಲಕ ರಾಜಕಾರಣದಲ್ಲಿ ಎತ್ತರಕ್ಕೆ ಏರಿದವರಿಲ್ಲ. ಜನಸೇವೆಯೇ ಜನಾರ್ಧನ ಸೇವೆ, ರೈತರ ಕಲ್ಯಾಣವೇ ರಾಜ್ಯದ ಕಲ್ಯಾಣ ಎಂಬ ಭಾವನೆಯಿಂದ ಅವರು ಕೆಲಸ ಮಾಡಿದರು. ಆವರು ಮಂಡಿಸಿದ ರೈತ ಬಜೆಟ್ ಇಡೀ ದೇಶಕ್ಕೆ ಮಾದರಿಯಾಯಿತು ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸುಧೀರ್ಘ ಐವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ನನ್ನ ಜೊತೆ ಹೆಜ್ಜೆ ಹಾಕಿದ, ನನ್ನ ಹೋರಾಟಕ್ಕೆ ಬಲ ತುಂಬಿದ ಕಾರ್ಯಕರ್ತರೆ ನನಗೆ ಜೀವಾಳ, ಅವರಿಲ್ಲದೇ ನಾನಿಲ್ಲ. ಈಗಲೂ ಅವರಿಗಾಗಿ ನನ್ನ ಮನ ತುಡಿಯುತ್ತಿದೆ. ನಾನು ಸಾಮಾನ್ಯರಲ್ಲಿ ಸಾಮಾನ್ಯ. ನನ್ನಂತಹವನಿಗೆ ಅಭಿಮಾನಿಗಳು, ಕಾರ್ಯಕರ್ತರು ತೋರುತ್ತಿರುವ ಪ್ರೀತಿಗೆ ಹೃದಯ ತುಂಬಿ ಬಂದಿದೆ ಎಂದರು. ಶ್ರೀ ಬಿ.ವೈ. ವಿಜಯೇಂದ್ರರವರು ಪ್ರಾಸ್ತಾವಿಕ ಭಾಷಣ ಮಾಡಿದರು.

ರಂಭಾಪುರಿ, ಉಜ್ಜಯಿನಿ, ಶ್ರೀಶೈಲ, ಕಾಶಿ, ಸಿರಿಗರೆ, ಆದಿಚುಂಚನಗಿರಿ, ಹುಬ್ಬಳ್ಳಿ, ಶಿರಹಟ್ಟಿ, ನಿಡಸೋಸಿ, ಆನಂದಪುರಂ ಜಗದ್ಗುರುಗಳವರು, ಭಾಲ್ಕಿ, ಸಿದ್ಧಗಂಗಾ, ಉಡುಪಿ ಪೇಜಾವರ ಶ್ರೀಗಳು, ಸಾಣೆಹಳ್ಳಿ, ವಚನಾನಂದ ಶ್ರೀಗಳು, ಕಾಗಿನೆಲೆ ಕನಕ ಗುರುಪೀಠ, ಮಾದಾರ ಚನ್ನಯ್ಯ ಗುರುಪೀಠ, ಕುಂಚಿಟಿಗ ಪೀಠ, ವಾಲ್ಮೀಕಿ ಪೀಠ, ಭೋವಿ ಪೀಠ ಹಾಗೂ ಭಗೀರಥ ಪೀಠಗಳ ಶ್ರೀಗಳು, ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಜಗದೀಶ್ ಎಸ್. ಶೆಟ್ಟರ್, ಶ್ರೀ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಷಿ, ಶ್ರೀ ವಿ. ಸೋಮಣ್ಣ, ಕು. ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಗಳಾದ ಶ್ರೀ ಡಿ.ವಿ. ಸದಾನಂದಗೌಡ, ಸಂಸದರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ಚಲವಾದಿ ನಾರಾಯಣಸ್ವಾಮಿ ಹಾಗೂ ಶ್ರೀ ಬಿ.ವೈ. ರಾಘವೇಂದ್ರರವರುಗಳು ಉಪಸ್ಥಿತರಿದ್ದರು.

ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸಿದಾಗ ಮಾತ್ರ ಮನುಷ್ಯ ಪರಿಪೂರ್ಣನಾಗಲು ಸಾಧ್ಯ

ಜೀವನದಲ್ಲಿ ಬರುವ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಹೃದಯವಂತಿಕೆಯನ್ನು ಹೊಂದಿದಾಗ ಮಾತ್ರ ಮನುಷ್ಯ ಪರಿಪೂರ್ಣನಾಗಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಮೇ 11ರಂದು ಸಾರ್ವಜನಿಕರ ಜೀವನೋತ್ಸಾಹ ಶಿಬಿರದ ಸಮಾರೋಪ ಹಾಗೂ ಕೃತಿ ಬಿಡುಗಡೆ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಬೇರೆಯವರ ಖುಷಿಯನ್ನು ಕಂಡು ಸಂತೋಷ ಪಡುವ ಗುಣವನ್ನು ಬೆಳೆಸಿಕೊಳ್ಳಬೇಕು. ಇತರರ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವ ಭಾವನೆ ಹೊಂದಿರಬೇಕು. ಕುಟುಂಬದಲ್ಲಿ ಸಾಮರಸ್ಯವಿದ್ದಾಗ ಮಾತ್ರ ನೆಮ್ಮದಿಯ ಬದುಕು ಸಾಧ್ಯ. ಭಗವಂತನ ಅನುಗ್ರಹದಿಂದ ದೊರೆತಿರುವ ಅಮೂಲ್ಯವಾದ ಜೀವನವನ್ನು ಸದುಪಯೋಗಪಡಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಜಾವಾಣಿ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್‌ರವರು ನಿರಂತರವಾಗಿ ಕಾಯಕದಲ್ಲಿ ತೊಡಗಿಕೊಂಡಿದ್ದರೆ ಜೀವನೋತ್ಸಾಹ ಹೆಚ್ಚುತ್ತದೆ.

ದುಡಿದು ತಿನ್ನುವ ಪ್ರಜ್ಞೆಯನ್ನು ಪ್ರಕೃತಿ ನಮಗೆ ಯಾವಾಗಲೂ ಕಲಿಸುತ್ತಾ ಬಂದಿದೆ. ನಮ್ಮ ಮನಸ್ಸು ಅರಳಬೇಕಾದರೆ ಸಂವೇದನೆಯನ್ನು ಹೊಂದಿರಬೇಕು. ಕೂಡು ಕುಟುಂಬದ ಅನುಭವವನ್ನು ಪರಿಚಯಿಸುವ ಉದ್ದೇಶದಿಂದ ಪರಮಪೂಜ್ಯ ಜಗದ್ಗುರುಗಳವರು ಇಂತಹ ಶಿಬಿರಗಳನ್ನು ಆಯೋಜಿಸಿದ್ದಾರೆ ಎಂದು ತಿಳಿಸಿದರು.

'ಶರಣರಿನ್ ನೂಟ್ರಿಯೊರು ವಸನಂಗಳ್' ಕೃತಿಯ ಅನುವಾದಕರಾದ ಶ್ರೀಮತಿ ಜಯಲಲಿತಾರವರು ಶರಣರ ವಚನಗಳು ಭಕ್ತಿ ಮಾರ್ಗಕ್ಕೆ ದಾರಿದೀಪವಾಗಿವೆ. ವಚನಗಳು ಮನುಕುಲವಿರುವ ತನಕ ಅನುಸರಿಸಬೇಕಾದ ಶ್ರೇಷ್ಠ ಸಾಹಿತ್ಯವಾಗಿವೆ. ಸುತ್ತೂರು ಶ್ರೀಮಠ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಸಾಂಸ್ಕೃತಿಕ, ಸಾಹಿತ್ಯಕ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಚೆನ್ನೈನ ಶ್ರೀ ಬಸವೇಶ್ವರ ಸೋಶಿಯಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಸ್. ಪ್ರಕಾಶಂರವರು "ಶರಣರಿನ್ ನೂಟ್ರಿಯೊರು ವಸನಂಗಳ್? ಕೃತಿ ಬಿಡುಗಡೆಗೊಳಿಸಿ ಕನ್ನಡದಿಂದ ತಮಿಳಿಗೆ ಭಾಷಾಂತರಗೊಂಡಿರುವ ಈ ಕೃತಿ ಅತ್ಯಂತ ಮೌಲಿಕವಾದದ್ದು. ತಮಿಳುನಾಡಿನ ಸಾಹಿತ್ಯಾಸಕ್ತರು ಶರಣರ ವಚನಗಳ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನೆರವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕರಾದ ಡಾ. ಪಿ. ಮಣಿಯವರು ಡಾ. ಪ್ರಭುಶಂಕರ್‌ರವರು ರಚಿಸಿರುವ ಶರಣರ 108 ವಚನಗಳು ಕೃತಿಯನ್ನು ಅತ್ಯಂತ ಸುಂದರವಾಗಿ ಶ್ರೀಮತಿ ಜಯಲಲಿತಾರವರು ತಮಿಳು ಭಾಷೆಗೆ ಅನುವಾದ ಮಾಡಿದ್ದಾರೆ. ಈ ಪುಸ್ತಕವನ್ನು ತಮಿಳಿಗೆ ಭಾಷಾಂತರ ಮಾಡಿಸಿ ತಮಿಳು ಓದುಗರಿಗೆ ಅನುಕೂಲ ಮಾಡಿಕೊಟ್ಟಿರುವ ಸುತ್ತೂರು ಶ್ರೀಮಠದ ಕಾರ್ಯ ಶ್ಲಾಘನೀಯವಾದುದ್ದು ತಿಳಿಸಿದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷರಾದ ಶ್ರೀ ವೆಂಕಟರೆಡ್ಡಿ ಡಿ. ಪಾಟೀಲ್‌ರವರು ಸುತ್ತೂರು ಶ್ರೀಮಠದಿಂದ ನಡೆಸಲಾಗುವ ಇಂತಹ ಶಿಬಿರಗಳು ಪ್ರತಿಯೊಬ್ಬರಲ್ಲೂ ಜೀವನೋತ್ಸಾಹವನ್ನು ಮಾತ್ರವಲ್ಲ ಸಂಸ್ಕಾರ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ವೀಣಾ ವಿಜಯಾನಂದ ಕಾಶಪ್ಪನವರ್ ರವರು ಸಂಸ್ಕೃತಿ ಪರಂಪರೆಯನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಮಠಗಳ ಸೇವೆಯನ್ನು ನಾವೆಲ್ಲ ಸ್ಮರಿಸಬೇಕು. ಸುತ್ತೂರು ಶ್ರೀಮಠವು ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು ಪ್ರಸಂಶನೀಯವಾದುದ್ದು. ಗುರು–ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಮುಂದಿನ

ಪೀಳಿಗೆಯವರಿಗೆ ಕೊಂಡೊಯ್ಯುವುದು ಅತಿಮುಖ್ಯ. ಹೆಣ್ಣು ಮಕ್ಕಳು ಸಂಸ್ಕಾರವಂತರಾದರೆ ಮನೆಯ ಸದಸ್ಯರು ಸನ್ಮಾರ್ಗದಿಂದ ನಡೆಯಲು ಸಾಧ್ಯವಾಗುತ್ತದೆಂದು ತಿಳಿಸಿದರು.

ಹರವೆ ಶ್ರೀ ವಿರಕ್ತಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು ಮಾತನಾಡಿದರು. ಶಿಬಿರಾರ್ಥಿಗಳಾದ ಬೆಂಗಳೂರಿನ ಶ್ರೀ ಜಿ.ಬಿ. ರವಿ, ಬೀದರ್ನ ಶ್ರೀಮತಿ ಪ್ರತಿಭಾ ಮಂಚ್, ಬೀರೂರಿನ ಶ್ರೀ ನಿಂಗಪ್ಪ, ಗೋಕಾಕ್ನ ಶ್ರೀಮತಿ ಬಬಿತಾ ಪಂಚಣ್ಣನವರ್, ಧಾರವಾಡದ ಶ್ರೀ ಮಲ್ಲಿಕಾರ್ಜುನ ಸಂಗೊಂದಿಮಠ ಹಾಗೂ ಗಂಗಾವತಿಯ ಶ್ರೀಮತಿ ದೊಡ್ಡಬಸಮ್ಮ ಗುರುವಿನಮಠರವರುಗಳು ಅನಿಸಿಕೆಗಳನ್ನು ಹಂಚಿಕೊಂಡರು.

ಶ್ರೀ ಎಂ.ಎಸ್. ಪ್ರಜ್ವಲ್ ಶಿಬಿರದ ವರದಿ ಮಂಡಿಸಿದರು. ಶ್ರೀಮತಿ ಸಹನಾ ಮೋಹನ್ ದೇಸಾಯಿ ಪ್ರಾರ್ಥಿಸಿದರು. ಶ್ರೀ ಹೆಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಎನ್.ಎಂ. ಶಿವಕುಮಾರ್ ವಂದಿಸಿದರು. ಶ್ರೀ ಸೋಮಶೇಖರ್ ಮಗದುಂ ಕಾರ್ಯಕ್ರಮ ನಿರೂಪಿಸಿದರು.

ಸಂಸ್ಕಾರಗಳಿದ್ದರೆ ಸಮಸ್ಯೆಗಳಿಗೆ ಸುಲಭ ಪರಿಹಾರ

ಮನುಷ್ಯನು ಜೀವನದಲ್ಲಿ ಉತ್ತಮ ಸಂಸ್ಕಾರಗಳನ್ನು ಹೊಂದಿದ್ದರೆ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರಗಳನ್ನು ಕಂಡುಕೊಳ್ಳಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 14ರಂದು ಬಿಳಿಗಿರಿರಂಗನಬೆಟ್ಟದ ಜೆಎಸ್ಎಸ್ ಆಶ್ರಮದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ವ್ಯಕ್ತಿಯೊರ್ವ ಉತ್ತಮ ಸಂಸ್ಕಾರಗಳನ್ನು ಹೊಂದಿದ್ದರೆ ಸಹವರ್ತಿಗಳು ಅವನ ಪ್ರಭಾವಕ್ಕೆ ಒಳಗಾಗಿ ಬದಲಾವಣೆ ಹೊಂದುತ್ತಾರೆ. ಫಲಾಪೇಕ್ಷೆಯನ್ನು ಹೊಂದದೆ ಕಾಯಕದಲ್ಲಿ ನಿರತರಾಗಬೇಕು. ನಿರೀಕ್ಷೆಯಿಲ್ಲದ ದುಡಿಮೆಯಲ್ಲಿ ಸುಖ, ಸಂತೋಷಗಳಿರುತ್ತವೆ ಎಂದು ಹೇಳಿದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಮಾನಸಿಕ ಒತ್ತಡಗಳಿಂದ ಹೊರಬರಲು ಇಂತಹ ಶಿಬಿರಗಳು ಸಹಕಾರಿಯಾಗಲಿವೆ. ಪೂರ್ವಜರು ಮೌಲ್ಯಾಧಾರಿತ ಜೀವನನ್ನು ನಡೆಸುತ್ತಿದ್ದರು. ಪ್ರಾಮಾಣಿಕವಾದ ಬದುಕನ್ನು ಸಾಗಿಸುತ್ತಿದ್ದರು. ಅಂಥ ಸಂಸ್ಕಾರಯುತ ಜೀವನ ನಮ್ಮದಾಗಬೇಕು ಎಂದು ತಿಳಿಸಿದರು.

ವಿಜಯ ಕರ್ನಾಟಕ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಸುದರ್ಶನ್ ಚನ್ನಂಗಿಹಳ್ಳಿಯವರು ಇಂದಿನ ಯುವಜನರು ಯಾವುದೇ ಗುರಿಯಿಲ್ಲದ ಜೀವನ ನಡೆಸುತ್ತಿದ್ದಾರೆ. ವೃಥಾ ಸಲ್ಲದ ಕೆಲಸಗಳಿಗೆ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಹಿರಿಯರು ಯುವಜನರಿಗೆ ಸರಿಯಾದ ಮಾರ್ಗದರ್ಶನ ನೀಡಿ ಸಂಸ್ಕಾರವಂತ ವ್ಯಕ್ತಿಗಳನ್ನಾಗಿ ರೂಪಿಸಬೇಕಿದೆ ಎಂದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ. ಮುತ್ತುರಾಜ್‌ರವರು ಜೆಎಸ್‌ಎಸ್ ಸಂಸ್ಥೆಯು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರೋಗ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆಯ ಕುಲಸಚಿವರಾದ ಶ್ರೀ ಟಿ. ರಾಮೇಗೌಡರು ಅವಿಭಕ್ತ ಕುಟುಂಬಗಳು ಇಂದು ಕಾಣೆಯಾಗಿವೆ. ಅದರಿಂದ ಮಕ್ಕಳಿಗೆ ಮನೆಗಳಲ್ಲಿ ಸರಿಯಾದ ಸಂಸ್ಕಾರ ದೊರೆಯತ್ತಿಲ್ಲ. ಗುರು ಹಿರಿಯರಿಗೆ ಗೌರವ ನೀಡುವ ಮನೋಭಾವನೆಯನ್ನು ಇಂದಿನ ಪೀಳಿಗೆ ಮರೆಯಬಾರದು ಎಂದು ಹೇಳಿದರು.

ಆಂಧ್ರಪ್ರದೇಶದ ಹಿಂದೂಪುರದ ರೇಷ್ಮೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಡಾ. ಜಗನ್ನಾಥ ರಾಜುರವರು ಬಿಳಿಗಿರಿರಂಗನಬೆಟ್ಟದಲ್ಲಿ ದೈವಿಕ ಶಕ್ತಿಯಿದೆ. ಸುಂದರವಾದ ಪ್ರಕೃತಿ ಸಂಪತನ್ನು ಹೊಂದಿದೆ. ಇಲ್ಲಿ ಶಿಬಿರ ನಡೆಯುತ್ತಿರುವುದು ಮನಸ್ಸಿಗೆ ಚೈತನ್ಯನವನ್ನು ಪಡೆಯಲು ಸಹಕಾರಿಯಾಗುತ್ತವೆ ಎಂದರು.

ನಿಸರ್ಗ ಚಿಕಿತ್ಸಾ ತಜ್ಞರಾದ ಡಾ. ಪೂರ್ವಿ ಜಯರಾಜ್‌ರವರು ಮನುಷ್ಯನು ಸಮಸ್ಯೆ ಹಾಗೂ ಆಂತರಿಕ ಸಮಸ್ಯೆಗಳಿಂದ ಹೊರಬರಲು ಆತನಲ್ಲಿರುವ ಧನಾತ್ಮಕ ನಂಬಿಕಯೇ ದಿವ್ಯೌಷಧ. ಶರೀರಕ್ಕೆ ಬರುವ ಕಾಯಿಲೆಗಳಲ್ಲಿ 80ರಷ್ಟು ನಕರಾತ್ಮಕ ಭಾವನೆಯಿಂದಲೇ ಬರುತ್ತವೆ. ನಕರಾತ್ಮಕ ಭಾವನೆಗಳು ಹತ್ತಿರಕ್ಕೆ ಸುಳಿಯದಂತೆ ನೋಡಿಕೊಳ್ಳಲು ಇಂತಹ ಶಿಬಿರಗಳು ಅವಶ್ಯಕ ಎಂದರು.

ಪ್ರಾಣಿಕ್ ಹೀಲಿಂಗ್ ತಜ್ಞರಾದ ಶ್ರೀ ಪಿ.ಆರ್. ರಾಹುಲ್ ಶ್ರೀವತ್ಸರವರು ಭೌತಿಕ ದೇಹದೊಳಗಿರುವ ಚೇತನವೇ ಆತ್ಮ. ವ್ಯಕ್ತಿಯ ಪ್ರಾಣಶಕ್ತಿಗೆ ಎಲ್ಲಾ ಪ್ರದೇಶದ ಪರಿಸರದ ಪ್ರಾಣಶಕ್ತಿ ಹೊಂದಿಕೆಯಾಗುವುದಿಲ್ಲ. ಹೊಂದಾಣಿಕೆ ಆಗದ ಸ್ಥಳದಲ್ಲಿ ಮನಸ್ಸು ಇರಲು ಇಚ್ಛಿಸುವುದಿಲ್ಲ. ಮನುಷ್ಯ ತಾನು ಮಾಡಿದ್ದನೇ ಮರಳಿ ಪಡೆಯುತ್ತಾನೆ. ಹಾಗಾಗಿ ಒಳಿತನ್ನೆ ಮಾಡುವುದನ್ನು ಕಲಿಯಬೇಕು ಎಂದರು.

ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ, ಧ್ಯಾನ ಹಾಗೂ ಸಂಜೆ ದೇಸಿ ಆಟಗಳಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ವಿದ್ಯಾ ಮಗದುಂ ಪ್ರಾರ್ಥಿಸಿದರು. ಶ್ರೀ ಎಸ್. ಪುಟ್ಟರಾಜು ಸ್ವಾಗತಿಸಿದರು. ಶ್ರೀ ಉಮೇಶ್ ವಂದಿಸಿದರು. ಶ್ರೀ ಎಚ್.ಎಂ. ನಾಗಭೂಷಣ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಮೈ.ಚ. ಜಯದೇವರವರು ನಿರ್ಮೋಹಿ ವ್ಯಕ್ತಿತ್ವದ ಅಪರೂಪದ ಪ್ರಚಾರಕರು

ಶ್ರೀ ಮೈ.ಚ. ಜಯದೇವರವರು ನಿರ್ಮೋಹಿ ವ್ಯಕ್ತಿತ್ವದ ಅಪರೂಪದ ಪ್ರಚಾರಕರು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 14ರಂದು ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಬಾಬು ಕೃಷ್ಣಮೂರ್ತಿ

ಮತ್ತು ಶ್ರೀ ಬೇಳೂರು ಸುದರ್ಶನರವರು ರಚಿಸಿರುವ 'ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು–ನೆನಪು' ಕೃತಿ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ಜಯದೇವರವರು ಅಧಿಕಾರ ಅಥವಾ ಪ್ರಚಾರಕ್ಕೆ ಎಂದೂ ಆಸೆಪಟ್ಟವರಲ್ಲ. ತಮಗಾಗಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮಗಳಿಂದಲೂ ದೂರ ಉಳಿದ ಹೃದಯ ಶ್ರೀಮಂತಿಕೆ ಅವರದು. ಮಂಡ್ಯದಲ್ಲಿದ್ದಾಗ ಯುವಕರನ್ನು ಸಂಘದ ಚಟುವಟಿಕೆಗಳಿಗೆ ಪ್ರೇರೇಪಿಸುತ್ತಿದ್ದರು. ಶ್ರೀ ಬಿ.ಎಸ್. ಯಡಿಯೂರಪ್ಪನವರು ಒಮ್ಮೆ ಸಂಘದ ಕಾರ್ಯಕ್ರಮಕ್ಕೆ ಬರದಿದ್ದಾಗ, ಬೂಕನಕೆರೆಗೆ ಸೈಕಲ್‌ನಲ್ಲಿ ಹೋಗಿ ಅವರನ್ನು ವಿಚಾರಿಸಿಕೊಂಡು ಬಂದು, ಅವರನ್ನು ಪೂರ್ಣಾವಧಿ ಕಾರ್ಯಕರ್ತರನ್ನಾಗಿ ಮಾಡುವಲ್ಲಿ ಜಯದೇವರವರು ಪ್ರಮುಖ ಪಾತ್ರ ವಹಿಸಿದ್ದರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಭೂಗತರಾಗಿದ್ದರೂ, ಸೆರೆಮನೆಯಲ್ಲಿದ್ದ ಕಾರ್ಯಕರ್ತರಿಗೆ ಆತ್ಮಸ್ಥೈರ್ಯ ತುಂಬಲು ತಾವೇ ಸ್ವತಃ ಬಂಧನಕ್ಕೊಳಗಾಗಿದ್ದರು. ಅನಾರೋಗ್ಯದ ಸಂದರ್ಭದಲ್ಲಿ ಇತರರು ನೀಡಿದ ಚಿಕಿತ್ಸಾ ನೆರವನ್ನು ನಿರಾಕರಿಸಿ, ಸಂಘವೇ ನನ್ನ ಪಾಲಿಗೆ ಎಲ್ಲವೂ ಎಂದು ಘೋಷಿಸಿದ ಅವರ ಧೀಮಂತ ವ್ಯಕ್ತಿತ್ವ ಇಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಮೈ.ಚ. ಜಯದೇವ ಅವರು ಸಂಸ್ಥೆಗಳ ನಿರ್ಮಾತೃ ಆಗಿದ್ದರು. ಸಂಸ್ಥೆಗಳನ್ನು ಸ್ಥಾಪಿಸುವುದು ಮಾತ್ರವಲ್ಲದೆ, ಆ ಸಂಸ್ಥೆಗಳ ಆದರ್ಶ ಮತ್ತು ನಡವಳಿಕೆಗಳು ಸಮಾಜಕ್ಕೆ ಪೂರಕವಾಗಿರುವಂತೆ ರೂಪಿಸುವುದರಲ್ಲಿ ಮಹೋನ್ನತ ಪಾತ್ರ ವಹಿಸಿದ್ದರು. ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ಸಂಸ್ಥೆ ಹಾಗೂ ಅಬಲಾಶ್ರಮದಂತಹ ಹತ್ತಾರು ಹಳೆಯ ಮತ್ತು ಪ್ರಖ್ಯಾತ ಸಂಸ್ಥೆಗಳಿಗೆ ಅವರು ಮಾರ್ಗದರ್ಶಕರಾಗಿ, ಪ್ರೇರಕರಾಗಿ ಕೆಲಸ ಮಾಡಿದ್ದರು. ರಾಷ್ಟ್ರೋತ್ಥಾನ ಪರಿಷತ್ತಿನ ಆರಂಭಿಕ ದಿನಗಳಲ್ಲಿ ಅದರ ಜವಾಬ್ದಾರಿ ಹೊತ್ತು, ಅದನ್ನು ಸಾಹಿತ್ಯ ಮತ್ತು ಸೇವಾ ಕ್ಷೇತ್ರದ ಪ್ರಮುಖ ಕೇಂದ್ರವನ್ನಾಗಿ ಬೆಳೆಸುವಲ್ಲಿ ಜಯದೇವರವರ ಶ್ರಮ ಅಪಾರವಾದದ್ದು. ಅವರು ಕೇವಲ ಕಟ್ಟಡಗಳನ್ನು ಕಟ್ಟಲಿಲ್ಲ, ಬದಲಿಗೆ ಸಂಸ್ಥೆಗಳನ್ನು ಮುನ್ನಡೆಸಬಲ್ಲ ಸಮರ್ಥ ವ್ಯಕ್ತಿಗಳನ್ನು ತಯಾರು ಮಾಡಿದ್ದರು. ಸಾರ್ವಜನಿಕ ಜೀವನದಲ್ಲಿ ನಡೆ–ನುಡಿ ಹೇಗಿರಬೇಕು ಎಂಬುದಕ್ಕೆ ಅವರೇ ಒಂದು ಮಾದರಿಯಾಗಿದ್ದರು. ಸಮಾಜದಲ್ಲಿ ಸಮನ್ವಯ ಮತ್ತು ಸಾಮರಸ್ಯ ಮೂಡಿಸಲು ಹಾಕಿಕೊಂಡ ಯೋಜನೆಗಳು, ಅವರ ಕಳಕಳಿ ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ್, ವಿಧಾನಪರಿಷತ್

ಪ್ರತಿಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಮೊದಲಾದವರು ಉಪಸ್ಥಿತರಿದ್ದರು.

ಜನತೆಯ ಮನಸಿನಲ್ಲಿ ಶಾಶ್ವತವಾಗಿರುವವನೇ ನಾಯಕ

ಉತ್ತಮ ಕೆಲಸ ಕಾರ್ಯಗಳ ಮೂಲಕ ಜನತೆಯ ಮನಸಿನಲ್ಲಿ ಶಾಶ್ವತವಾಗಿರುವವನೇ ನಿಜವಾದ ನಾಯಕ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 21ರಂದು ವಿಜಯಪುರದಲ್ಲಿ ಮಾಜಿ ಶಾಸಕರಾದ ಶ್ರೀ ಆರ್.ಆರ್. ಕಲ್ಲೂರ ಹಾಗೂ ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರರವರ 5ನೇ ಪುಣ್ಯಸ್ಮರಣೆ, ಮೂರ್ತಿ ಅನಾವರಣ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕಲ್ಲೂರರವರು ಭೌತಿಕವಾಗಿ ಇಲ್ಲದಿದ್ದರೂ ಎಲ್ಲರ ಮನಸ್ಸಿನಲ್ಲಿಯೂ ಶಾಶ್ವತರಾಗಿ ನೆಲೆಸಿದ್ದಾರೆ ಎಂಬುದಕ್ಕೆ ಇಲ್ಲಿ ಸೇರಿರುವ ಜನಮಸ್ತೋಮವೇ ಸಾಕ್ಷಿಯಾಗಿದೆ. ಅತ್ಯಂತ ಸರಳವಾಗಿ ಜೀವಿಸಿ ಜನರಿಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಶಿಕ್ಷಣ, ಸಹಕಾರಿ, ಸಾಮಾಜಿಕ ಸೇವೆಯಲ್ಲಿ ಅನನ್ಯ ಕೊಡುಗೆ ನೀಡಿದ್ದಾರೆ. ಗ್ರಾಮೀಣ ಭಾಗದ ಮಕ್ಕಳಿಗಾಗಿ ಶಾಲಾ, ಕಾಲೇಜುಗಳನ್ನು ಸ್ಥಾಪಿಸಿದರು. ರೈತರಿಗಾಗಿ ವಿದ್ಯುತ್ ಸ್ಟೇಶನ್‌ಗಳನ್ನು ಸ್ಥಾಪಿಸಿದರು ಎಂದರು.

ಇಳಕಲ್ ಶ್ರೀ ವಿಜಯಮಹಾಂತ ಸಂಸ್ಥಾನ ಮಠದ ಶ್ರೀ ಗುರುಬಸವ ಮಹಾಂತ ಸ್ವಾಮಿಗಳು ಶ್ರೀ ರೇವಣಸಿದ್ದಪ್ಪ ಕಲ್ಲೂರರವರು ಅತ್ಯಂತ ಸ್ಮರಣೀಯರು. ಮಗುವಿನಂತಹ ಮನಸ್ಸಿನವರು. ನೂರಾರು ವರ್ಷಗಳು ಕಳೆದರೂ ಅವರು ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಉಳಿಯಲಿದ್ದಾರೆ. ಸದ್ಗುಣ, ದಾಸೋಹಭಾವ ಹೊಂದಿದ್ದ ಕಲ್ಲೂರರವರಿಗೆ ಧರ್ಮಪತ್ನಿ ಶ್ರೀಮತಿ ಮೀನಾಕ್ಷಿ ಕಲ್ಲೂರರವರು ಬೆಂಬಲ ನೀಡಿದ್ದರು ಎಂದರು.

ವನಶ್ರೀ ಸಂಸ್ಥಾನ ಮಠ, ಶ್ರೀ ಮಹಾಯೋಗಿ ವೇಮನ ಸಂಸ್ಥಾನಮಠ, ಜ್ಞಾನಯೋಗಾಶ್ರಮದ ಶ್ರೀ ಬಸವಲಿಂಗ ಸ್ವಾಮಿಗಳು, ಮುಕ್ತಿ ಮಂದಿರದ ಮಾತೋಶ್ರೀ ಸುಗಲಾದೇವಿ ಅಮ್ಮನವರು, ಸಂಸದರು ಹಾಗೂ ಮಾಜಿ ಸಚಿವರಾದ ಶ್ರೀ ರಮೇಶ ಜಿಗಜಿಣಗಿ, ಶಾಸಕರಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಯಶವಂತರಾಯಗೌಡ ಪಾಟೀಲ, ಶ್ರೀ ಅಜಯ ಸಿಂಗ್, ಸಂಸದರಾದ ಶ್ರೀ ಪಿ.ಸಿ. ಗದ್ದಿಗೌಡರ, ಮಾಜಿ ಸಚಿವರಾದ ಶ್ರೀ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಶ್ರೀ ಎಸ್. ಕೆ. ಬೆಳ್ಳುಬ್ಬಿ, ಮಾಜಿ ಶಾಸಕರಾದ ಶ್ರೀ ರಮೇಶ ಭೂಸನೂರ, ಶ್ರೀ ಅರುಣ ಶಹಾಪುರ, ಶ್ರೀ ಜಿ.ಎಸ್. ನ್ಯಾಮಗೌಡರ, ಶ್ರೀ ಆನಂದ ನ್ಯಾಮಗೌಡರ, ಕಲ್ಲೂರ ಕುಟುಂಬಸ್ಥರಾದ ಡಾ. ಮಲ್ಲಿಕಾರ್ಜುನ ಕಲ್ಲೂರ, ಡಾ. ಸುನೀಲ ಕಲ್ಲೂರ, ಶ್ರೀ ರವಿ ಕಲ್ಲೂರ ಮೊದಲಾದವರು ಉಪಸ್ಥಿತರಿದ್ದರು.

ಜ್ಞಾನ ಮತ್ತು ಕೌಶಲದಿಂದ ಉನ್ನತ ಸ್ಥಾನ ಸಾಧ್ಯ

ಜ್ಞಾನ ಮತ್ತು ಕೌಶಲದಿಂದ ಉನ್ನತ ಸ್ಥಾನ ದೊರೆಯಲು ಸಾಧ್ಯ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಗಿರೀಶ್ ಸಿ. ಹೊಸೂರ್‌ರವರು ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮೇ 23ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ 18ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಶ್ರೀಮಠವು ಬಸವಣ್ಣನವರ ಆಶಯದಂತೆ ಸಮಾಜದ ಎಲ್ಲಾ ವರ್ಗದವರಿಗೆ ಅನ್ನ, ಅಕ್ಷರ, ಆರೋಗ್ಯವನ್ನು ನೀಡುತ್ತಿದೆ. ನೂತನ ಪದವೀಧರರನ್ನು ಅಭಿನಂದಿಸಿ ಕಾಲೇಜಿನ ಧ್ಯೇಯೋದ್ದೇಶದಂತೆ ವಿದ್ಯಾರ್ಥಿನಿಯರು ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದರು.

2024–25ನೇ ಶೈಕ್ಷಣಿಕ ಸಾಲಿನಲ್ಲಿ 450 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ ಬೆಟಸೂರಮಠರವರು ನೂತನ ಪದವೀಧರರಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಪದವೀಧರರಾದ ಕು. ವಿ. ವಿದ್ಯಾ, ಕು. ಎಸ್. ಶಾರದಾ, ಕು. ಪಿ.ಎಂ. ಋಷಿ, ಕು. ಹೆಚ್.ಎನ್. ಅಪೂರ್ವರವರು ಅನಿಸಿಕೆಗಳನ್ನು ಹಂಚಿಕೊಂಡರು. ಪ್ರೊ. ಸಿ. ನಾಗಣ್ಣ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಎಂ.ಎಂ. ಸ್ವಾಮಿಯವರುಗಳು ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಡಾ. ರೇಚಣ್ಣ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಕು. ನಿಖಿತಾ ಭಟ್ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಜ್ಞಾನ ವಿಜ್ಞಾನಗಳ ಸಮ್ಮಿಲನದ ತಾಣ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜ್ಞಾನ ಮತ್ತು ವಿಜ್ಞಾನದ ಸಮ್ಮಿಲನವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 24ರಂದು ಮೈಸೂರು ಶ್ರೀ ಅವಧೂತ ದತ್ತ ಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳ 84ನೇ ಜನ್ಮದಿನೋತ್ಸವ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಯಾವುದನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲವೋ ಅದನ್ನು ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವಿವರಿಸಿದ್ದಾರೆ. ನಮ್ಮ ದೇಶ ಸಾವಿರಾರು ವರ್ಷಗಳ ಭವ್ಯ ಇತಿಹಾಸವನ್ನು ಹೊಂದಿದೆ. ಇವತ್ತು ಜಗತ್ತಿನಲ್ಲಿ ಕಾಣುವ ಎಲ್ಲಾ ಸಂಶೋಧನೆಗಳು ಹಾಗೂ ಆವಿಷ್ಕಾರಗಳನ್ನು ಸಾವಿರಾರು ವರ್ಷಗಳ ಹಿಂದೆ ತಮ್ಮ ದಿವ್ಯಜ್ಞಾನದಿಂದ ತಿಳಿದು

ಜಗತ್ತಿಗೆ ಅಪೂರ್ವವಾದ ಕೊಡುಗೆಯನ್ನು ಕೊಟ್ಟವರು ಭಾರತೀಯ ಋಷಿಮುನಿಗಳು. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡಬೇಕಾದ ಸಂಗತಿ. ಯಾವುದೇ ಉಪಕರಣಗಳು, ಸೂಕ್ಷ್ಮದರ್ಶಕಗಳು ಇಲ್ಲದಿದ್ದಾಗಲೂ ಕೇವಲ ಅಂತಃದೃಷ್ಟಿಯಿಂದ ಜಗತ್ತಿನ ಎಲ್ಲಾ ಸತ್ಯಗಳನ್ನು ಗುರುತಿಸಲು ಸಾಧ್ಯವಿದೆ ಎನ್ನುವುದನ್ನು ಭಾರತೀಯರು ಜಗತ್ತಿಗೆ ತೋರಿಸಿ ಕೊಟ್ಟಿರುವುದು ಅಪೂರ್ವ ಕೊಡುಗೆಯಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ "ದತ್ತಾವತಾರಿ ಮುಕ್ತಕ ಪಿಯೂಷ" ಮತ್ತು "ಸೀಕ್ರೆಟ್ ಫಾರ್ ಸಕ್ಸಸ್" ಇಂಗ್ಲಿಷ್ ಪುಸ್ತಕದ ತಮಿಳು ಅನುವಾದದ ಪುಸ್ತಕಗಳನ್ನು ಬಿಡುಗಡೆ ಗೊಳಿಸಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು ಆಶೀರ್ವಚನ ನೀಡಿದರು.

ಸದಾ ಸಾರ್ವಜನಿಕರ ಕಷ್ಟ ಸುಖದಲ್ಲಿ ಭಾಗಿಯಾಗುವವರೇ ನಿಜವಾದ ಜನಪ್ರತಿನಿಧಿ

ಸದಾ ಸಾರ್ವಜನಿಕರ ಕಷ್ಟ ಸುಖದಲ್ಲಿ ಭಾಗಿಯಾಗುವವರೇ ನಿಜವಾದ ಜನಪ್ರತಿನಿಧಿಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ಮೇ 24ರಂದು ಮೈಸೂರು ರವಿತೇಜ ಕಲ್ಯಾಣ ಮಂಟಪದಲ್ಲಿ ಶ್ರೀ ಕೆ.ವಿ. ಮಲ್ಲೇಶ್‌ರವರ 60ನೇ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿದ್ದ ಜನಸೇವಕನ ಜನ್ಮದಿನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಅವರ ತಂದೆಯವರು ಮತ್ತು ಅಣ್ಣನವರ ಮಾರ್ಗದರ್ಶನದಲ್ಲಿ ಸುಸಂಸ್ಕೃತ ವ್ಯಕ್ತಿತ್ವ ಬೆಳೆಸಿಕೊಂಡಿರುವ ಕೆ.ವಿ. ಮಲ್ಲೇಶ್‌ರವರೊಬ್ಬ ಸರಳ, ಸಜ್ಜನಿಕೆಯ ರಾಜಕಾರಣಿಗಳು. ಎಲ್ಲರೊಂದಿಗೆ ಪ್ರೀತಿ, ವಿಶ್ವಾಸದಿಂದಿರುವ ಗುಣ ಹೊಂದಿದ್ದಾರೆ. ಮಾಡಿದೆನೆಂಬುದು ಮನದಲಿ ಹೊಳೆದಡೆ, ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನ್ನೆನ್ನದಿರಾ ಲಿಂಗಕ್ಕೆ, ಮಾಡಿದೆನ್ನೆನ್ನದಿರಾ ಜಂಗಮಕ್ಕೆ, ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ ಬೇಡಿತ್ತನೀವನು, ಕೂಡಲಸಂಗಮದೇವ' ಎಂಬಂತೆ ವಿನಯಶೀಲತೆ ಯಿಂದ ಬದುಕು ನಡೆಸುತ್ತಿದ್ದಾರೆ ಎಂದು ಹೇಳಿದರು.

ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಎಚ್.ವಿ. ರಾಜೀವ್, ಶ್ರೀ ಕೆ.ಸಿ. ಶಿವಪ್ಪ, ಶಾಸಕರಾದ ಶ್ರೀ ಜಿ.ಡಿ. ಹರೀಶ್‌ಗೌಡ, ಮಾಜಿ ಶಾಸಕರುಗಳಾದ ಶ್ರೀ ತೋಂಟದಾರ್ಯ, ಶ್ರೀ ಎಲ್. ನಾಗೇಂದ್ರ, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ವಿ. ಶ್ರೀಧರ್ ಮೊದಲಾದವರು ಉಪಸ್ಥಿತರಿದ್ದರು.

□

ಪ್ರಸಾದ



ಕೃತಿ–ಸ್ವೀಕೃತಿ

ಭಗವಾನ್ ಬುದ್ಧರ ಸಂದೇಶ (ಶ್ರೀ ಶಿವಕುಮಾರ ಮಹಾಸ್ವಾಮಿಗಳ ದಿನಕ್ಕೊಂದು ಶ್ರೀವಾಣಿ)
ಶ್ರೀ ತುಲಸಿರಾಮಯ್ಯ
ಪ್ರ: ತುಲಸಿರಾಮಯ್ಯ ಪಬ್ಲಿಕೇಷನ್
ಮಹಾಲಕ್ಷ್ಮಿ ಲೇಔಟ್, ಬೆಂಗಳೂರು
ಪು : 284, ಬೆಲೆ : 200/–

ಆಕಾಶಗಂಗೆಯಲ್ಲಿ (ಆಕಾಶವಾಣಿ ಲೇಖನಗಳು)
ಡಾ. ಜಿ.ಎಸ್. ಅಶೋಕ
ಪ್ರ: ಮಧು ಪಬ್ಲಿಕೇಷನ್ ಅಂಡ್ ಎಂಟರ್
ಪ್ರೈಸಸ್, ಬನ್ನಿಕುಪ್ಪೆ
ರಾಮನಗರ ತಾ. ಮತ್ತು ಜಿ
ಪು : 144, ಬೆಲೆ : 120/–

ಜಿ.ಎಸ್. ಶಿವರುದ್ರಪ್ಪ
ಡಾ. ಜಿ.ಎಸ್. ಅಶೋಕ
ಪ್ರ: ಸಿರಿಗನ್ನಡ ಪುಸ್ತಕಮನೆ
ಮಧುರ ಪ್ಯಾರಡೈಸ್, ಶಿವಮೊಗ್ಗ
ಪು : 88, ಬೆಲೆ : 80/–

ಭಾವ ಸಮನ್ವಯ
ಡಾ. ಜಿ.ಎಸ್. ಅಶೋಕ
ಪ್ರ: ಮಧು ಪಬ್ಲಿಕೇಷನ್ ಅಂಡ್ ಎಂಟರ್
ಪ್ರೈಸಸ್, ಬನ್ನಿಕುಪ್ಪೆ
ರಾಮನಗರ ತಾ. ಮತ್ತು ಜಿ
ಪು : 354, ಬೆಲೆ : 300/–

ವೀರಶೈವ ಸಿದ್ಧಾಂತ, ಜೈನದರ್ಶನದ ತೌಲನಿಕ ಅಧ್ಯಯನ
ಡಾ. ಸಿ. ರೇಣುಕಾರಾಧ್ಯ
ಪ್ರ: ಗುರುಬಸವ ಅಧ್ಯಯನ ಪೀಠ
ಶ್ರೀ ಬೆಕ್ಕಿನ ಕಲ್ಮಠ, ಶಿವಮೊಗ್ಗ
ಪು : 252, ಬೆಲೆ : 260/–

ಪುನಶ್ಚೇತನ
(ಮಿಮರ್ಶಾ ಲೇಖನಗಳ ಸಂಗ್ರಹ)
ಸಂ. ಪ್ರೊ. ನೀಲಗಿರಿ ತಳವಾರ
ಪ್ರ : ಅಲ್ಲಮಪ್ರಭು ಸಂಶೋಧನಾ ಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ
ಗ್ರಂಥಮಾಲೆ
ಬಸವಕೇಂದ್ರ
ಚಿತ್ರದುರ್ಗ
ಪು : 370, ಬೆಲೆ : 400/–

ತೋಂಟದಾರ್ಯ ಪರಂಪರೆಯ ವಚನ ಸಂಕಲನ ಸಾಹಿತ್ಯ
ಡಾ. ಎ. ನಾಗರಾಜಪ್ಪ
ಪ್ರ: ಶ್ರೀ ಅನ್ನಪೂರ್ಣ ಪಬ್ಲಿಷರ್ಸ್ ಅಂಡ್
ಡಿಸ್ಟ್ರಿಬ್ಯೂಟರ್ಸ್
ನೆಲಮಂಗಲ ತಾ.
ಬೆಂಗಳೂರು
ಪು : 367, ಬೆಲೆ : 300/–

ಷೋಡಶೋಪಚಾರ ಸಹಿತ ಶಿವಪೂಜಾ ವಿಧಿಃ
ಡಾ. ಸಿ. ರೇಣುಕಾರಾಧ್ಯ
ಪ್ರ: ಕಾವ್ಯಶ್ರೀ ಪ್ರಕಾಶನ
ಸಿದ್ಧೇಶ್ವರ ನಗರ
ಶಿವಮೊಗ್ಗ
ಪು : 60, ಬೆಲೆ : 80/–

ಡಾ. ಜಿ.ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿಯವರ ಕಾವ್ಯದಲ್ಲಿನ ಕಾವ್ಯಮೀಮಾಂಸೆ ಮತ್ತು ತೌಲನಿಕ ವಿವೇಚನೆ
ಡಾ. ಜಿ.ಎಸ್. ಅಶೋಕ
ಪ್ರ: ಸಿದ್ದು ಪ್ರಕಾಶನ
ಅಂಕನಹಳ್ಳಿ
ರಾಮನಗರ ತಾ. ಮತ್ತು ಜಿ.
ಪು : 120, ಬೆಲೆ : 150/–

ಲೇಖಕರ ವಿಳಾಸ

ಶ್ರೀ ಪ್ರಕಾಶ ಗಿರಿಮಲ್ಲನವರ
ಐ.ಟಿ.ಐ. ಕಾಲೇಜು
ಶಿವಬಸವನಗರ
ಬೆಳಗಾವಿ 590 010
ಮೊ: 99021 30041

ಡಾ. ಎನ್.ಎಂ. ಗಿರಿಜಾಪತಿ
#303, ಮೂರನೇ ಮಹಡಿ
1ನೇ ಕ್ರಾಸ್, ಅಗರ ಗ್ರಾಮ
ಹೆಚ್ಎಸ್ಆರ್ ಲೇಔಟ್
ಬೆಂಗಳೂರು 560 102
ಮೊ: 98445 82238

ಶ್ರೀ ಸಿ.ಎಸ್. ರಾಘವೇಂದ್ರ
ಕನ್ನಡ ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲೆ
ಯಾದವಗಿರಿ, ಮೈಸೂರು
ಮೊ: 99021 30041

ಶ್ರೀ ನಗರ್ಲೆ ಶಿವಕುಮಾರ
ಬಿನ್ ಲೇ. ರಾಜಶೇಖರ
ನಗರ್ಲೆ ಗ್ರಾಮ & ಅಂಚೆ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 98456 09652

ನಾನು ಬಂದ ಕಾರ್ಯಕ್ಕೆ ನೀವು ಬಂದರಯ್ಯಾ!
ನೀವು ಬಂದ ಕಾರ್ಯಕ್ಕೆ ನಾನು ಬಂದೆನಯ್ಯಾ!
ನಾನು, ನೀವು ಬಂದ ಕಾರ್ಯಕ್ಕೆ
ಪ್ರಭುದೇವರು ಬಂದರಯ್ಯಾ!
ಕಲ್ಯಾಣವೆಂಬುದು ಪ್ರಣತೆಯಾಗಿತ್ತು
ನಾನು ತೈಲವಾದೇನು, ನೀವು ಬತ್ತಿಯಾದಿರಿ
ಪ್ರಭುದೇವರು ಜ್ಯೋತಿಯಾದರು!
ಪ್ರಣತೆ ಹೊಡೆದಿತ್ತು, ತೈಲ ಚೆಲ್ಲಿತ್ತು
ಬತ್ತಿ ಬಿದ್ದಿತ್ತಯ್ಯಾ, ಜ್ಯೋತಿ ನಂದಿತ್ತಯ್ಯಾ!
ನಮ್ಮ ಕೂಡಲ ಸಂಗಮ ಶರಣರ ಮನ ನೊಂದಿತ್ತಯ್ಯಾ!

ಬಸವೇಶ್ವರರು

ಹಿಂಬದಿ ಪುಟದ ಚಿತ್ರ

ಮೈಸೂರು ಶ್ರೀ ಅವಧೂತ ದತ್ತ ಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳವರನ್ನು ಅವರ 84ನೇ ಜನ್ಮದಿನದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಗೌರವಿಸಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು ಹಾಗೂ ಶ್ರೀ ಹೆಚ್.ವಿ. ಪ್ರಸಾದ್‌ರವರುಗಳಿದ್ದಾರೆ (24 ಮೇ 2026)



ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಪರಮಪೂಜ್ಯ ಜಗದ್ಗುರುಗಳು, ರಂಭಾಪುರಿ ಜಗದ್ಗುರುಗಳು ಸೇರಿದಂತೆ ಹಲವಾರು ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರದ ಗೃಹ ಸಚಿವರಾದ ಶ್ರೀ ಅಮಿತ್ ಷಾರವರು ಸನ್ಮಾನಿಸಿದರು. ಶ್ರೀ ಪ್ರಹ್ಲಾದ್ ಜೋಷಿ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ವಚನಾನಂದ ಸ್ವಾಮಿಗಳು, ಶ್ರೀ ಬಿ.ವೈ. ರಾಘವೇಂದ್ರ, ಶ್ರೀ ಬಿ.ವೈ ವಿಜಯೇಂದ್ರ, ಶ್ರೀ ಗೋವಿಂದ ಕಾರಜೋಳ, ಶ್ರೀ ಬಿ. ಶ್ರೀರಾಮುಲು, ಡಾ. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿಗಳು, ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಮೊದಲಾದವರುಗಳಿದ್ದಾರೆ (9 ಮೇ 2026)



ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯದಲ್ಲಿ ಊಟಿಯ ತೀಟಕಲ್‌ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ 'ಶರಣರಿನ್ ನೂಟ್ರಿಯೊರು ವಸನಂಗಳ್' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಸ್. ಪ್ರಕಾಶಂರವರು ಬಿಡುಗಡೆಗೊಳಿಸಿದರು. ಡಾ. ಪಿ. ಮಣಿ, ಡಾ. ಜಯಲಲಿತಾ, ಶ್ರೀ ರವೀಂದ್ರ ಭಟ್, ಶ್ರೀ ವೆಂಕಟರೆಡ್ಡಿ ಡಿ. ಪಾಟೀಲ್ ಹಾಗೂ ಹರವೆ ಶ್ರೀಗಳನ್ನು ಕಾಣಬಹುದು (11 ಮೇ 2026)



ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಜೀವನೋತ್ಸಾಹ ಶಿಬಿರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಉದ್ಘಾಟಿಸಿದರು. ಶ್ರೀ ಜಗನ್ನಾಥ ರಾಜು, ಶ್ರೀ ಟಿ. ರಾಮೇಗೌಡ ಹಾಗು ಶ್ರೀ ಸುದರ್ಶನ್ ಚನ್ನಂಗಿಹಳ್ಳಿ, ಸಂಚಾಲಕರುಗಳು ಹಾಗೂ ಶಿಬಿರಾರ್ಥಿಗಳಿದ್ದಾರೆ (14 ಮೇ 2026)



ವಿಜಯಪುರದಲ್ಲಿ ಶ್ರೀ ಆರ್.ಆರ್. ಕಲ್ಲೂರ ಹಾಗೂ ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರರವರ 5ನೇ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಪ್ರತಿಮೆಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅನಾವರಣಗೊಳಿಸಲಾಯಿತು. ಶ್ರೀ ಯಶವಂತರಾಯಗೌಡ ಪಾಟೀಲ್, ಶ್ರೀ ಅಜಯ್ ಧರ್ಮಸಿಂಗ್, ಶ್ರೀ ಪಿ.ಸಿ. ಗದ್ದಿಗೌಡರ್, ವನಶ್ರೀ ಸಂಸ್ಥಾನ ಮಠದ ಶ್ರೀಗಳು ಹಾಗೂ ಮುಕ್ತಿ ಮಂದಿರದ ಮಾತೋಶ್ರೀ ಸುಗಲಾದೇವಿ ಅಮ್ಮನವರು ಹಾಗೂ ಕಲ್ಲೂರ ಕುಟುಂಬದ ಸದಸ್ಯರುಗಳಿದ್ದಾರೆ (21 ಮೇ 2026)



ಮೈಸೂರು ಜೆಎಸ್ಎಸ್ ಮಹಿಳಾ ಕಾಲೇಜಿನ 18ನೇ ಪದವೀಧರರ ದಿನಾಚರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ನೆರವೇರಿತು. ಡಾ. ಸಿ. ನಾಗಣ್ಣ, ಡಾ. ರೇಚಣ್ಣ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಗಿರೀಶ್ ಸಿ. ಹೊಸೂರ್, ಶ್ರೀ ಎಂ.ಎಂ. ಸ್ವಾಮಿ ಹಾಗೂ ಪ್ರೊ. ಮೊರಬದ ಮಲ್ಲಿಕಾರ್ಜುನರವರುಗಳುಹಾಗೂ ಪದಕ ಪುರಸ್ಕೃತ ಪದವೀಧರರುಗಳಿದ್ದಾರೆ (23 ಮೇ 2026)



ಮೈಸೂರು ರವಿತೇಜ ಕಲ್ಯಾಣ ಮಂಟಪದಲ್ಲಿ ಶ್ರೀ ಕೆ.ವಿ. ಮಲ್ಲೇಶ್‌ರವರನ್ನು ಅವರ 60ನೇ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿದ್ದ ಜನಸೇವಕನ ಜನ್ಮದಿನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಎ.ಪಿ. ವಿರೂಪಾಕ್ಷ ಹಾಗೂ ಶ್ರೀ ಹೆಚ್.ವಿ. ರಾಜೀವ್‌ರವರುಗಳಿದ್ದಾರೆ (22 ಮೇ 2026)



ಜೆಎಸ್ಎಸ್ ಸಂಗೀತ ಸಭಾ ಟ್ರಸ್ಟಿನಿಂದ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೈಗಾರಿಕೋದ್ಯಮಿಗಳಾದ ಡಾ. ಎಂ. ಜಗನ್ನಾಥ್ ಶೆಣೈರವರು ಉದ್ಘಾಟಿಸಿದರು. ಡಾ. ಪೂರ್ಣಿಮಾ ಕೃಷ್ಣಮೂರ್ತಿ, ಶ್ರೀ ಮೈಸೂರು ಎಂ. ನಾಗರಾಜ್, ಡಾ. ಮೈಸೂರು ಎಂ. ಮಂಜುನಾಥ್, ಶ್ರೀ ವಿ. ರಘುನಂದನ್, ಡಾ. ಕೆ. ಅನಂತರಾಮು, ಪ್ರೊ. ಕೆ. ರಾಮಮೂರ್ತಿರಾವ್, ಶ್ರೀ ತುಮಕೂರು ಬಿ. ರವಿಶಂಕರ್, ಡಾ. ಸಿ.ಜಿ. ಬೆಟಸೂರಮಠ ಮತ್ತು ಶ್ರೀ ಟಿ.ಪಿ. ಪ್ರಭುಸ್ವಾಮಿಯವರುಗಳಿದ್ದಾರೆ (22 ಮೇ 2026)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 292ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಅರ್ಚನಾ ಎಲ್. ರಾವ್‌ರವರು ಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಸುನಿಲ್ ಸುಬ್ರಹ್ಮಣ್ಯಂ, ವಿದ್ವಾನ್ ರಾಜಾಪುರಂ ಆರ್. ಕಾರ್ತಿಕ್ ಹಾಗೂ ವಿದುಷಿ ಸಿ.ವಿ. ಶ್ರುತಿಯವರುಗಳಿದ್ದಾರೆ (31 ಮೇ 2026)



ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನಿಂದ ಪ್ರಕಟಿಸಿದ 'ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಡಾ. ಬಾಬು ಕೃಷ್ಣಮೂರ್ತಿ, ಶ್ರೀ ದತ್ತಾತ್ರೇಯ ಹೊಸಬಾಳೆ, ಶ್ರೀ ಎಂ.ಪಿ. ಕುಮಾರ್ ಮತ್ತು ಶ್ರೀ ಬೇಳೂರು ಸುದರ್ಶನರವರುಗಳಿದ್ದಾರೆ (14 ಮೇ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 5, May 2026



ISSN 2583-7648

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org